ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 21 ಶನಿವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 35 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4





ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್‌ರಿಂದ

ಸಿಎಫ್‌ಟಿಆರ್‌ಐ ತಂತ್ರಜ್ಞಾನ ಆಧರಿತ ಆಹಾರ ಉತ್ಪನ್ನಗಳ ಬಿಡುಗಡೆ



ಮೈಸೂರಿನಲ್ಲಿ ಸಿಎಫ್‌ಟಿಆರ್‌ಐ ತಂತ್ರಜ್ಞಾನ ಆಧರಿತ ನೂತನ 3 ಬಗೆಯ ಆಹಾರ ಉತ್ಪನ್ನಗಳನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ಶುಕ್ರವಾರ ಬಿಡುಗಡೆ ಮಾಡಿದರು.

ಮೈಸೂರು, ಮೇ 20 (ಆರ್‌ಕೆ)- ಮೈಸೂರಿನ ಸಿಎಫ್‌ಟಿಆರ್‌ಐ ತಂತ್ರಜ್ಞಾನ ಆಧರಿತ ನೂತನ 3 ಬಗೆಯ ಆಹಾರ ಉತ್ಪನ್ನಗಳನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ಇಂದು ಬಿಡುಗಡೆ ಮಾಡಿದರು.

ಟೆಕ್ ಭಾರತ್-2022 ಕೃಷಿ ಮತ್ತು ಆಹಾರ ತಂತ್ರಜ್ಞಾನ ಮೇಳದ ಅಂಗವಾಗಿ ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಎರಡನೇ ದಿನದ ಮೊದಲ ಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಚಿವರು ಸಂಸ್ಥೆ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಬಳಸಿ ತಯಾರಿಸಿರುವ ಮಿನಿ ಇಡ್ಲಿ, ಕಟ್ ಫ್ರೂಟ್ಸ್ ಹಾಗೂ ಮಾಲ್ಟೆಡ್ ರಾಗಿ ಮಿಕ್ಸ್ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು. ಅತೀ ಕಡಿಮೆ ಅವಧಿಯಲ್ಲಿ ಸುಲಭವಾಗಿ ತಯಾರಿಸಬಹುದಾದ ಆಹಾರ ಪದಾರ್ಥಗಳು ಆರೋಗ್ಯಕರವಾಗಿದ್ದು, ಈ ತಂತ್ರಜ್ಞಾನವನ್ನು ಸಾಮಾನ್ಯರಿಗೂ ತಲುಪಿಸುವ ಉದ್ದೇಶದಿಂದ ಸಂಶೋಧನೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರಲ್ಲದೇ, ಕೃಷಿ, ಆಹಾರ ತಂತ್ರಜ್ಞಾನಗಳು ಸಮಾಜದ ಎಲ್ಲ ವರ್ಗದವರೂ ಬಳಸಿಕೊಂಡು ಉದ್ದಿಮೆ ಆರಂಭಿಸಿ ಉದ್ಯೋಗ ಸೃಷ್ಟಿಸುವ ಮೂಲಕ ಸ್ವಾವಲಂಬಿ ಭಾರತವನ್ನಾಗಿ ಮಾಡುವಂತೆ ಕರೆ ನೀಡಿದರು.

ದೇಶದ ಬಹುಭಾಗದ ಜನರು ವ್ಯವಸಾಯವನ್ನೇ ಅವಲಂಬಿಸಿರುವುದರಿಂದ ದೇಶದ ಆಹಾರ ಬೇಡಿಕೆ ನೀಗಿಸುವಲ್ಲಿ ರೈತರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ವಿಜ್ಞಾನ-ತಂತ್ರಜ್ಞಾನ ಬೆಳೆದಂತೆ ಕೃಷಿಯಲ್ಲಿ ಸುಧಾರಣೆ ತಂದು ಆರ್ಥಿಕವಾಗಿ ಸಬಲವಾಗಲು ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ನೀಡುವ ವಿಧಾನ ಅಳವಡಿಸಿಕೊಳ್ಳಲು ಸಿಎಫ್‌ಟಿಆರ್‌ಐ ತಂತ್ರಜ್ಞಾನ ಸಹಕಾರಿಯಾಗಲಿದೆ ಎಂದು ಡಾ.ಜಿತೇಂದ್ರಸಿಂಗ್ ನುಡಿದರು.


ದಾಸ್ತಾನು, ಸಂಸ್ಕರಣೆ, ಸಾಗಣೆ, ಮಾರುಕಟ್ಟೆ, ರಫ್ತು, ಆರ್ಥಿಕ ವಹಿವಾಟು, ಬಗ್ಗೆ ತಜ್ಞರು ಆಗಿಂದಾಗ್ಗೆ ರೈತರಿಗೆ ತಿಳುವಳಿಕೆ ನೀಡಿದಲ್ಲಿ ಕೃಷಿಯಿಂದ ಅತೀ ಹೆಚ್ಚು ಆದಾಯ ಬರುತ್ತದೆ. ಜೊತೆಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಸುವ ನೂತನ ಡ್ರೋಣ್ ಆಧಾರಿತ ವಿಧಾನಗಳನ್ನು ಪರಿಚಯಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಸಕಾಲಕ್ಕೆ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಪೂರೈಸುವುದು, ಬೆಳೆಗೆ ಉತ್ತಮ ಮಾರುಕಟ್ಟೆ, ರಫ್ತಿಗೆ ಪ್ರೋತ್ಸಾಹ ಹಾಗೂ ದಾಸ್ತಾನು ವ್ಯವಸ್ಥೆ ಕಲ್ಪಿಸಲು ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಅದರ ಜೊತೆಗೆ ಹೈನುಗಾರಿಕೆಗೂ ಪ್ರೋತ್ಸಾಹ ನೀಡುತ್ತಿರುವುದರಿಂದ ರೈತರು ತಮ್ಮ ವೃತ್ತಿಯಲ್ಲಿ ಅಧಿಕ ಆದಾಯ ಗಳಿಸಿ ಸ್ವಾವಲಂಬಿಗಳಾಗಲು ಸಹಕಾರಿಯಾಗಲಿದೆ ಎಂದರು.

ಲಘು ಉದ್ಯೋಗ ಭಾರತಿ ಮೈಸೂರು ಚಾಪ್ಟರ್ ಅಧ್ಯಕ್ಷ ಡಾ. ಮಹೇಶ್ ಶೆಣೈ, ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಸಿಎಫ್‌ಟಿಆರ್‌ಐ ಮಹಾನಿರ್ದೇಶಕ ರಾಜೇಶ್ ಗೋಖಲೆ ಅವರು ವರ್ಚುವಲ್ ಮೂಲಕ ಪಾಲ್ಗೊಂಡು ಟೆಕ್ ಭಾರತ್ ಮೇಳಕ್ಕೆ ಶುಭ ಹಾರೈಸಿದರು.

ಕಾವೇರಿ ಹುಲಿ 'ಹಂಪ್ಬ್ಯಾಕ್ ಮಹಸೀರ್' ಮೀನಿನ ವೈಶಿಷ್ಟ್ಯ ಅನಾವರಣ

● ಮೈಸೂರು ಆರ್‌ಎಂಎನ್‌ಹೆಚ್‌ನಲ್ಲಿ ಮಹಸೀರ್ ಲೋಕ ● ಪ್ರದರ್ಶನದಲ್ಲಿದೆ 150 ವರ್ಷಗಳಷ್ಟು ಹಳೆಯ ಅತೀ ದೊಡ್ಡ ಮಹಸೀರ್ ತಲೆ ಬುರುಡೆ, ಚರ್ಮ



ಮೈಸೂರು ಆರ್‌ಎಂಎನ್‌ಹೆಚ್‌ನಲ್ಲಿ ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಟ್ಟಿರುವ ಮಹಸೀರ್ ಮೀನಿನ ಬೃಹತ್ ತಲೆ ಬುರುಡೆ.

ಮೈಸೂರು,ಮೇ 20(ಪಿಎಂ)- ತನ್ನದೇ ಆದ ನೈಸರ್ಗಿಕ ಪರಂಪರೆ ಹೊಂದಿರುವ ಕಾವೇರಿ ನದಿಯ ಒಡಲಿನ ಅಪರೂಪದ ಜಲಚರವೇ 'ಹಂಪ್ಬ್ಯಾಕ್ ಮಹಸೀರ್' ಮೀನು. 'ಕಾವೇರಿಯ ಹುಲಿ' ಎಂದೇ ಇದನ್ನು ಕರೆಯುವುದು ನೋಡಿದರೆ ಇದರ ಮಹತ್ವ ಮತ್ತು ವೈಶಿಷ್ಟ್ಯ ಅರಿವಾಗುತ್ತದೆ.

ಈ ಜಾತಿ ಮೀನಿನ ಅತೀ ದೊಡ್ಡ ತಲೆ ಬುರುಡೆ ಮತ್ತು ಚರ್ಮದೊಂದಿಗೆ ಇದರ ವಿಶೇಷತೆಗಳನ್ನು ಮೈಸೂರಿನ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿ (ಆರ್‌ಎಂ ಎನ್‌ಹೆಚ್) ಕಾಣಬಹುದು.

ಬೆಂಗಳೂರಿನ ವೈಲ್ಡ್‌ಲೈಫ್ ಅಸೋಸಿಯೇಷನ್ ಆಫ್ ಸೌತ್ ಇಂಡಿಯಾ (ವಾಸಿ) ಸಹಯೋಗದೊಂದಿಗೆ ಆರ್‌ಎಂಎನ್‌ಹೆಚ್, ಈ ವಿಶಿಷ್ಟ ಮೀನಿನ ವೈವಿಧ್ಯತೆಯ ಚಿತ್ರಣ ತೆರೆದಿಟ್ಟಿದೆ. ಸಂಗ್ರಹಾಲಯದಲ್ಲಿರುವ 'ಅಲ್ಪಕಾಲಿಕ ವಸ್ತುಪ್ರದರ್ಶನ ಗ್ಯಾಲರಿ'ಯಲ್ಲಿ 'ಮಹಸೀರ್ ಹಾದಿಯಲ್ಲಿ' ಶೀರ್ಷಿಕೆಯಡಿ ಈ ಮೀನಿನ ಕುರಿತ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಇದು ಸಂಗ್ರಹಾಲಯದ ತಾತ್ಕಾಲಿಕ ಪ್ರದರ್ಶನವಾಗಿದ್ದು, 6 ಅಥವಾ ವರ್ಷ ಕಾಲ ವೀಕ್ಷಣೆಗೆ ಲಭ್ಯವಿರಲಿದೆ.

150 ವರ್ಷಗಳಷ್ಟು ಹಳೆಯಾದ ಅತೀ ದೊಡ್ಡ ಮಹಸೀರ್ ಮೀನೊಂದರ ತಲೆ ಬುರುಡೆ ಮತ್ತು ಚರ್ಮ ಇಲ್ಲಿ ನೋಡಲು ಸಿಗುತ್ತದೆ. ಶಿವನಸಮುದ್ರದ ಬಳಿಯಲ್ಲಿ ದೊರೆತಿದೆ ಎನ್ನಲಾಗುವ ಇವನ್ನು ಸಂಗ್ರಹಾಲಯದ ವತಿಯಿಂದ ಸಂರಕ್ಷಿಸಿದ್ದು, ಇದೀಗ ಪ್ರದರ್ಶನದಲ್ಲಿಡಲಾಗಿದೆ. ಜೊತೆಗೆ ಈ ಮೀನಿನ 107 ಗಂಟಲಿನ ಹಲ್ಲುಗಳನ್ನು ಪ್ರದರ್ಶಿಸಲಾಗಿದೆ.

ಹಂಪ್ಬ್ಯಾಕ್ ಮಹಸೀರ್ ಮೀನು 54 ಕೆಜಿವರೆಗೆ ತೂಗಲಿದ್ದು, ಸರಿಸುಮಾರು ವ್ಯಕ್ತಿಯೊಬ್ಬನ ಶರೀರದಷ್ಟು ಉದ್ದಕ್ಕೂ ಬೆಳೆಯಲಿದೆ. ಕಾವೇರಿ ಮತ್ತು ಅದರ ಉಪನದಿಗಳಿಗೆ ಮಾತ್ರ ಸೀಮಿತವಾಗಿ ಈ ಮೀನು ಕಾಣಸಿಗಲಿದೆ. ಪ್ರಚಂಡ ಗಾತ್ರ ಮತ್ತು ಅದರ ಬೇಟೆ ಕೌಶಲ್ಯದ ವಿಶೇಷತೆಯಿಂದ ಈ ಮೀನಿಗೆ 'ಕಾವೇರಿ ಹುಲಿ' ಎಂಬ ಹೆಸರು ಬಂದಿದೆ ಎಂಬಿತ್ಯಾದಿ ಅಂಶಗಳನ್ನು ಗ್ಯಾಲರಿಯಲ್ಲಿ ಚಿತ್ರಗಳ ಸಹಿತ ವಿವರಿಸಲಾಗಿದೆ.



ಮೈಸೂರು ಆರ್‌ಎಂಎನ್‌ಹೆಚ್‌ನಲ್ಲಿ ನೇಚರ್ಸ್ ನೆಟ್‌ವರ್ಕ್ ಗ್ಯಾಲರಿ ವೀಕ್ಷಣೆ ಮಾಡುತ್ತಿರುವ ಗಣ್ಯರು

ಕಾವೇರಿ ವನ್ಯ ಜೀವಿ ಅಭಯಾ ರಣ್ಯವೇ ಮಹಸೀರ್ ಮೀನಿನ ಆವಾಸ ಸ್ಥಾನ. ಪ್ರಪಂಚದ ಬೇರೆ ಎಲ್ಲಿಯೂ ಇದು ಕಾಣಸಿಗುವುದಿಲ್ಲ. ಕಾವೇರಿ ಸುಸ್ಥಿತಿಯಲ್ಲಿದ್ದರೆ ಈ ಅಪರೂಪ ಮೀನಿನೊಂದಿಗೆ ಅಲ್ಲಿನ ಇನ್ನಿತರ ಜಲಚರಗಳ ಸಂರಕ್ಷಣೆಯೂ ಸಾಧ್ಯ ಎಂಬ ಸಂದೇಶ ಇಲ್ಲಿ ನೀಡಲಾಗಿದೆ.

ಕಾವೇರಿ ನದಿಯಲ್ಲಿ ಒಂದು ಕಾಲಕ್ಕೆ ಉತ್ತಮ ಸಂಖ್ಯೆಯಲ್ಲಿದ್ದ ಮಹಸೀರ್ ಮೀನುಗಳು ಇಂದು ಅಳಿವಿನಂಚಿನ ಪಟ್ಟಿಗೆ ಸೇರಿದೆ. ಅದಾಗ್ಯೂ ಇದು ವಿಶ್ವದ ಅಗ್ರ 20 ಸಿಹಿನೀರಿನ ಬೃಹತ್ ಪ್ರಾಣಿಗಳಲ್ಲಿ ಒಂದು ಎಂಬ ಖ್ಯಾತಿ ಹೊಂದಿದೆ. ಮಹಸೀರ್ ಸಂತತಿಯ ಪ್ರಮಾಣ ಅದರ ಆವಾಸಸ್ಥಾನದ ಗುಣಮಟ್ಟದೊಂದಿಗೆ ನಿಕಟ ಸಂಬಂಧ ಹೊಂದಿದೆ. ನದಿಯ ಸಂರಕ್ಷಣೆಯಲ್ಲಿ ತನ್ನದೇ ಆದ ಮಹತ್ವದ ಪಾತ್ರವನ್ನು ಇದು ನಿರ್ವಹಿಸುತ್ತದೆ. ಹಂಪ್ಬ್ಯಾಕ್ ಮಹಸೀರ್ ಅಳಿವಿನಂಚಿನಲ್ಲಿರುವ ಸ್ಥಿತಿಯು ಕಾವೇರಿ ನದಿಯ ಸಂರಕ್ಷಣೆ ಅಗತ್ಯತೆಯನ್ನು ಒತ್ತು ಹೇಳುತ್ತದೆ ಎಂದು ಇಲ್ಲಿ ಉಲ್ಲೇಖಿಸಲಾಗಿದೆ.

ಇದರ ಪ್ರದರ್ಶನಕ್ಕೆ ಮತ್ತು ಸಂಗ್ರಹಾಲಯದ 'ನೇಚರ್ಸ್ ನೆಟ್‌ವರ್ಕ್' ನೂತನ ಗ್ಯಾಲರಿಗೆ ಶುಕ್ರವಾರ ಚಾಲನೆ ನೀಡಲಾಯಿತು. ಸೋಮವಾರ ಮತ್ತು ಸರ್ಕಾರಿ ರಜೆ ದಿನ ಹೊರತಾಗಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಇಲ್ಲಿನ ಪ್ರದರ್ಶನ ವೀಕ್ಷಿಸಲು ಅವಕಾಶವಿದ್ದು, ಪ್ರವೇಶ ಉಚಿತವಿದೆ. ಗ್ಯಾಲರಿಗಳ ಉದ್ಘಾಟನೆ ಜೊತೆಗೆ ಆರ್‌ಎಂಎನ್‌ಹೆಚ್‌ನ 27ನೇ ಸಂಸ್ಥಾಪನಾ ದಿನಾಚರಣೆ, ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ, ಜೈವಿಕ ವೈವಿಧ್ಯತೆಯ ಅಂತಾರಾಷ್ಟ್ರೀಯ ದಿನಾಚರಣೆಯನ್ನೂ ಹಮ್ಮಿಕೊಳ್ಳಲಾಗಿತ್ತು.



ಮಹಸೀರ್ ಮೀನು

ನೇಚರ್ಸ್ ನೆಟ್‌ವರ್ಕ್ ನೂತನ ಗ್ಯಾಲರಿ: ಭಾರತದ ಕೆಲ ಆದಿವಾಸಿ ಪಂಗಡಗಳು ಸೇರಿದಂತೆ ವಿಶೇಷವಾಗಿ ದಕ್ಷಿಣ ಭಾರತದ ಬುಡಕಟ್ಟು ಜನಾಂಗಗಳ ವಿವರ ಹಾಗೂ ಅವರ ಸುಸ್ಥಿರ ಜೀವನ ಶೈಲಿಯ ಮೇಲೆ ಬೆಳಕು ಚೆಲ್ಲುವ ಜೊತೆಗೆ ಹಲವು ಪ್ರಾಣಿ-ಪಕ್ಷಿಗಳ ವೈಶಿಷ್ಟ್ಯತೆಯನ್ನು ಚಿತ್ರಕಲೆ, ಮಾದರಿಗಳ ಮೂಲಕ ಈ ನೇಚರ್ಸ್ ನೆಟ್‌ವರ್ಕ್ ಗ್ಯಾಲರಿ ಅನಾವರಣಗೊಳಿಸಲಿದೆ.

ವಿಶೇಷವಾಗಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಬುಡಕಟ್ಟು ಜನಾಂಗದ ಬಗ್ಗೆ ಇಲ್ಲಿ ವಿವರ ನೀಡಲಾಗಿದೆ. ರಣಹದ್ದು ಸೇರಿದಂತೆ ಭಕ್ಷಕ ಪಕ್ಷಿಗಳ ಜೀವನ ಶೈಲಿಯ ಚಿತ್ರಣ ಇಲ್ಲಿ ಕಾಣಸಿಗಲಿದೆ. ಚಿಟ್ಟೆಗಳ ಬಗ್ಗೆಯೂ ಇಲ್ಲಿ ಬೆಳಕು ಚೆಲ್ಲಲಾಗಿದೆ. ಪ್ರಕೃತಿಯೊಂದಿಗೆ ಮನುಷ್ಯ ಸಹಬಾಳ್ವೆ ನಡೆಸಬೇಕೆಂಬ ಸಂದೇಶ ಇಲ್ಲಿನ ಪ್ರದರ್ಶನದಲ್ಲಿ ರವಾನೆಯಾಗಲಿದೆ.

ಮೈಸೂರು ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ, ಬಂಡೀಪುರ ಹುಲಿಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್‌ಕುಮಾರ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ನವದೆಹಲಿ ಆರ್‌ಎಂಎನ್‌ಹೆಚ್‌ನ ನಿರ್ದೇಶಕಿ ನಾರುಝ್ ರಿಜ್ವಿ, ವಾಸಿ ಅಧ್ಯಕ್ಷ ಸುಶೀಲ್, ಖಜಾಂಚಿ ದೀಪಕ್ ಪಿಂಟೋ, ಮೈಸೂರು ಆರ್‌ಎಂಎನ್‌ಹೆಚ್‌ನ ಮುಖ್ಯಸ್ಥರೂ ಆದ ವಿಜ್ಞಾನಿ ಡಾ.ಎ.ಪಿ. ತಿವಾರಿ ಮತ್ತಿತರರು ಹಾಜರಿದ್ದರು.

ಬಂಡೀಪುರ, ರಂಗನತಿಟ್ಟು ಕುರಿತು ತಾತ್ಕಾಲಿಕ ಪ್ರದರ್ಶನ ಏರ್ಪಡಿಸಿ

'ಮಹಸೀರ್ ಮೀನಿನ ಕುರಿತು ಹಮ್ಮಿಕೊಂಡಿರುವ ತಾತ್ಕಾಲಿಕ ಪ್ರದರ್ಶನದಂತೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ರಂಗನತಿಟ್ಟು ಪಕ್ಷಿಧಾಮ ಕುರಿತಂತೆ ಮುಂದಿನ ಬಾರಿ ಪ್ರದರ್ಶನ ಏರ್ಪಡಿಸಿದರೆ, ಅರಣ್ಯ ಇಲಾಖೆ ವತಿಯಿಂದ ಅಗತ್ಯ ಸಹಕಾರ ನೀಡಲಾಗುವುದೆಂದು ಮೈಸೂರು ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ ತಿಳಿಸಿದರು.

ಕಾರ್ಯಾಗಾರ ಸೇರಿದಂತೆ ವಸ್ತು ಸಂಗ್ರಹಾಲಯದ (ಆರ್‌ಎಂಎನ್‌ಹೆಚ್) ಇನ್ನಿತರ ಚಟುವಟಿಕೆಗಳಲ್ಲಿ ಅರಣ್ಯ ಇಲಾಖೆ ತೊಡಗಿಸಿಕೊಳ್ಳಲು ಸಿದ್ಧವಿದೆ. ವಸ್ತು ಸಂಗ್ರಹಾಲಯದ ನಿವೃತ್ತ ಅಧಿಕಾರಿ, ಸಿಬ್ಬಂದಿ ಈಗಲೂ ಸಂಸ್ಥೆ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಶ್ಲಾಘನೀಯ. 'ನೇಚರ್ಸ್ ನೆಟ್‌ವರ್ಕ್' ವಿಶೇಷವಾಗಿ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಇಲ್ಲಿನ ಪ್ರದರ್ಶನ ವಿದ್ಯಾರ್ಥಿಗಳ ಕಲಿಕೆಯನ್ನು ಪರಿಣಾಮಕಾರಿಗೊಳಿಸಲಿದೆ ಎಂದರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 21 ಶನಿವಾರ 2022

ಸಂಪುಟ: 43 | ಸಂಚಿಕೆ: 35 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆ?

• ಹೈಕಮಾಂಡ್ ಬುಲಾವ್ ಹಿನ್ನೆಲೆಯಲ್ಲಿ ಹಠಾತ್ ದೆಹಲಿಗೆ ದೌಡು • ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆ ನಂತರ ವರಿಷ್ಠರಿಂದ ಅಧಿಕೃತ ಘೋಷಣೆ • ಇತ್ತೀಚೆಗೆ ತ್ರಿಪುರದಲ್ಲೂ ದಿಢೀರ್ ನಾಯಕತ್ವ ಬದಲಾವಣೆ ಆಗಿತ್ತು • ಇದುವರೆಗೆ ಯುಪಿ ಹೊರತು ನಾಯಕತ್ವ ಬದಲಾವಣೆಯಾದ ಕಡೆ ಬಿಜೆಪಿ ಮತ್ತೆ ಗೆದ್ದಿದೆ; ನಾಯಕತ್ವ ಬದಲಾಗದ ಮಹಾರಾಷ್ಟ್ರದಲ್ಲಿ ಸೋತಿದೆ

ಬೆಂಗಳೂರು, ಮೇ. 20(ಕೆಎಂಶಿ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ವರಿಷ್ಠರ ಆದೇಶದ ಮೇರೆಗೆ ಹಠಾತ್ತನೆ ದೆಹಲಿಗೆ ತೆರಳಿದ ಮುಖ್ಯಮಂತ್ರಿ ಅವರು ಇಂದೇ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ರಾಷ್ಟ್ರೀಯ ನಾಯಕರಿಗೆ ನೀಡಿದ್ದಾರೆನ್ನಲಾಗಿದೆ.

ವರಿಷ್ಠರ ಆದೇಶದ ಮೇರೆಗೆ ರಾಜೀನಾಮೆ ನೀಡಿದ್ದು, ರಾಜ್ಯಸಭಾ, ವಿಧಾನಪರಿಷತ್ ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಅಧಿಕೃತವಾಗಿ ಪ್ರಕಟವಾಗಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಈ ಹಿಂದಿನ ಕಾರ್ಯಕ್ರಮದಂತೆ ಮುಖ್ಯಮಂತ್ರಿ ಅವರು ನಾಳೆ ರಾತ್ರಿ ದಾವೋಸ್‌ಗೆ ತೆರಳಿ ಆರ್ಥಿಕ ಶೃಂಗ ಸಭೆಯಲ್ಲಿ ಭಾಗವಹಿಸಿ ಮೇ 26 ರಂದು ನಗರಕ್ಕೆ ಹಿಂತಿರುಗಲಿದ್ದಾರೆ.

ನಂತರ ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್




ಹಾಗೂ ರಾಜ್ಯಸಭೆಗೆ ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಧಿಕೃತವಾಗಿ ರಾಜೀನಾಮೆ ಪ್ರಕಟಿಸಲಿದ್ದಾರೆ ಎಂದು ಇದೇ ಮೂಲಗಳು ಹೇಳಿವೆ.

ಆದರೆ ಮುಖ್ಯಮಂತ್ರಿಯವರ ಆಪ್ತರು ರಾಜ್ಯಸಭೆಗೆ ಅಭ್ಯರ್ಥಿ ಆಯ್ಕೆ ಹಾಗೂ ಸಂಪುಟ ಪುನರ್ ರಚನೆಗೆ ಅನುಮತಿ ಪಡೆಯಲು ದೆಹಲಿಗೆ ತೆರಳಿದ್ದಾರೆ ಎಂದು ಹೇಳುತಿದ್ದಾರೆ. ಈ ಹಿಂದೆ ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲೂ ಇದೇ ಮಾತುಗಳು ಅವರ ವಲಯದಿಂದ ಕೇಳಿ ಬಂದಿದ್ದವು. ಕಳೆದ ಕೆಲವು ತಿಂಗಳಿಂದ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಮಾಡುವ ಪ್ರಸ್ತಾಪ ಪಕ್ಷದ ವಲಯದಲ್ಲಿ ವ್ಯಾಪಕವಾಗಿ ಕೇಳಿ ಬರುತ್ತಿತ್ತು.

ಇತ್ತೀಚೆಗೆ ಬಿಜೆಪಿ ನಾಯಕರು ದೆಹಲಿಯಲ್ಲಿ ಆರ್‌ಎಸ್‌ಎಸ್ ಮುಖಂಡರೊಟ್ಟಿಗೆ ರಾಜ್ಯ ರಾಜಕೀಯದ ಬಗ್ಗೆ ಚರ್ಚೆ ನಡೆಸಿ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಮಾಡುವ ತೀರ್ಮಾನ ತೆಗೆದುಕೊಂಡಿದ್ದರಾದರೂ ಅಂತಿಮವಾಗಿ ಪ್ರಧಾನಿಯವರ ನಿರ್ಧಾರಕ್ಕೆ ಬಿಟ್ಟಿದ್ದರು.

ಈ ಬೆಳವಣಿಗೆಯ ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯಕ್ಕೆ ಎರಡು ಬಾರಿ ಪ್ರವಾಸ ಕೈಗೊಂಡಿದ್ದರು. ಇದೇ ವೇಳೆ ಮುಖ್ಯಮಂತ್ರಿ ಅವರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಹಿಂತಿರುಗಿದ್ದಾರೆ. ರಾಜಸ್ಥಾನದ ಜೈಪುರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲೂ ಕರ್ನಾಟಕದಲ್ಲಿನ ▶ 9ನೇ ಪುಟಕ್ಕೆ

2024 ಜನವರಿಯಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪನೆ



ಮಂಗಳೂರು, ಮೇ 20– ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ನಿರ್ಮಾಣ ಕಾರ್ಯ ನಿರಂತರವಾಗಿ ಸಾಗುತ್ತಿದ್ದು, 2024ರ ಜನವರಿಯಲ್ಲಿ ಉತ್ತರಾಯಣ ಆರಂಭದಲ್ಲಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯ ನಡೆಯಲಿದೆ ಎಂದು ಅಯೋಧ್ಯೆ ಶ್ರೀರಾಮ ಮಂದಿರ ನಿರ್ಮಾಣ ಸಮಿತಿಯ ಟ್ರಸ್ಟಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು. ಮಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಜೂ.1ಕ್ಕೆ ಗರ್ಭ ಗುಡಿಯ ಶಿಲಾನ್ಯಾಸ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಲಿದ್ದೇನೆ ಎಂದರು.

ಜೂ.21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೈಸೂರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಾಮೂಹಿಕ ಯೋಗ ಪ್ರದರ್ಶನ

• ಸಂಸದ ಪ್ರತಾಪ್ ಸಿಂಹ ಮನವಿಗೆ ಮನ್ನಣೆ
• ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಮುಖ್ಯ ಕಾರ್ಯದರ್ಶಿಗೆ ಆಯುಷ್ ಕಾರ್ಯದರ್ಶಿ ಪತ್ರ



ಮೈಸೂರು, ಮೇ 20(ಎಸ್‌ಬಿಡಿ)– 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಬರುವ ಜೂನ್ 21ರಂದು ಮೈಸೂರಿನಲ್ಲಿ ನಡೆಯಲಿರುವ ಬೃಹತ್ ಸಾಮೂಹಿಕ ಯೋಗ ಪ್ರದರ್ಶನದ ನೇತೃತ್ವವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಹಿಸಲಿದ್ದಾರೆ.

ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಈ ಬಾರಿ ಅಂತರರಾಷ್ಟ್ರೀಯ ಯೋಗ ದಿನವನ್ನು ವಿಶಿಷ್ಟವಾಗಿ ಆಚರಿಸಲು ಆಯುಷ್ ಸಚಿವಾಲಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಅಲ್ಲದೆ ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಹಮ್ಮಿಕೊಳ್ಳಲು ಸಚಿವಾಲಯ ನಿರ್ಧರಿಸಿದ್ದು, ಆ ನಿಟ್ಟಿನಲ್ಲಿ ಈಗಾಗಲೇ ಕ್ರಮ ಕೈಗೊಂಡಿದೆ.

ಈ ಬಾರಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಮುಖ ಕಾರ್ಯಕ್ರಮ ಮೈಸೂರಿನಲ್ಲಿ ನಡೆಯಲಿದ್ದು, ಪ್ರಧಾನಿ ಮೋದಿ ಅವರು ಅದರ ನೇತೃತ್ವ ವಹಿಸಲಿದ್ದಾರೆ. ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನವನ್ನು ಜಾಗತಿಕ ಮಟ್ಟದಲ್ಲಿ ಬ್ರಾಂಡಿಂಗ್ ಇಂಡಿಯಾ ಆಗಿ ಬಿಂಬಿಸುವ ಮಹದುದ್ದೇಶವೂ ಇದೆ. ಯೋಗ ಪ್ರದರ್ಶನದಲ್ಲಿ ಸಾವಿರಾರು ಜನ ಭಾಗಿಯಾಗುವುದರಿಂದ ಸಾಮಾನ್ಯ ಯೋಗ ಶಿಷ್ಟಾಚಾರ ಸೇರಿದಂತೆ ಕಾರ್ಯಕ್ರಮದ ಯಶಸ್ಸಿಗೆ ಅಗತ್ಯ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಕೇಂದ್ರ ಆಯುಷ್ ಸಚಿವಾಲಯದ ಕಾರ್ಯದರ್ಶಿ ವೈದ್ಯ ರಾಜೇಶ್ ಕೋಟೇಚಾ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್‌ಗೆ ನಿನ್ನೆ ಅಧಿಕೃತ ಪತ್ರ ರವಾನಿಸಿದ್ದಾರೆ. ▶ 9ನೇ ಪುಟಕ್ಕೆ



ಇತ್ತೀಚೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರೊಂದಿಗೆ ಸಂಸದ ಪ್ರತಾಪ್ ಸಿಂಹ ತಮ್ಮ ಪತ್ನಿ ಅರ್ಪಿತಾ, ಪುತ್ರಿ ವಿಪಂಚಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಮೈಸೂರಲ್ಲಿ ನಡೆಯಲಿರುವ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದರು.

ಬಸ್‌ಗೆ ಬೈಕ್ ಡಿಕ್ಕಿ: ಇಬ್ಬರು ಯುವಕರು ದುರ್ಮರಣ

ಮತ್ತೊಬ್ಬನ ಸ್ಥಿತಿ ಗಂಭೀರ; ತ್ರಿಬಲ್ ರೈಡಿಂಗ್ ಹೋಗುತ್ತಿದ್ದರು

ನಂಜನಗೂಡು, ಮೇ 20– ಲಾರಿಯನ್ನು ಹಿಂದಿಕ್ಕುವ ಭರದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿ, ಓರ್ವ ಗಂಭೀರವಾಗಿ ಗಾಯಗೊಂಡ ಘಟನೆ ನಂಜನಗೂಡು–ಗುಂಡ್ಲುಪೇಟೆ ರಸ್ತೆಯಲ್ಲಿ ಗುರುವಾರ ಸಂಜೆ ಸಂಭವಿಸಿದೆ.

ನಂಜನಗೂಡಿನ ಪೇಪರ್ ಬೋಟ್ ಜ್ಯೂಸ್ ಕಾರ್ಖಾನೆಯ ಕಾರ್ಮಿಕರಾದ ಕೂಡ್ಲಾಪುರ ಗ್ರಾಮದ ಸಚಿನ್ ಮತ್ತು ಉತ್ತನಹಳ್ಳಿ ಗ್ರಾಮದ ದೊರೆಸ್ವಾಮಿ ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಅದೇ ಬೈಕ್‌ನ ಮತ್ತೊಬ್ಬ ಸವಾರ ರಘು ತೀವ್ರವಾಗಿ ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ವಿವರ: ಅಪಘಾತದಲ್ಲಿ ಮೃತಪಟ್ಟ ಹಾಗೂ ಗಾಯಗೊಂಡ ಮೂವರು ಕಾರ್ಮಿಕರು ಗುರುವಾರ ಮಧ್ಯಾಹ್ನ ಕೆಲಸ ಮುಗಿಸಿಕೊಂಡು ಸಂಜೆ 4 ಗಂಟೆ ಸುಮಾರಿನಲ್ಲಿ ಒಂದೇ ಬೈಕ್‌ನಲ್ಲಿ ನಂಜನಗೂಡು ತಾಲೂಕು ಸಿಂಧುವಳ್ಳಿ ಸಮೀಪದ ಹುಣಸವಾಳು ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಬೈಕ್ ಚಾಲನೆ ಮಾಡುತ್ತಿದ್ದ ಸಚಿನ್ ಲಾರಿಯೊಂದನ್ನು ಹಿಂದಿಕ್ಕಲು ಪ್ರಯತ್ನಿಸಿ, ಗುಂಡ್ಲುಪೇಟೆ ಕಡೆಯಿಂದ ನಂಜನಗೂಡು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್‌ನ ಮುಂಭಾಗ ನಜ್ಜುಗುಜ್ಜಾಗಿದೆ. ಬೈಕ್ ▶ 9ನೇ ಪುಟಕ್ಕೆ

ಬೋರ್‌ವೆಲ್ ಅನುದಾನದ ಆಸೆ ತೋರಿಸಿ ಅಮಾಯಕ ರೈತರಿಂದ ಲಕ್ಷಾಂತರ ರೂ. ಸುಲಿಗೆ

ಅರಸೀಕೆರೆ, ಮೇ 20– ಕೆಂಪು ದೀಪ ಅಳವಡಿಸಿದ ಕಾರಿನಲ್ಲಿ ಬಂದು ಸರ್ಕಾರಿ ಅಧಿಕಾರಿಯ ಸೋಗಿನಲ್ಲಿ ಬೋರ್‌ವೆಲ್ ಕೊರೆಸಲು ಅನುದಾನ ಮಂಜೂರು ಮಾಡಿಸುವುದಾಗಿ ನಂಬಿಸಿ ರೈತರಿಂದ ಲಕ್ಷಾಂತರ ರೂ. ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ. ಬೇಗೂರು ತಾಲೂಕು ಗಟ್ಟದಹಳ್ಳಿ ನಿವಾಸಿಗಳಾದ ಪವನ್, ಶ್ರೀನಿವಾಸ, ಮಂದಾರ, ಚಿಕ್ಕನಾಯಕನಹಳ್ಳಿ ತಾಲೂಕು ಸೋಮನಹಳ್ಳಿ ಗ್ರಾಮದ ರಾಜಣ್ಣ, ವಿನೋದ ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಂಚನೆಗೊಳಗಾದ ರೈತರು ಹಣ ವಾಪಸ್ ನೀಡುವಂತೆ ಕೇಳಿದಾಗ, ರೈತರ ಮೇಲೆ ಜಾತಿ ನಿಂದನೆ ಕೇಸ್ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ತುಮಕೂರು ಜಿಲ್ಲೆ ಚಿಕ್ಕನಾಯಕನ ಹಳ್ಳಿ ತಾಲೂಕು ಬರಗೂರು ಗ್ರಾಮದ ವಿಶ್ವನಾಥ್ ಎಂಬ ರೈತ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವಿವರ: ವಿಶ್ವನಾಥ್ ಅವರು 2021ರ ಜನವರಿ 15ರಂದು ಚಿಕ್ಕನಾಯಕನಹಳ್ಳಿ ತಾಲೂಕಿನ ಸೋಮನಹಳ್ಳಿ ಗ್ರಾಮಕ್ಕೆ ಸಂಬಂಧಿಕರ ಮದುವೆಗಾಗಿ ಹೋದಾಗ ಸರ್ಕಾರಿ ಇಲಾಖೆಯ ನಾಮಫಲಕ ಹೊಂದಿದ್ದ ಹಾಗೂ ಕೆಂಪು ದೀಪ ಅಳವಡಿಸಿದ್ದ ಕಾರಿ ನಲ್ಲಿ ಅಲ್ಲಿಗೆ ಬಂದಿದ್ದ ಗಟ್ಟದಹಳ್ಳಿ ಗ್ರಾಮದ ಪವನ್ ಅಲಿಯಾಸ್ ಪೃಥ್ವಿ ಹಾಗೂ ಇತರ ಮೂವರು ಇವರನ್ನು ಸಂಪರ್ಕಿಸಿ ▶ 9ನೇ ಪುಟಕ್ಕೆ

ಸಿಎಫ್‌ಟಿಆರ್‌ಐ ಆವರಣದಲ್ಲಿ

ಕೃಷಿಯಲ್ಲಿ ಡ್ರೋಣ್ ಬಳಕೆ ಪ್ರಾತ್ಯಕ್ಷಿಕೆ


ಕೇಂದ್ರ ಸಚಿವರಾದ ಡಾ.ಜಿತೇಂದ್ರ ಸಿಂಗ್, ಶೋಭಾ ಕರಂದ್ಲಾಜೆ ಅವರಿಂದ ಚಾಲನೆ

ಮೈಸೂರು, ಮೇ 20(ಆರ್‌ಕೆ)– ಬೆಳೆಗೆ ಕ್ರಿಮಿನಾಶಕ ಸಿಂಪಡಣೆ, ಬಿತ್ತನೆ, ಬೆಳೆ ಸಮೀಕ್ಷೆ ಹಾಗೂ ಮರಗಳ ಆರೋಗ್ಯ ನಿರ್ವಹಣೆಗೆ ಡ್ರೋಣ್ ಬಳಕೆ ಬಗ್ಗೆ ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಇಂದು ಪ್ರಾತ್ಯಕ್ಷಿಕೆ ನಡೆಸಲಾಯಿತು.

ಸಿಎಫ್‌ಟಿಆರ್‌ಐ, ಲಘು ಉದ್ಯೋಗ ಭಾರತಿ ಹಾಗೂ ಐಎಂಎಸ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಟೆಕ್ ಭಾರತ್–2022 ಕೃಷಿ, ಆಹಾರ ಮತ್ತು ಆಹಾರ ಸಂಸ್ಕರಣೆ ತಂತ್ರಜ್ಞಾನ ಕುರಿತ ಮೇಳದ ಅಂಗವಾಗಿ ಏರ್ಪಡಿಸಿದ್ದ ಡ್ರೋಣ್ ಉಪಕರಣಗಳ ಕಾರ್ಯಾಚರಣೆ ಪ್ರಾತ್ಯಕ್ಷಿಕೆಗೆ ರಿಮೋಟ್ ಕಂಟ್ರೋಲ್ ಮೂಲಕ ಕೇಂದ್ರ ವಿಜ್ಞಾನ–ತಂತ್ರಜ್ಞಾನ ಮತ್ತು ಭೂವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹಾಗೂ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಿದರು.

ಬೆಂಗಳೂರಿನ ಸಿಎಸ್‌ಐಆರ್–ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್ (NAL)ನ ಅನ್ ಮ್ಯಾನ್ಡ್ ಏರಿಯಲ್ ವೆಹಿಕಲ್ (UAV) ವಿಭಾಗವು ಅಭಿವೃದ್ಧಿಪಡಿಸಿರುವ ಎರಡು ಅಕ್ವಾಮೆಡ್ ಮತ್ತು ಅಕ್ವಾ ಅಗ್ರಿ ಡ್ರೋಣ್ ಉಪಕರಣಗಳ ಮೂಲಕ ಬೆಳೆಗೆ ಔಷಧ ಸಿಂಪಡಿ ಸಬಹುದಾಗಿದ್ದು, ಬಿತ್ತನೆ ಬೀಜ ಹರಡಲು ಬಳಸಲಾಗುತ್ತದೆ. ಈ ಡ್ರೋಣ್ ಆಧಾರಿತ ಎಮರ್ಜೆನ್ಸಿ ಮೆಡಿಸಿನ್ ಸಿಂಪಡಣೆ ತಂತ್ರಜ್ಞಾನದಿಂದ ಕಡಿಮೆ ಅವಧಿಯಲ್ಲಿ ಅತೀ ಹೆಚ್ಚು ಭೂಮಿಯಲ್ಲಿ ಬೆಳೆದ ಬೆಳೆಗೆ ಕೀಟನಾಶಕ ಸಿಂಪಡಿಸಬಹುದಾಗಿದ್ದು, ವೆಚ್ಚವೂ ಕಡಿಮೆಯಾಗಲಿದೆ. 25 ಕೆಜಿವರೆಗೆ ಭಾರ ಹೊರುವ ಸಾಮರ್ಥ್ಯ ಹೊಂದಿರುವ ಡ್ರೋಣ್ 100 ಮೀಟರ್ ಎತ್ತರಕ್ಕೇರಲಿದೆ.

ಬೆಳೆಯ ಎತ್ತರಕ್ಕೆ ತಕ್ಕಂತೆ ರಿಮೋಟ್ ಮೂಲಕ ನಿಯಂತ್ರಿಸಬಹುದಾಗಿರುವುದರಿಂದ ಗಿಡದ ಪ್ರತೀ ಎಲೆಗೂ ಕೀಟನಾಶಕ ಹರಡುತ್ತದೆ. ಬ್ಯಾಟರಿ ಚಾಲಿತ ಹಾಗೂ ಇಂಧನ ಚಾಲಿತ ಡ್ರೋಣ್‌ಗಳನ್ನು ಅಭಿವೃದ್ಧಿ ಪಡಿಸಿದ್ದು, ಅವುಗಳ ಬಳಕೆ ಬಗ್ಗೆ ಆಸಕ್ತ ರೈತರಿಗೆ ತರಬೇತಿ ನೀಡಲಾಗುತ್ತದೆ ಎಂದು ಸಿಎಸ್‌ಐಆರ್ ಎನ್‌ಎಪಿ ತಂತ್ರಜ್ಞ ಡಾ. ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ. ▶ 9ನೇ ಪುಟಕ್ಕೆ



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಶುಕ್ರವಾರ ಡ್ರೋಣ್ ಆಪರೇಷನ್ ಕುರಿತ ಪ್ರಾತ್ಯಕ್ಷಿಕೆಗೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಚಾಲನೆ ನೀಡಿದರು.



ಮೈಸೂರು ರಸ್ತೆಗಳಿಗೆ ತಿಂಗಳ ನಂತರ ಅಭಿವೃದ್ಧಿ ಭಾಗ್ಯ

• ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಭರವಸೆ
• ರಸ್ತೆ ನಿರ್ಮಿಸಿದವರೆ 3 ವರ್ಷ ನಿರ್ವಹಣೆ ಮಂತ್ರ ಜಪ
• ಮುಂಗಾರು ನಿರ್ವಹಣೆಗೆ ಸಿಬ್ಬಂದಿ ಸಜ್ಜುಗೊಳಿಸಿರುವ ಘೋಷಣೆ

ಮೈಸೂರು, ಮೇ 20(ಎಸ್‌ಬಿಡಿ)– ಮೈಸೂರು ನಗರದ ರಸ್ತೆಗಳ ಅಭಿವೃದ್ಧಿ ಹಾಗೂ ದುರಸ್ತಿ ಕಾರ್ಯವನ್ನು ಜೂ.20ರ ನಂತರ ಆರಂಭಿಸುವುದಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದ್ದಾರೆ.

ನಗರ ಪಾಲಿಕೆಯ ತಮ್ಮ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈಲ್ವೆ ಅಂಡರ್ ಬ್ರಿಡ್ಜ್‌ನಿಂದ ಬಲ್ಲಾಳ್ ವೃತ್ತ ಮಾರ್ಗವಾಗಿ ಗಾಡಿ ಚೌಕದವರೆಗಿನ ರಸ್ತೆ ಅಭಿವೃದ್ಧಿಗೆ 1.75 ಕೋಟಿ ರೂ. ಸೇರಿದಂತೆ ಎಸ್‌ಎಫ್‌ಸಿ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಒಟ್ಟು 50 ಕೋಟಿ ರೂ.ಗಳಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗುವುದು. ರಸ್ತೆ ಮಧ್ಯಭಾಗದಲ್ಲಿ ಪ್ರತಿಫಲಕಗಳ ಅಳವಡಿಕೆ, ಉತ್ತಮ ಫುಟ್‌ಪಾತ್, ಮಳೆ ನೀರು ಹರಿವಿಗೆ ವ್ಯವಸ್ಥೆ ಸೇರಿದಂತೆ ಉತ್ತಮ ರೀತಿಯಲ್ಲಿ ಅಭಿವೃದ್ಧಿಗೊಳಿಸಲಾಗುವುದು. ಈಗಾಗಲೇ ಹಣ ಬಿಡುಗಡೆಯಾಗಿದ್ದು, ಕಾಮಗಾರಿಗೆ ಚಾಲನೆ ಸಿಗಬೇಕಾದ ವೇಳೆ ಮಳೆ ಆರಂಭವಾಯಿತು. ನಿರಂತರ ಮಳೆ ಹಾಗೂ ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಕಾರಣದಿಂದ ವಿಳಂಬವಾಗಿದೆ. ಮಳೆ ಬಿಡುವು ನೀಡಿದರೆ ಜೂ.20ರಿಂದಲೇ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು. ಪ್ರಮುಖ ರಸ್ತೆಗಳ ಅಭಿವೃದ್ಧಿಯನ್ನು ಎಸ್‌ಎಫ್‌ಸಿ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಕೈಗೊಳ್ಳಲಾಗುತ್ತಿದ್ದು, ▶ 9ನೇ ಪುಟಕ್ಕೆ

ಸಂಸದ ಪ್ರತಾಪ್ ಸಿಂಹ ಅವರ ನೆರವಿನಿಂದಲೂ ಸಾಕಷ್ಟು ಕೆಲಸವಾಗುತ್ತಿದೆ. ಜನ ಸಣ್ಣ–ಪುಟ್ಟ ಸಮಸ್ಯೆಗಳನ್ನು ಅವರ ಬಳಿ ಹೇಳಿಕೊಂಡಿದ್ದಕ್ಕೆ ಕೋಪದಲ್ಲಿ ಮಾತನಾಡಿರಬಹುದು. ಆದರೆ ನಮ್ಮ ಎಲ್ಲಾ ಕಾರ್ಪೋರೇಟರ್‌ಗಳೂ ವಾರ್ಡ್‌ನಲ್ಲಿ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳ ಸಹಕಾರವೂ ಚೆನ್ನಾಗಿದೆ. ಇಲ್ಲವಾಗಿದ್ದರೆ ನಗರ ಹೀಗಿರುತ್ತಿರಲಿಲ್ಲ.
-ಸುನಂದಾ ಪಾಲನೇತ್ರ, ಹಂಗಾಮಿ ಮೇಯರ್

ನಕ್ಕರೆ ಅದೇ ಸ್ವರ್ಗ

ಬಸ್ಯಾ : "ದೇಶದಲ್ಲಿ ಇರೋ ಎಣ್ಣೆ ಅಂಗಡಿಗಳನ್ನೆಲ್ಲಾ ಮುಚ್ಚಿದ್ರೆ ನಮ್ಮ ಹೆಣ್ಣು ಮಕ್ಕಳು ಬಹಳ ಸಂತೋಷದಿಂದ ಬಾಳ್ತಾರೆ"

ತಿಪ್ಪೇಶಿ : "ಅಯ್ಯೋ ಬಸ್ಯಾ, ದೇಶದಲ್ಲಿ ಇರೋ ಬ್ಯೂಟಿ ಪಾರ್ಲರ್‌ಗಳನ್ನು ಮುಚ್ಚಿದ್ರೆ ನಮ್ಮ ಗಂಡು ಮಕ್ಕಳು ಇನ್ನೂ ಸಂತೋಷ ಪಡ್ತಾರೆ!"

ಮೈಸೂರು ಮಿತ್ರ

ಶನಿವಾರ, 21 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೇಳಿ ಕೊಡುವ ನೂರಾರು ಬಹುಮಾನಗಳಿಗಿಂತ ಕೇಳದೆ ಕೊಡುವ ಗೌರವ ಬಹಳ ದೊಡ್ಡದು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕೋಣದ ಮುಂದೆ ನಿಂತು ಕಿಂದರಿ ಬಾರಿಸಿದ ಹಾಗೆ

ನಿಮ್ಮ ಪತ್ರಗಳು

ಹೆಡಗೆವಾರ್ ಭಾಷಣ ಅಳವಡಿಸಿದರೆ ತಪ್ಪೇನಿದೆ?

ಮಾನ್ಯರೇ,

10ನೇ ತರಗತಿ ಪಠ್ಯ ಪುಸ್ತಕದಲ್ಲಿ ಕೇಶವ ಬಲಿರಾಮ್ ಹೆಡಗೆವಾರ್ ಅವರ ಭಾಷಣವನ್ನು ಅಳವಡಿಕೆ ಮಾಡಲಾಗಿದೆ ಎಂಬ ಕಾರಣಕ್ಕೆ ಪ್ರತಿಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಮುಗಿಬಿದ್ದಿದ್ದಾರೆ. ಅಂಗುಲಿಮಾಲಾ ಎಂಬ ರಾಕ್ಷಸ ಪ್ರವೃತ್ತಿಯ ಬೇಟೆಗಾರನ ಪಾತ್ರವನ್ನೇ ಪಠ್ಯದಲ್ಲಿ ಅಳವಡಿಸಿ, ವಿದ್ಯಾರ್ಥಿಗಳಿಗೆ ಬೋಧನೆ ಮಾಡಿಸಿದವರಿಗೆ ದೇಶಭಕ್ತನೊಬ್ಬನ ಭಾಷಣವನ್ನು ಅರಗಿಸಿಕೊಳ್ಳಲು ಆಗದೆ ಇರುವುದು ರಾಜಕೀಯ ಕಾರಣಗಳಲ್ಲದೇ ಬೇರೇನೂ ಅಲ್ಲ. ಹೆಡಗೆವಾರ್ ಅವರ ವಿಚಾರಗಳನ್ನು ಇಂದಿನ ಯುವಕರು ತಿಳಿದುಕೊಂಡರೆ ಕಮ್ಯೂನಿಸ್ಟ್ ವಿಚಾರಗಳನ್ನು ವಿರೋಧಿಸುತ್ತಾರೆ ಎಂಬ ಭಯ ಕಾಡುತ್ತಿರುವಂತಿದೆ. ಅನೇಕರಿಗೆ ಹೆಡಗೆವಾರ್ ಎಂದರೆ ಕೇವಲ ಆರ್‌ಎಸ್‌ಎಸ್ ಸಂಸ್ಥಾಪಕ ಎಂದಷ್ಟೇ ಗೊತ್ತು. ಆದರೆ ಅವರ ಹಿನ್ನೆಲೆ ಏನು? ಅವರ ಕೊಡುಗೆ ಏನು? ದೇಶಕ್ಕಾಗಿ ಅವರು ಏನು ಮಾಡಿದರು? ಎಂಬ ಮಾಹಿತಿ ಮಾತ್ರ ಬಹಳ ಜನರಿಗೆ ಗೊತ್ತಿಲ್ಲ. ಹೀಗಾಗಿಯೇ ವಿನಾಕಾರಣ ವಿರೋಧಿಸುತ್ತಿದ್ದಾರೆ.

ವೃತ್ತಿಯಲ್ಲಿ ವೈದ್ಯರಾದ ಹೆಡಗೆವಾರ್ ಅವರು ಮನಸ್ಸು ಮಾಡಿದ್ದರೆ ಅಂದಿನ ಬ್ರಿಟಿಷ್ ಸರ್ಕಾರದಲ್ಲೇ ಅತ್ಯುನ್ನತ ಹುದ್ದೆಯನ್ನು ಗಿಟ್ಟಿಸಿಕೊಂಡು ಐಷಾರಾಮಿ ಜೀವನ ನಡೆಸಬಹುದಿತ್ತು. ಆದರೆ ಅಂದಿನ ದಿನಗಳಲ್ಲಿ ಭಾರತೀಯರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯಗಳನ್ನು ಕಂಡು ಹೆಡಗೆವಾರ್ ಅವರಿಗೆ ತಮ್ಮ ಜೀವನಕ್ಕಿಂತ ದೇಶದ ಭವಿಷ್ಯವೇ ಮುಖ್ಯ ಎಂಬ ನಿರ್ಧಾರಕ್ಕೆ ಬಂದರು. ಆ ಕುರಿತು ತೀವ್ರವಾಗಿ ಚಿಂತಿಸಿದ ಹೆಡಗೆವಾರ್ ಅವರಿಗೆ ಭಾರತದಲ್ಲಿ ಹಿಂದೂಗಳ ಮೇಲೆ ಹಿಂದಿನಿಂದ ನಡೆಯುತ್ತಿದ್ದ ವಿದೇಶಿ ದೌರ್ಜನ್ಯದ ಸಹಿಷ್ಣುತಾ ಗುಣ, ಹಿಂದೂಗಳು ಸೃಷ್ಟಿಸಿದ ವರ್ಗೀಕೃತ ಸಮಾಜ; ಅಸ್ಪೃಶ್ಯತೆ ಮುಂತಾದವುಗಳೆಲ್ಲಾ ಹಿಂದೂಗಳ ಮೂಲ ಸ್ವಭಾವದಿಂದಲೇ ಬಂದೊದಗಿರುವಂತದ್ದು ಎಂಬ ನಿರ್ಧಾರ ದೃಢವಾಗುತ್ತಾ ಬಂತು. ಇವಕ್ಕೆಲ್ಲಾ ಅವರಿಗೆ ಕಂಡ ಪರಿಹಾರವೆಂದರೆ ಹಿಂದೂಗಳನ್ನು ಒಂದಾಗಿ ಬೆಸೆಯುವಂತಹ ಶಿಸ್ತು ಮತ್ತು ರಾಷ್ಟ್ರೀಯ ಸ್ವರೂಪವನ್ನು ಹೊಂದಿರುವ ಒಂದು ಸಾಂಸ್ಕೃತಿಕ ಒಕ್ಕೂಟವನ್ನು ಸ್ಥಾಪಿಸುವುದು. ಆ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದೇ ಆರ್.ಎಸ್.ಎಸ್. (ರಾಷ್ಟ್ರೀಯ ಸ್ವಯಂಸೇವಕ ಸಂಘ) ಎಂಬ ಸಂಘಟನೆ. ಭಾರತದ ಸ್ವಾತಂತ್ರ್ಯಕ್ಕೂ ಮುನ್ನ ಅನುಭವಿಸಿದ ಅನೇಕ ಕಷ್ಟಕರ ಸನ್ನಿವೇಶಗಳಲ್ಲಿ ಆರ್.ಎಸ್.ಎಸ್. ಮಹತ್ವದ ಕಾರ್ಯಗಳನ್ನು ನಡೆಸಿದೆ. ಜನಸಮುದಾಯವಾದ ಹಿಂದೂಗಳಲ್ಲಿ ಆರ್.ಎಸ್.ಎಸ್. ಸ್ವಾತಂತ್ರ್ಯದ ಬಗ್ಗೆ ಜಾಗೃತಿಯನ್ನು, ಒಗ್ಗಟ್ಟಿನ ಮಹತ್ವವನ್ನು ಅಂದು ಮೂಡಿಸಲು ಪ್ರಮುಖ ಪಾತ್ರ ವಹಿಸಿದೆ. ಅಂತಹವರ ಭಾಷಣವನ್ನು ಪಠ್ಯದಲ್ಲಿ ಅಳವಡಿಸಿದರೆ ತಪ್ಪೇನಿದೆ ಎಂಬುದನ್ನು ವಿರೋಧಿಸುವವರು ಪ್ರಶ್ನಿಸಿಕೊಳ್ಳಬೇಕಿದೆ.

–ಬೇ.ನ. ಶ್ರೀನಿವಾಸಮೂರ್ತಿ, ಹಿರಿಯ ನಾಗರಿಕರು, ತುಮಕೂರು.

ಪ್ರಚಾರ ಗಿಟ್ಟಿಸುವ ಶೋಕಿಯಲ್ಲಿ ಶಾಸಗಿ ಶಾಲೆಗಳು

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶದಿಂದ ಉನ್ನತ ಶ್ರೇಣಿ ಪಡೆದಿರುವ ವಿದ್ಯಾರ್ಥಿಗಳ ಜೊತೆಗೆ ಶಾಲೆಗಳ ಹೆಸರು ಹಾಕಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ನಮ್ಮ ಖಾಸಗಿ ಶಾಲೆಗಳು ಓದದ ಹಾಗೂ ಫೇಲ್ ಆದ ವಿದ್ಯಾರ್ಥಿಗಳನ್ನು, ಶಾಲೆಯಿಂದ ಹೊರ ಹಾಕುತ್ತಿದ್ದಾರೆ (8ನೇ ತರಗತಿ ಮತ್ತು 9ನೇ ತರಗತಿ) ಬರೀ ಓದುವ ವಿದ್ಯಾರ್ಥಿಗಳನ್ನು, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕೂರಿಸುತ್ತಿದ್ದಾರೆ. ಇದೆಲ್ಲಾ ಬರೀ ಪರ್ಸಂಟೇಜ್‌ಗೋಸ್ಕರ. ಹೀಗಾಗಿ ಓದಿನಲ್ಲಿ ಹಿಂದುಳಿದ ಮಕ್ಕಳು ಮತ್ತು ಪೋಷಕರು ಕಂಗಾಲಾಗಿದ್ದಾರೆ.

ಹಿಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಓದದ ಮಕ್ಕಳ ಬಗ್ಗೆ ಹೆಚ್ಚು ಗಮನಹರಿಸಿ ಅವರನ್ನು ಮುಂದಕ್ಕೆ ತರುತ್ತಿದ್ದರು. ಆದರೆ ಈಗ ಎಲ್ಲವೂ ಫಲಿತಾಂಶಕ್ಕಾಗಿ ಅಷ್ಟೆ, ಇದೆಷ್ಟು ಸಮಂಜಸ? ಇದರ ಬಗ್ಗೆ ಶಿಕ್ಷಣ ಸಚಿವರು ಗಮನಹರಿಸುವರೆ? ಶಾಲೆಯಿಂದ ಈ ರೀತಿಯಲ್ಲಿ ಹೊರಗುಳಿದ ಮಕ್ಕಳಿಗೆ ನ್ಯಾಯ ದೊರಕಬಹುದೇ? ಅವರ ಭವಿಷ್ಯವೂ ಮುಂದೆ ಉಜ್ವಲವಾಗುವುದೇ?

– ನೊಂದ ಪೋಷಕರು, ಮೈಸೂರು.

ರೈಲಿನಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡಿ

ಮಾನ್ಯರೆ,

ಪ್ರಸ್ತುತ ಸುಮಾರು 67000 ಕಿ.ಮಿ ಉದ್ದದ ಮಾರ್ಗ ಮತ್ತು 121000 ಕಿ.ಮಿ ಉದ್ದದ ಹಳಿಗಳನ್ನು ಹೊಂದಿರುವ ಭಾರತದ ರೈಲ್ವೆಯಲ್ಲಿ ಸುಮಾರು ಹದಿನಾಲ್ಕು ಲಕ್ಷ ಜನ ಕೆಲಸ ಮಾಡುತ್ತಾರೆ ಮತ್ತು ಪ್ರತಿದಿನ ಎರಡೂವರೆ ಕೋಟಿಗೂ ಅಧಿಕ ಜನರು ರೈಲ್ವೆ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಇಂತಹ ಬಹುಪಯೋಗಿ ರೈಲ್ವೆ ವ್ಯವಸ್ಥೆಯಲ್ಲಿ ಸ್ವಚ್ಛತೆಗೆ ಪ್ರಾಮುಖ್ಯತೆ ಕೊಡುವುದು ಅತ್ಯವಶ್ಯಕ. ರೈಲಿನಲ್ಲಿ ಪ್ರಯಾಣಿಸುವ ಪ್ರಯಾಣಿಕರು ಮತ್ತು ರೈಲ್ವೆ ಸಿಬ್ಬಂದಿ ಇಬ್ಬರು ಸ್ವಚ್ಛತೆಯ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ. ರೈಲಿನಲ್ಲಿ ಪ್ರಯಾಣಿಕರಿಗೆ ತರಲಾಗುವ ತಿಂಡಿ ತಿನಿಸುಗಳ ಗುಣಮಟ್ಟ ಕಾಪಾಡಿಕೊಳ್ಳುವುದು ರೈಲ್ವೆ ಇಲಾಖೆಯ ಕರ್ತವ್ಯವಾಗಿರುತ್ತದೆ. ಸ್ವಚ್ಛತೆ ಮತ್ತು ಉತ್ತಮ ಗುಣಮಟ್ಟದ ಅಹಾರ ಪೂರೈಕೆ ಮಾಡುವೆಡೆಗೆ ಸರ್ಕಾರ ಗಮನಹರಿಸಬೇಕು ಮತ್ತು ರೈಲ್ವೆ ವ್ಯವಸ್ಥೆಯ ಉನ್ನತೀಕರಣಕ್ಕೆ ಸಹಕರಿಸಬೇಕು.

–ರಾ.ಸುಮ ಭಟ್, ಚಿಕ್ಕಮಗಳೂರು.

ಮೈಸೂರಲ್ಲೂ ಇಂತಹ ದುರ್ಘಟನೆ ನಡೆಯುವುದನ್ನು ತಪ್ಪಿಸಿ

ಮಾನ್ಯರೆ,



ಶುಕ್ರವಾರ ಬೆಂಗಳೂರಲ್ಲಿ ನಾಲ್ವರು ಯುವಕರು, ಫುಟ್‌ಪಾತ್ ಅತಿಕ್ರಮಣ ಹಾಗೂ ಅಲ್ಲಿ ವಾಹನ ನಿಲುಗಡೆ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ರಸ್ತೆಗಿಳಿದು ನಡೆದುಕೊಂಡು ಹೋಗುವಾಗ ವೇಗವಾಗಿ ಬಂದ ಕಾರು ಅವರಿಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸ್ಥಳದಲ್ಲೇ ಅಸುನೀಗಿ, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಇದೇ ರೀತಿಯ ಅಪಘಾತಗಳು ಮೈಸೂರಲ್ಲೂ ನಡೆಯುವ ಸಾಧ್ಯತೆಗಳು ಹೆಚ್ಚಾಗಿವೆ. ಮೈಸೂರಿನ ಪ್ರಮುಖ ರಸ್ತೆಗಳ ಫುಟ್‌ಪಾತ್‌ಗಳು ಆಟೋ ಕನ್ಸಲ್ಟೆಂಟ್‌ನವರ ಕಾರು ನಿಲುಗಡೆ ಸ್ಥಳಗಳಾಗಿವೆ. ಭಾರೀ ವಾಣಿಜ್ಯ ವಹಿವಾಟಿನ ಸ್ಥಳಗಳಾಗಿ ಪರಿ ವರ್ತನೆಗೊಂಡಿವೆ. ಇದರ ಬಗ್ಗೆ ಸಂಚಾರಿ ಪೊಲೀಸರಾಗಲಿ, ನಗರ ಪಾಲಿಕೆ ಸಿಬ್ಬಂದಿ ಗಳು ತೆರವು ಮಾಡಿಸುವ ಧೈರ್ಯ (!) ಮಾಡುತ್ತಿಲ್ಲ. ಇಂತಹ ಕಡೆ ಪಾದಚಾರಿ ಗಳು ತಮ್ಮನ್ನು ಅಪಾಯಕ್ಕೆ ಒಡ್ಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈಗಲಾದರೂ ಸಂಬಂಧಿಸಿದ ಅಧಿಕಾರಿ ವರ್ಗ ಎಚ್ಚೆತ್ತುಕೊಳ್ಳಬೇಕಾಗಿದೆ.

– ನಾಗೇಂದ್ರ, ಗೋಕುಲಂ, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಅಮೇರಿಕೆಗೆ ಭಾರತದ ನೀತಿ ಪಾಠ

> ವಾಸ್ತವದಲ್ಲಿ ಡೆಮಾಕ್ರಾಟಿಕ್ ಪಕ್ಷದ ನೀತಿಯಲ್ಲಿ ಮಾನವ ಹಕ್ಕು ಒಂದು ಪ್ರಮುಖ ಅಜೆಂಡಾ ಆಗಿದೆ. ಈ ಪಕ್ಷ ಸ್ವತಃ ತನ್ನನ್ನು ಮಾನವ ಹಕ್ಕಿನ ಸಂರಕ್ಷಕನಂತೆ ಬಿಂಬಿಸಿಕೊಳ್ಳುತ್ತಿದೆ. ಇದಕ್ಕನುಗುಣವಾಗಿ ಬ್ಲಿಂಕನ್ ದೇಶದೊಳಗಿನ ಕೆಲವು ತಥಾಕಥಿತ ಮಾನವ ಹಕ್ಕು ಹೋರಾಟಗಾರರು, ಓಬಿಓಗಳನ್ನು ಸಂತುಷ್ಟಗೊಳಿಸಲು ಈ ಹೇಳಿಕೆ ನೀಡಿದ್ದಾರೆ. ಜಗತ್ತಿನ ದೊಡ್ಡಣ್ಣನೆನಿಸಿರುವ ಅಮೇರಿಕದ ವಿದೇಶ ನೀತಿಯಲ್ಲಿ ಬ್ಲಾಕ್‌ಮೇಲ್ (Blackmail) ತಂತ್ರಗಾರಿಕೆ ಒಂದು ಪ್ರಮುಖ ಅಸ್ತ್ರವಾಗಿದೆ. ದುರ್ಬಲ ನಾಯಕತ್ವ, ಅಸ್ಥಿರ ರಾಜಕೀಯ, ಆರ್ಥಿಕ ಬಿಕ್ಕಟ್ಟು ಇರುವ ದೇಶಗಳ ಮೇಲೆ ಮಾನವ ಹಕ್ಕು ಉಲ್ಲಂಘನೆಯ ಆರೋಪ ಹೊರಿಸಿ ಅವರನ್ನು ತನ್ನ ಪರವಾಗಲು ವಿವಶಗೊಳಿಸುವುದು ಅಮೇರಿಕದ ಒಂದು ಪ್ರಬಲ ಕಾರ್ಯತಂತ್ರವಾಗಿದೆ.

ಅಮೇರಿಕದ ರಾಜಧಾನಿ ವಾಷಿಂಗ್‌ಟನ್‌ನಲ್ಲಿ ಕಳೆದ ತಿಂಗಳು ಭಾರತ–ಅಮೇರಿಕ ನಡುವೆ 2+2 ಸಚಿವ ಸ್ತರದ ನಾಲ್ಕನೇ ಸುತ್ತಿನ ಮಾತುಕತೆ ನಡೆಯಿತು. ಈ ಸಭೆಯಲ್ಲಿ ಭಾರತದ ಪರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಭಾಗವಹಿಸಿದರೆ, ಅಮೇರಿಕದ ಪರ ವಿದೇಶಾಂಗ ಕಾರ್ಯದರ್ಶಿ ಎಂಟನಿ ಬ್ಲಿಂಕೆನ್ ಮತ್ತು ರಕ್ಷಣಾ ಕಾರ್ಯದರ್ಶಿ ಆಸ್ಟಿನ್ ಲಾಯ್ಡ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅನುಸರಿಸಬೇಕಾದ ಪದ್ಧತಿ ಮತ್ತು ಶಿಷ್ಟಾಚಾರ (Protocol) ಮೀರಿ ಬ್ಲಿಂಕನ್‌ರು ಭಾರತದಲ್ಲಿ ತಥಾಕಥಿತ ಮಾನವ ಹಕ್ಕು ಉಲ್ಲಂಘನೆ ಬಗ್ಗೆ ಪ್ರಸ್ತಾಪಿಸುತ್ತಾ "ಇತ್ತೀಚಿನ ದಿನಗಳಲ್ಲಿ ಭಾರತದಲ್ಲಾಗುತ್ತಿರುವ ಕೆಲವು ಆತಂಕಕಾರಿ ಬೆಳವಣಿಗೆಗಳ ಮೇಲೆ ಅಮೇರಿಕ ಗಮನ ವಿರಿಸಿದೆ. ಕೆಲವು ರಾಜ್ಯಗಳ ಸರಕಾರಗಳು, ಪೋಲೀಸರು ಮತ್ತು ಜೈಲು ಅಧಿಕಾರಿಗಳಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ" ಎಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದರು. ಆಗ ಭಾರತದ ವಿದೇಶಾಂಗ ಮಂತ್ರಿ ಎಸ್.ಜೈಶಂಕರ್ ಶಿಷ್ಟಾಚಾರ ಪಾಲಿಸುತ್ತಾ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಆದರೆ ಎರಡು ದಿನಗಳ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟವಾಗಿ "ಭಾರತದ ನೀತಿ, ನಿಯಮ, ಧೋರಣೆಗಳ ಕುರಿತಾಗಿ ಜನರು ಅಗತ್ಯವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಅದೇ ಕಾಲಕ್ಕೆ ಆರೋಪಗಳಿಗೆ ಪ್ರತಿಟೀಕೆ, ಪ್ರತ್ಯಾರೋಪ ಮಾಡುವ ಹಕ್ಕು ಖಂಡಿತವಾಗಿಯೂ ಭಾರತಕ್ಕೆ ಇದೆ" ಎಂದು ಜೈಶಂಕರ್ ಕಟುವಾಗಿ ಪ್ರತಿಕ್ರಿಯೆ ನೀಡಿದರು. ಈ ಹೇಳಿಕೆ ಮೂಲಕ ಜೈಶಂಕರ್‌ರವರು ಭಾರತದ ಯೋಚನೆ ಈಗ ಹಿಂದಿನಂತೆ ರಕ್ಷಣಾತ್ಮಕವಾಗಿಲ್ಲ ಎಂಬ ಸಂಕೇತ ನೀಡಿದ್ದಾರೆ.

ಬ್ಲಿಂಕನ್‌ರ ಹೇಳಿಕೆ ಹಿಂದಿನ ಉದ್ದೇಶ: ವಾಸ್ತವದಲ್ಲಿ ಡೆಮಾಕ್ರಾಟಿಕ್ ಪಕ್ಷದ ನೀತಿಯಲ್ಲಿ ಮಾನವ ಹಕ್ಕು ಒಂದು ಪ್ರಮುಖ ಅಜೆಂಡಾ ಆಗಿದೆ. ಈ ಪಕ್ಷ ಸ್ವತಃ ತನ್ನನ್ನು ಮಾನವ ಹಕ್ಕಿನ ಸಂರಕ್ಷಕನಂತೆ ಬಿಂಬಿಸಿಕೊಳ್ಳುತ್ತಿದೆ. ಇದಕ್ಕನುಗುಣವಾಗಿ ಬ್ಲಿಂಕನ್ ದೇಶದೊಳಗಿನ ಕೆಲವು ತಥಾಕಥಿತ ಮಾನವ ಹಕ್ಕು ಹೋರಾಟಗಾರರು, NGOಗಳನ್ನು ಸಂತುಷ್ಟಗೊಳಿಸಲು ಈ ಹೇಳಿಕೆ ನೀಡಿದ್ದಾರೆ. ಜಗತ್ತಿನ ದೊಡ್ಡಣ್ಣನೆನಿಸಿರುವ ಅಮೇರಿಕದ ವಿದೇಶ ನೀತಿಯಲ್ಲಿ ಬ್ಲಾಕ್‌ಮೇಲ್ (Blackmail) ತಂತ್ರಗಾರಿಕೆ ಒಂದು ಪ್ರಮುಖ ಅಸ್ತ್ರವಾಗಿದೆ. ದುರ್ಬಲ ನಾಯಕತ್ವ ಅಸ್ಥಿರ ರಾಜಕೀಯ, ಆರ್ಥಿಕ ಬಿಕ್ಕಟ್ಟು ಇರುವ ದೇಶಗಳ ಮೇಲೆ ಮಾನವ ಹಕ್ಕು ಉಲ್ಲಂಘನೆಯ ಆರೋಪ ಹೊರಿಸಿ ಅವರನ್ನು ತನ್ನ ಪರವಾಗಲು ವಿವಶಗೊಳಿಸುವುದು ಅಮೇರಿಕದ ಒಂದು ಪ್ರಬಲ ಕಾರ್ಯತಂತ್ರವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತವು ಸ್ವತಂತ್ರ ವಿದೇಶಿ ನೀತಿ ಅನುಸರಿಸುತ್ತಿರುವುದು ಅಮೇರಿಕದ ಅಸಹನೆಯ ನಿಜವಾದ ಕಾರಣವಾಗಿದೆ. ಭಾರತ ಈ ನೀತಿ ತ್ಯಜಿಸಿ ಅಮೇರಿಕ ಪರವಾಗಬೇಕೆಂಬ ಉದ್ದೇಶದಿಂದ ಬ್ಲಿಂಕನ್ ಈ ಆರೋಪ ಮಾಡಿದ್ದರು. ಆದರೆ ಎಸ್. ಜೈಶಂಕರ್‌ರವರ ಪ್ರತ್ಯುತ್ತರದಿಂದ ಅಮೇರಿಕ ನಿರುತ್ತರಗೊಂಡಿತು.

ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದಂತೆ ಭಾರತವು ರಷ್ಯಾ ಪರ ವಹಿಸಿರುವುದು ಅಮೇರಿಕದ ಅಸಹನೆಯ ಇನ್ನೊಂದು ಕಾರಣವಾಗಿದೆ. ಇದಕ್ಕಾಗಿ ಭಾರತವು ಪರಿಣಾಮ ಎದುರಿಸಲು ಸಿದ್ಧವಿರಬೇಕು ಎಂದು ಮತ್ತೆ ಮತ್ತೆ ಎಚ್ಚರಿಕೆ ನೀಡುತ್ತಿದ್ದ ಹಿನ್ನೆಲೆಯಲ್ಲಿ ಎಸ್.ಜೈಶಂಕರ್‌ರ ಹೇಳಿಕೆ ಗಮನಾರ್ಹವಾಗಿದೆ. ಮಾನವ ಹಕ್ಕುಗಳ ಕುರಿತಾಗಿ ಭಾರತಕ್ಕೆ ಬುದ್ಧಿವಾದ ಹೇಳುತ್ತಿರುವ ಅಮೇರಿಕದ ಸ್ವಂತ ದಾಖಲೆ ಕರಾಳವಾಗಿದೆ, ರಕ್ತಸಿಕ್ತವಾಗಿದೆ.

ಅಮೇರಿಕದ ಮಾನವ ಹಕ್ಕುಗಳ ರಕ್ಷಣೆಯ ದಾಖಲೆ: ಅಮೇರಿಕದಲ್ಲಿ ಶ್ವೇತವರ್ಣೀಯರ ಶ್ರೇಷ್ಠತೆಯನ್ನು ಸಾರುವ ಅನೇಕ ಸಂಘಟನೆಗಳು ಕ್ರಿಯಾಶೀಲವಾಗಿವೆ. ಕರಿಯರ ಹಕ್ಕುಗಳ ಪ್ರತಿಪಾದಕ, ವರ್ಣಭೇದ ನೀತಿ ವಿರೋಧಿಸಿದ ಮಾರ್ಟಿನ್ ಲೂಥರ್ ಕಿಂಗ್ (ಜ್ಯೂ) ಹತ್ಯೆ ಇದೇ ಅಮೇರಿಕದಲ್ಲಾಗಿತ್ತು. 2013ರಲ್ಲಿ ಅಮೇರಿಕದ ಕರಿಯರು ತಮ್ಮ ಸುರಕ್ಷತೆಗಾಗಿ Black Lives Matters ಎಂಬ ಹೆಸರಿನಲ್ಲಿ ಚಳವಳಿ ಪ್ರಾರಂಭಿಸಿರುವುದು ಅಲ್ಲಿ ವರ್ಣಭೇದ ಇನ್ನೂ ಜೀವಂತವಾಗಿರುವುದಕ್ಕೆ ಸಾಕ್ಷಿಯಾಗಿದೆ. ಅಮೇರಿಕ ಓರ್ವ ಅಶ್ವೇತ ವ್ಯಕ್ತಿಯನ್ನು ರಾಷ್ಟ್ರಪತಿಯಾಗಿ ಕಾಣಲು ಸ್ವತಂತ್ರಗೊಂಡ ನಂತರ 140 ವರ್ಷ ಕಾಯಬೇಕಾಯಿತು. ವಿಪರ್ಯಾಸವೆಂದರೆ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವದ ದೇಶವೆನ್ನುವ ಅಮೇರಿಕ ಜಾಗತಿಕ ರಾಜಕೀಯದಲ್ಲಿ ನಿರಂಕುಶ ಪ್ರಭುತ್ವ, ಸರ್ವಾಧಿಕಾರಿಗಳಿಗೆ ಬೆಂಬಲ ನೀಡಿತು. ಇದಕ್ಕೆ ಮುಖ್ಯ ಕಾರಣ ಅಮೇರಿಕಕ್ಕೆ ಭಾರೀ ಆದಾಯ ತರುವ ಶಸ್ತ್ರಾಸ್ತ್ರ ರಫ್ತು ವ್ಯವಹಾರವಾಗಿದೆ.



ನರೇಂದ್ರ ಮೋದಿ



ರಾಜನಾಥ್ ಸಿಂಗ್



ಎಸ್. ಜೈಶಂಕರ್

ಜಗತ್ತಿನ ಒಟ್ಟು ಶಸ್ತ್ರಾಸ್ತ್ರ ವ್ಯವಹಾರದಲ್ಲಿ ಅಮೇರಿಕದ ಪಾಲು ಶೇ.37 ಆಗಿದೆ. ದುರ್ಬಲ ದೇಶಗಳಲ್ಲಿ ಅಶಾಂತಿ, ಬಂಡಾಯ, ಅಂತರ್ಯುದ್ಧ ಹಾಗೂ ಇನ್ನಿತರ ಸಮಸ್ಯೆಗಳನ್ನು ಸೃಷ್ಟಿಸಿ ಅಲ್ಲಿನ ಹೋರಾಡುವ ಬಂಡುಕೋರ ಗುಂಪುಗಳಿಗೆ ಶಸ್ತ್ರಾಸ್ತ್ರ ಪೂರೈಸುವುದು ಅಮೇರಿಕದ ಮಾನವ ಹಕ್ಕು ರಕ್ಷಣೆಯ ಹಿಂದಿನ ಕರಾಳ ಮುಖವಾಗಿದೆ.

ಮಾನವ ಹಕ್ಕುಗಳನ್ನು ಕ್ರೂರವಾಗಿ ಹತ್ತಿಕ್ಕಿ ಆಡಳಿತ ನಡೆಸಿದ ಸರ್ವಾಧಿಕಾರಿಗಳಾದ ಇರಾನ್‌ನ ಮಹ್ಮದ್ ಷಾರೇಜಾ ಪಹ್ಲವಿ, ಫಿಲಿಫೈನ್ಸ್‌ನ ಫರ್ಡಿನಾಂಡ್ ಮಾರ್ಕೊಸ್‌ರನ್ನು ಅಮೇರಿಕ ಬೆಂಬಲಿಸಿತ್ತು. ಇರಾನ್‌ನ ಸದ್ದಾಂಹುಸೇನ್‌ರಿಗೆ ಆರಂಭಿಕ ವರ್ಷಗಳಲ್ಲಿ ಬೆಂಬಲ ನೀಡಿತ್ತು. ಭಾರತದ ವಿರುದ್ಧ ಭಯೋತ್ಪಾದನೆ ನಡೆಸುತ್ತಿರುವ, ಮತೀಯ ಅಲ್ಪಸಂಖ್ಯಾತರಿಗೆ ದುಃಸ್ವಪ್ನವಾಗಿರುವ ಪಾಕಿಸ್ತಾನಕ್ಕೆ ಅಮೇರಿಕವು ನಿರಂತರವಾಗಿ ಆರ್ಥಿಕ ನೆರವು, ಶಸ್ತ್ರಾಸ್ತ್ರಗಳನ್ನು ನೀಡುತ್ತಿದೆ. ಜಾಗತಿಕ ಭಯೋತ್ಪಾದಕ ಬಿನ್–ಲಾಡೆನ್‌ನನ್ನು ಸೃಷ್ಟಿಸಿದ್ದು ಅಮೇರಿಕ, ಅಫ್ಘಾನಿಸ್ಥಾನದಿಂದ ರಷ್ಯನ್ ಸೇನೆಯನ್ನು ತೆರವುಗೊಳಿಸಲು ಮೂಲಭೂತವಾದಿ ತಾಲಿಬಾನನ್ನು ಸೃಷ್ಟಿಸಿತು. 1954–75ರವರೆಗೆ ಸುಮಾರು 20 ವರ್ಷಗಳಷ್ಟು ಸುದೀರ್ಘ ಕಾಲ ವಿಯೆಟ್ನಾಂನಲ್ಲಿ ನಡೆದ ಅಂತರ್ಯುದ್ಧದಲ್ಲಿ ಅಮೇರಿಕದ ಸೇನೆ ನೇರವಾಗಿ ಭಾಗವಹಿಸಿತು. ಈ ಯುದ್ಧದಲ್ಲಿ ಸುಮಾರು 20 ಲಕ್ಷದಷ್ಟು ವಿಯೆಟ್ನಾಂ ನಾಗರಿಕರ ಹತ್ಯೆಯಾಯಿತು. ಈ ಯುದ್ಧದಲ್ಲಿ ನ್ಯಾಫ್ಥಾಂನಂತಹ ನಿಷೇಧಿತ ರಾಸಾಯನಿಕ ಬಾಂಬ್‌ಗಳನ್ನು ಪ್ರಯೋಗಿಸಿದ ಅಮೇರಿಕಕ್ಕೆ ಮಾನವ ಹಕ್ಕು, ಬದುಕುವ ಹಕ್ಕಿನ ಬಗ್ಗೆ ಹೇಳಿಕೆ ನೀಡುವುದಕ್ಕೆ ಅರ್ಹತೆಯಾಗಲಿ, ನೈತಿಕತೆಯಾಗಲಿ ಇರುವುದಿಲ್ಲ.

ಅಮೇರಿಕದ ಧಾರ್ಮಿಕ ಸ್ವಾತಂತ್ರ್ಯ ಆಯೋಗ: ಅಮೇರಿಕ ಸರಕಾರವು 1998ರಲ್ಲಿ ಒಂದು "ಅಂತರರಾಷ್ಟ್ರೀಯ ಧಾರ್ಮಿಕ ಆಯೋಗ" ಸ್ಥಾಪಿಸಿತು. ಈ ಆಯೋಗವು ಜಗತ್ತಿನ ವಿವಿಧ ದೇಶಗಳಲ್ಲಿ ನಡೆಯುವ ಧಾರ್ಮಿಕ, ಮಾನವ ಹಕ್ಕಿನ ಮೇಲಿನ ಹಲ್ಲೆಗಳ ಬಗ್ಗೆ ವರದಿಗಳನ್ನು ತಯಾರಿಸಿ ಅಮೇರಿಕ ಸರಕಾರಕ್ಕೆ ಸಲ್ಲಿಸಿ ಸಲಹೆಗಳನ್ನು ನೀಡುತ್ತದೆ. ಈ ಆಯೋಗವು ಕಳೆದ ಮೂರು ವರ್ಷಗಳಿಂದ "ಭಾರತದಲ್ಲಿ ಧಾರ್ಮಿಕ ಅಸಹಿಷ್ಣುತೆ ಹೆಚ್ಚುತ್ತಿರುವುದರಿಂದ ಅದನ್ನು ಚಿಂತಾಜನಕ ಸ್ಥಿತಿಯಿರುವ ಚೀನಾ, ಪಾಕಿಸ್ತಾನ, ರಷ್ಯಾ, ಉತ್ತರ ಕೊರಿಯಾದಂತಹ 29 ದೇಶಗಳ ಗುಂಪಿಗೆ ಸೇರಿಸಬೇಕೆಂದು ಅಮೇರಿಕ ಸರಕಾರಕ್ಕೆ ತಿಳಿಸಿದೆ. ವಾಸ್ತವಿಕವಾಗಿ ಈ ವರದಿಯ ಹಿಂದಿನ ಸತ್ಯ ಬೇರೆಯೇ ಆಗಿದೆ. ಭಾರತದ ಅಭಿವೃದ್ಧಿ ಸಹಿಸದ ಭಾರತೀಯರನ್ನು ಮತಾಂತರ ಮಾಡಬೇಕೆಂಬ ಉದ್ದೇಶವಿರುವ ಕೆಲವು ವ್ಯಕ್ತಿಗಳು, ಸಂಸ್ಥಾನಗಳು ಈ ಉದ್ದೇಶಕ್ಕಾಗಿ ಭಾರತದಲ್ಲಿ ಸಕ್ರಿಯರಾಗಿರುವ ಕೆಲವು ಬುದ್ಧಿಜೀವಿಗಳಿಗೆ, NGOಗಳಿಗೆ ಕಳೆದ ಕೆಲವು ವರ್ಷಗಳಿಂದ ಭಾರೀ ಪ್ರಮಾಣದ ದೇಣಿಗೆ ನೀಡುತ್ತಿದ್ದಾರೆ. ಭಾರತ ಸರಕಾರವು ಇತ್ತೀಚೆಗೆ ಈ ವಿದೇಶಿ ದೇಣಿಗೆಗಳ ಮೇಲೆ ನಿರ್ಬಂಧ ವಿಧಿಸಿರುವುದು ಈ ಆರೋಪದ ಹಿಂದಿರುವ ಕಾರಣವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಅಮೇರಿಕದ ಕೆಲವು ಬುದ್ಧಿಜೀವಿಗಳು ಭಾರತ, ಭಾರತೀಯರನ್ನು ಅತಾರ್ಕಿಕವಾಗಿ ನಿಂದಿಸುತ್ತಿದ್ದಾರೆ. ಪೆನ್ಸಿಲ್ವೇನಿಯಾ ವಿ.ವಿ.ಯ ಕಾನೂನು ವಿಭಾಗದ ಪ್ರೊ. ಎಮಿ ವ್ಯಾಕ್ಸ್ ದಕ್ಷಿಣ ಏಷ್ಯಾ ವಿಶೇಷವಾಗಿ ಭಾರತೀಯ ಮಹಿಳೆಯನ್ನು ಕೀಳಾಗಿ ಟೀಕಿಸುತ್ತಾರೆ. ಒಮ್ಮೆ ಇವರು "ಶ್ವೇತ ವರ್ಣೀಯರು ಅಶ್ವೇತರಿಗಿಂತ ಶ್ರೇಷ್ಠರೆಂದಿದ್ದರು. ಇದೇ ರೀತಿ ಕೆಲವು ಅಮೇರಿಕನ್ ಸೆನೆಟರ್‌ಗಳು ತಮ್ಮ ಭಾರತ ವಿರೋಧಿ ನೀತಿ, ಹೇಳಿಕೆಗಳಿಂದ ಪ್ರಸಿದ್ಧರಾಗಿದ್ದಾರೆ.

ಬದಲಾದ ಭಾರತ: 2014ರವರೆಗೆ ಭಾರತವು ರಾಜಕೀಯ ಕಾರಣಗಳಿಂದ ಜಗತ್ತಿನಲ್ಲಿ ಒಂದು ನಗಣ್ಯ ದೇಶವೆನಿಸಿತ್ತು. ಡಾ. ಮನಮೋಹನ ಸಿಂಗ್ ಅವಧಿಯಲ್ಲಿ ದೇಶದೊಳಗೆ ಭಯೋತ್ಪಾದಕ ಕೃತ್ಯ ನಡೆದಾಗಲೆಲ್ಲ ಪ್ರಧಾನಿ ಸಹಿತ ದೇಶದ ಉನ್ನತಾಧಿಕಾರಿಗಳು ಅಮೇರಿಕದ ಅಧ್ಯಕ್ಷರ ಬಳಿ ಪಾಕಿಸ್ತಾನಕ್ಕೆ ಬುದ್ಧಿವಾದ ಹೇಳಬೇಕೆಂದು ಒತ್ತಾಯಿಸುವ ದೀನ ದೃಶ್ಯ ಸಾಮಾನ್ಯವಾಗಿತ್ತು ಆದರೆ ಭಾರತವಿಂದು ಬದಲಾಗಿದೆ, ಬಲಶಾಲಿಯಾಗಿದೆ, ಸ್ವತಂತ್ರ ವಿದೇಶ ನೀತಿ ಹೊಂದಿದೆ. ಎಸ್. ಜೈಶಂಕರ್‌ರವರ ಇತ್ತೀಚಿನ ಕೆಲವು ಹೇಳಿಕೆಗಳು ಇದನ್ನು ಪುಷ್ಟೀಕರಿಸುತ್ತಿದೆ.

ರಷ್ಯಾದಿಂದ ಭಾರತ ಕಚ್ಚಾತೈಲ ಖರೀದಿಸುವ ವಿಷಯದಲ್ಲಿ ಯುರೋಪಿಯನ್ ದೇಶಗಳಿಗಿರುವಷ್ಟೇ ಹಕ್ಕು ಭಾರತಕ್ಕಿದೆ ಎಂದರು. ಇದೇ ರೀತಿ ಮಾನವ ಹಕ್ಕುಗಳ ವಿಷಯದಲ್ಲಿ ಎಸ್.ಜೈಶಂಕರ್ ಅವರು ಬ್ಲಿಂಕನ್‌ಗೆ ತಿರುಗೇಟು ನೀಡುತ್ತಾ "ಏಕ ಕಾಲಕ್ಕೆ ಟೀಕಾಕಾರರ ಟೀಕೆ, ಆರೋಪಗಳಿಗೆ ಪ್ರತಿಟೀಕೆ, ಪ್ರತ್ಯಾರೋಪ ಮಾಡುವ ಹಕ್ಕು ಭಾರತಕ್ಕೆ ಖಂಡಿತವಾಗಿಯೂ ಇದೆ. ಅದೇ ರೀತಿ ಅವರ ಧೋರಣೆಗಳು, ಅವರ ಹಿತಾಸಕ್ತಿಗಳು ಮತ್ತು ಇವಕ್ಕೆ ಮೂಲ ಕಾರಣವಾದ ಲಾಬಿಗಳು ಹಾಗೂ ಮತ ಬ್ಯಾಂಕ್ ಬಗ್ಗೆ ಪ್ರತಿಕ್ರಿಯಿಸಲು ಭಾರತಕ್ಕೂ ಹಕ್ಕಿದೆ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾ, ಕೆಲವು ದಿನಗಳ ಹಿಂದೆ ನ್ಯೂಯಾರ್ಕ್‌ನ ರಿಚ್ಮಂಡ್ ಹಿಲ್ ಪ್ರದೇಶದಲ್ಲಿ ಸಿಖ್ ಬಂಧುಗಳ ಮೇಲೆ ನಡೆದ ಹಲ್ಲೆಯನ್ನು ಪ್ರಸ್ತಾಪಿಸುವ ಮೂಲಕ ಬ್ಲಿಂಕನ್‌ಗೆ ಭಾರತವೀಗ ಟೀಕೆಗಳನ್ನು ಸುಮ್ಮನೆ ಸಹಿಸುವ ದೇಶವಲ್ಲ ಎಂಬ ಸ್ಪಷ್ಟ ಸಂದೇಶ ನೀಡಿದ್ದಾರೆ.

ಭಾರತದ ಬಳಿ ಈಗ ಶಕ್ತಿಶಾಲಿ ಸೇನೆ ಇದೆ. ಸೇನೆ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಬಲಿಷ್ಠ ನಾಯಕತ್ವದ ಸರಕಾರವಿದೆ. ದೇಶ ವಿರೋಧಿಗಳಿಗೆ ಬಲವಾದ ಹೊಡೆತ ನೀಡಲು ನಿರ್ಣಯಿಸುವ ಕ್ಷಮತೆ ಹಾಗೂ ಜಗತ್ತಿನ ಜನರ ನೋವುಗಳಿಗೆ ಸ್ಪಂದಿಸುವ ಮಾನವೀಯ ಮೌಲ್ಯಗಳನ್ನು ಅರ್ಥ ಮಾಡಿಕೊಂಡಿರುವ ನಾಯಕತ್ವವಿದೆ. ಹೀಗಾಗಿ ಭಾರತವನ್ನಿಂದು ಜಗತ್ತು ಗೌರವದಿಂದ ಕಾಣುತ್ತಿದೆ. ಇಂತಹ ನಾಯಕತ್ವವುಳ್ಳ ಸರಕಾರವನ್ನು ಅಧಿಕಾರದಲ್ಲಿ ಮುಂದುವರಿಸುವ ಹೊಣೆಗಾರಿಕೆ ಮಾತ್ರ ಭಾರತದ ಜನಸಾಮಾನ್ಯರಿಗಿದೆ.

ರಸ್ತೆಗಳ ದುಸ್ಥಿತಿ, ಸಂಸದರ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಪೊರೇಟರ್ಸ್ ಪ್ರತಿಭಟನೆ



ಮೈಸೂರು, ಮೇ 20(ಎಸ್‌ಬಿಡಿ)– ರಸ್ತೆಗಳ ದುಸ್ಥಿತಿ ಹಾಗೂ ಸಂಸದ ಪ್ರತಾಪ್ ಸಿಂಹ ಹೇಳಿಕೆ ಖಂಡಿಸಿ ನಗರ ಪಾಲಿಕೆ ಕಾಂಗ್ರೆಸ್ ಸದಸ್ಯರು, ಮೇಯರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೇಯರ್ ಸುದ್ದಿಗೋಷ್ಠಿ ಮುಗಿಯುತ್ತಿದ್ದಂತೆ ಅವರ ಕಚೇರಿ ಮುಂದೆ ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಸಿ.ಶ್ರೀಧರ್, ಸದಸ್ಯರಾದ ಶೌಕತ್‌ಪಾಷ, ಗೋಪಿ, ಉಷಾ, ಪ್ರದೀಪ್ ಚಂದ್ರ, ಶೋಭಾ ಸುನಿಲ್, ಹಾಸೀರಾ ಸೀಮಾ ಹಾಗೂ ಸೈಯದ್ ಹಸ್ರತ್ ಜಮಾಯಿಸಿ, ಭಿತ್ತಿಪತ್ರ ಪ್ರದರ್ಶಿಸುವುದರ ಜೊತೆಗೆ 'ರಸ್ತೆ ಗುಂಡಿ ಮುಚ್ಚಲು ವಿಫಲರಾಗಿರುವ ಬಿಜೆಪಿ ಮೇಯರ್‌ಗೆ, ಸಂಸ್ಕೃತಿ ಇಲ್ಲದ ಸಂಸದರಿಗೆ ಧಿಕ್ಕಾರ' ಎಂದು ಘೋಷಣೆ ಕೂಗಿ, ಕೆಲಕಾಲ ಪ್ರತಿಭಟಿಸಿದರು.


ಈ ವೇಳೆ ಅಯೂಬ್‌ಖಾನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ರಸ್ತೆ ಗುಂಡಿ ಮುಚ್ಚಲು ಆರೇಳು ತಿಂಗಳಿಂದ ಮೇಯರ್ ಹಾಗೂ ಆಯುಕ್ತರಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ನಾಲ್ಕೈದು ತಿಂಗಳ ಹಿಂದೆ ಸದಸ್ಯರು ಗಲಾಟೆ ಮಾಡಿದ್ದರಿಂದ ವಾರ್ಡ್‌ಗೆ 10 ಲಕ್ಷ ರೂ. ನೀಡಿದರು. ಆದರೆ ಅರ್ಧದಷ್ಟು ರಸ್ತೆ ಗುಂಡಿ ಮುಚ್ಚುವುದಕ್ಕೂ ಹಣ ಸಾಕಾಗಲಿಲ್ಲ. ಜನ ಕಾರ್ಪೊರೇಟರ್‌ಗಳಿಗೆ ತರಾಟೆ ತೆಗೆದುಕೊಳ್ಳುತ್ತಿದ್ದಾರೆ ಎಂದರು.

ಮೇಯರ್ ಕೊರಳಪಟ್ಟಿ ಹಿಡಿದು ಕೇಳಿ: ಸಂಸದ ಪ್ರತಾಪ್ ಸಿಂಹ, ಕಾರ್ಪೊರೇಟರ್‌ಗಳ ಕತ್ತಿನಪಟ್ಟಿ ಹಿಡಿದು ಕೆಲಸ ಮಾಡಿಸಿಕೊಳ್ಳಿ, ಅವರ ಮನೆ ಮುಂದೆ ಧರಣಿ ಮಾಡಿ ಎಂದೆಲ್ಲಾ ಹೇಳಿಕೆ ನೀಡಿದ್ದಾರೆ. ಆದರೆ ಅವರದೇ ಪಕ್ಷದ ಮೇಯರ್ ಇದ್ದಾರೆ ಎನ್ನುವುದನ್ನು ಮರೆತಿದ್ದಾರೆ. ಹಾಗಾದರೆ ಮೇಯರ್ ಕತ್ತಿನಪಟ್ಟಿ ಹಿಡಿದು ಕೇಳಬಹುದಿತ್ತು. ಅವರಿಗೆ ಆ ಶಕ್ತಿ ಇತ್ತು. ಸಂಸದರು ಕೇಳುವುದರಲ್ಲಿ ತಪ್ಪೇನಿಲ್ಲ. ನಾವು ಸಾರ್ವಜನಿಕ ಕೆಲಸಕ್ಕಾಗಿಯೇ ಇರುವುದು. ಆದರೆ ಪಾಲಿಕೆ ಸದಸ್ಯರಿಗೂ ಹಣಕಾಸಿನ ಇತಿಮಿತಿ ಇರುತ್ತದೆ. ಶಾಸಕರು ಎಲ್ಲೋ ಕುಳಿತು ತಮಗೆ ಬೇಕಾದ ಕೆಲಸ ಮಾಡಿಸಿಕೊಳ್ಳುತ್ತಾರೆ. ಅಧಿಕಾರಿ ಗಳಿಗೆ ಹೇಳಿ ಹಣ ಬಿಡುಗಡೆ ಮಾಡಿಸದಿದ್ದರೆ ವಾರ್ಡ್‌ಗಳಲ್ಲಿ ಕೆಲಸ ಮಾಡಲು ಹೇಗೆ ಸಾಧ್ಯ?. ಕೇಂದ್ರ, ರಾಜ್ಯ ಸರ್ಕಾರ ಹಾಗೂ ಪಾಲಿಕೆಯಲ್ಲೂ ಬಿಜೆಪಿ ಅಧಿಕಾರದಲ್ಲಿದ್ದರೂ ಹೀಗೆ ಮಾತನಾಡುವು ದರಲ್ಲಿ ಅರ್ಥವಿಲ್ಲ. ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ತಡೆಯುವ ನಿಟ್ಟಿನಲ್ಲಿ ಪ್ರತಾಪ್ ಸಿಂಹ ಬದ್ಧತೆ ತೋರಿದ ನಂತರ ಪಾಲಿಕೆ ಸದಸ್ಯರ ಬಗ್ಗೆ ಮಾತನಾಡಲಿ ಎಂದರು.

ಸಂಸದರ ಹೇಳಿಕೆಗೆ ಎದಿರೇಟು ನೀಡುವ ಭರದಲ್ಲಿ ಅಯೂಬ್‌ಖಾನ್, ಮಹಿಳಾ ಮೇಯರ್ ಕತ್ತಿನಪಟ್ಟಿ ಹಿಡಿದು ಕೇಳಬಹುದಿತ್ತು ಎಂದು ಹೇಳಿದ್ದು ಸರಿಯಲ್ಲ ಎಂದು ಅಲ್ಲಿದ್ದ ಕೆಲ ಸಾರ್ವಜನಿಕರು ಮಾತನಾಡಿಕೊಂಡರು.

ಕೇಂದ್ರ ಸಚಿವರಿಂದ ಟೆಕ್‌ಭಾರತ್ ವಸ್ತುಪ್ರದರ್ಶನ ಉದ್ಘಾಟನೆ

ಸಿಎಫ್‌ಟಿಆರ್‌ಐನಲ್ಲಿ ಶೋಕೇಸ್ ಅನಾವರಣ



ಮೈಸೂರು, ಮೇ 20(ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐ ಆವರಣ ದಲ್ಲಿ ಟೆಕ್‌ಭಾರತ್–2022 ತಂತ್ರಜ್ಞಾನ ಮೇಳದ ಅಂಗವಾಗಿ ಏರ್ಪಡಿಸಿರುವ ವಸ್ತುಪ್ರದರ್ಶನವನ್ನು, ಕೇಂದ್ರ ಸಚಿವರು ಗಳಾದ ಡಾ. ಜಿತೇಂದ್ರಸಿಂಗ್ ಹಾಗೂ ಶೋಭಾ ಕರಂದ್ಲಾಜೆ ಇಂದು ಉದ್ಘಾಟಿಸಿದರು.

ಸಿಎಫ್‌ಟಿಆರ್‌ಐ, ಲಘು ಉದ್ಯೋಗ ಭಾರತಿ ಹಾಗೂ ಐಎಂಎಸ್ ಫೌಂಡೇ ಷನ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಕೃಷಿ, ಆಹಾರ ಮತ್ತು ಆಹಾರ ತಂತ್ರಜ್ಞಾನ ಕುರಿತ 3 ದಿನಗಳ ಮೇಳದಲ್ಲಿ ದೇಶದ ವಿವಿಧ ಭಾಗಗಳ ಸಂಶೋಧನಾ ಸಂಸ್ಥೆಗಳು, ಉದ್ಯಮಿಗಳು, ಪ್ರಗತಿಪರ ರೈತರು, ಕೃಷಿ ಕ್ಷೇತ್ರದ ಸ್ಟೇಕ್‌ಹೋಲ್ಡರ್‌ಗಳು, ವಿಜ್ಞಾನಿಗಳು ಭಾಗವಹಿಸಿದ್ದು, ಆಹಾರ ತಂತ್ರಜ್ಞಾನಗಳ ಕುರಿತ ವಸ್ತುಪ್ರದರ್ಶನದಲ್ಲಿ 100ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದೆ. ಕೃಷಿ ಉಪ 'ಕರಣ, ಕೀಟನಾಶಕ, ರಸಗೊಬ್ಬರ ತಯಾ ರಿಕಾ ಕಂಪನಿಗಳು, ಆಹಾರ ಪದಾರ್ಥ, ದ್ವಿದಳ ಧಾನ್ಯ ಶೇಖರಣೆ, ಸಾಗಣೆ ಮಾಡುವ ಸಂಸ್ಥೆ, ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿರುವ ಸಂಸ್ಥೆಗಳು, ವಿವಿಧ ಕೈಗಾರಿಕೆಗಳು ವಸ್ತು ಪ್ರದರ್ಶನದಲ್ಲಿ ಮಳಿಗೆ ತೆರೆದು ತಮ್ಮ ಉತ್ಪನ್ನಗಳು, ಆಪರೇಟ್ ಮಾಡುವ ವಿಧಾನಗಳ ಬಗ್ಗೆ ಸ್ಥಳದಲ್ಲೇ ಡೆಮೋ ಮಾಡಿ ತೋರಿಸುತ್ತಿದ್ದಾರೆ. ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ತೆರೆದಿರುವ ವಸ್ತುಪ್ರದರ್ಶನಕ್ಕೆ ಉಚಿತ ಪ್ರವೇಶವಿದ್ದು, ಇಂಜಿನಿಯರಿಂಗ್ ಕಾಲೇಜು, ಆಹಾರ ಸಂಸ್ಕರಣಾ ವಿಭಾಗದ ವಿದ್ಯಾರ್ಥಿಗಳು, ಕೈಗಾರಿಕಾ ಸಂಘಗಳು ಪದಾಧಿಕಾರಿಗಳು, ಕೈಗಾರಿಕೋದ್ಯಮಿಗಳು ಭೇಟಿ ನೀಡಿ ವೀಕ್ಷಿಸುತ್ತಿದ್ದು ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ನಾಳೆ (ಮೇ 21) ಸಂಜೆ ವಸ್ತುಪ್ರದರ್ಶನ ಅಂತ್ಯಗೊಳ್ಳಲಿದೆ.

ನಂತರ ಸಚಿವರು, ಸಿಎಫ್‌ಟಿಆರ್‌ಐನ ಪ್ರಧಾನ ಕಟ್ಟಡದಲ್ಲಿ ಆರಂಭಿಸಿರುವ ಸಂಸ್ಥೆಯ ಇತಿಹಾಸ, ಹಿನ್ನೆಲೆ ಬಿಂಬಿಸುವ ಶೋಕೇಸ್ ಅನ್ನೂ ಟೇಪು ಕತ್ತರಿಸುವ ಮೂಲಕ ಅನಾವರಣಗೊಳಿಸಿದರು. ಅದೇ ವೇಳೆ ಸಂಸ್ಥೆ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಸಿಎಫ್‌ಟಿಆರ್‌ಐ ನಡೆದು ಬಂದ ದಾರಿ, ಅಭಿವೃದ್ಧಿಪಡಿಸಿರುವ ಯೋಜನೆಗಳು, ಮುಂದಿನ ಯೋಜನೆಗಳ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಸಚಿವರಿಗೆ ಪರಿಚಯಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com











FLATS FOR SALE

High End Luxury Flats

GOVIANU LUXURIA

Zoo road, opposite to Gandhi park, close to Mall of Mysore

Contact: 8103990990

www.govianu.com

RERA/1268/378/PR/200908/003588

Commercial Sites For Sale

Ring Road E/F 50x80 Sathagalli

VTU Opposite. Manasinagar

30x40 E/F (agent excuse)

9591348280

WANTED

Jnana Sanjeevini School, Hullahally

1) H.M. : M.A., B.Ed. or M.Sc., B.Ed. (5 years experience - 01)
2) Asst. Teacher : B.Sc., B.Ed. - 01 Physics and Maths
3) Asst. Teacher : B.Sc., B.Ed. - 02 Chemistry and Biology
4) Asst. Teacher : M.A., B.Ed. - 01 Kannada
5) Asst. Teacher : B.A., B.Ed. - 01 Hindi
6) Asst. Teacher : B.A., B.Ed. - 02 English
7) Asst. Teacher : B.A., D.Ed. or PUC, D.Ed. (English Medium) - 06
8) Asst.Teacher : PUC, NST - 02 (English Medium)

8904547285, 9845822136, 9035182477



I&II PUC ಗೆ ಉಚಿತ ಕೋಚಿಂಗ್

ಹೈಸ್ಕೂಲಿನ ಬೇಸಿಕ್ಸನ್ನೂ ಕವರ್‌ಮಾಡಿ ನಾವು ಪಿಯುಸಿಗೆ ಹೈಕ್ಲಾಸ್ ಕೋಚಿಂಗ್ ಅನ್ನು ಕೊಡುತ್ತಿದ್ದೇವೆ. ಅತ್ಯುತ್ತಮ ಮುದ್ರಿತ ಮತ್ತು ಆಡಿಯೋ ವೀಡಿಯೋ ನೋಟ್ಸ್‌ಗಳೂ ಲಭ್ಯ. ನೆನೆಪಿನ ಕಲೆ ಮತ್ತು ಪರೀಕ್ಷಾ ಕಲೆಗಳನ್ನು ಕಲಿಸಿ ವಿದ್ಯಾರ್ಥಿಗಳನ್ನು ಅದ್ಭುತವಾಗಿ ಅಣಿಗೊಳಿಸುತ್ತೇವೆ.

(P.C.M.B Cs, ಅಕೌಂಟ್ಸ್, B/St, Eco)

(ನೇರ ಪಿಯುಸಿಗೂ ಕೋಚಿಂಗ್ ಲಭ್ಯ)

ಜ್ಞಾನವರ್ಧಿನಿ ಸೆಂಟರ್:

ಮರಿಮಲ್ಲಪ್ಪ ಕಾಲೇಜಿನ ಎದುರು

9844355941 / 9482674031

PUBLIC NOTICE

Notice is hereby given that Sri Mahesh Sirvi, have agreed to sell the undermentioned property to my client and any person or persons claiming any interest on the undermentioned property or any part thereof, is hereby required to communicate the same, with documentary evidence, to the undersigned at her office at No. 1134, State Bank of India Building, Ballal Circle, Chamarajapuram, Mysuru-570 005, within 10 days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Dry Agricultural Land bearing Survey No. 170/1, measuring an extent of 2 acre 39 guntas, situated at Hejjige Village, Chikkaiahnachatra Hobli, Nanjanagudu Taluk, Mysuru District, bounded on East: Road ; West: Gudda and Land of Marichikkegowda, North: Cart Road, South: Land bearing Survey No. 170/2.

Sd/- Padmavathi R., Advocate, KAR / 517/97
No. 1134, Narasaraja Road, Ballal Circle,
SBM Building, Chamarajapuram,
Mysore-570 005. Mob: 9448178051

Date: 20.5.2022, Place: Mysuru

PUBLIC NOTICE

Notice is hereby given that SRI. O.N. MANIKANTA has agreed to sell the undermentioned property to my client and any person or persons claiming any interest on the undermentioned property or any part thereof, is hereby required to communicate the same, with documentary evidence, to the undersigned at her office at No. 1134, State Bank of India Building, Ballal Circle, Chamarajapuram, Mysuru 570 005, Phone NO. 94481 78051, within 10 days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Item No. 1 : All that piece & parcel of the Dry Agricultural Land bearing Survey No. 169/1 measuring an extent of 1 Acre 21 Guntas, situated at Hejjige Village, Chikkaiahnachatra Hobli, Nanjanagudu Taluk, Mysuru District. Bounded on East: Road, West: Land of Marichikkegowda, North: Land bearing Survey No. 170/2, South Road.

Item No. 2 : All that piece and parcel of the Dry Agricultural Land bearing Survey No. 170/2 measuring an extent of 1 Acre 28 Guntas, situated at Hejjige Village, Chikkaiahnachatra Hobli, Nanjanagudu Taluk, Mysuru District. Bounded on East: Road, West Gudda, North: Land bearing Survey No. 170/1, South: Land bearing Survey No. 169/1.

Sd/- Padmavathi R., Advocate, KAR / 517/97
No. 1134, Narasaraja Road, Ballal Circle,
SBM Building, Chamarajapuram,
Mysore-570 005. Mob: 9448178051

Date: 20.5.2022
Place: Mysuru



ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಭರದಿಂದ ಸಾಗಿದೆ ಮೈಷುಗರ್ ಕಾರ್ಯಾರಂಭದ ಸಿದ್ಧತೆ

ಆಗಸ್ಟ್ ವೇಳೆಗೆ ಆರಂಭ ನಿರೀಕ್ಷೆ, ದುರಸ್ತಿ ಕಾರ್ಯ ಪರಿಶೀಲಿಸಿದ ಜಿಲ್ಲಾಧಿಕಾರಿ ಅಶ್ವಥಿ



ಮಂಡ್ಯ, ಮೇ 20(ಮೋಹನ್‌ರಾಜ್)– ಜಿಲ್ಲೆಯ ರೈತರ ಜೀವನಾಡಿ ಮೈಷುಗರ್ ಸಕ್ಕರೆ ಕಾರ್ಖಾನೆ ಪುನಾರಾಂಭಕ್ಕೆ ಸಿದ್ಧತೆಗಳು ಭರದಿಂದ ಸಾಗಿದ್ದು, ಕಬ್ಬು ನಿಂತಿದ್ದ ಮಿಷನರಿಗಳ ರಿಪೇರಿ, ಅಗತ್ಯ ಸಲಕರಣೆಗಳ ಅಳವಡಿಕೆ ಕಾರ್ಯ ನಡೆಯುತ್ತಿದ್ದೆ ಮೈಷುಗರ್ ಮುಂದಿನ ಆಗಸ್ಟ್ ತಿಂಗಳಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯನ್ನು ಕಬ್ಬು ಬೆಳೆಗಾರರಲ್ಲಿ ಸಂತಸ ಮೂಡಿದೆ.

ಮಹಾರಾಷ್ಟ್ರ ಆರ್.ಬಿ.ಟೆಕ್ನೋಕ್ರೆಟ್ಸ್ ಅಂಡ್ ರಿಕ್ವೈರ್ಮೆಂಟ್ಸ್ ಹಾಗೂ ಹೈದರಾಬಾದ್‌ನ ಎಸ್ಸಾರ್ ಪವರ್‌ಟೆಕ್‌ಗೆ ಕಾರ್ಖಾನೆಯ ವಿವಿಧ ವಿಭಾಗಗಳ ದುರಸ್ತಿ ಕೆಲಸಗಳ ಕುರಿತು ಒಪ್ಪಂದವಾಗಿದ್ದು, ಕೆಲಸ ಕಾರ್ಯ ಆರಂಭವಾಗಿದೆ. ಕೆಲಸಗಳಿಗೆ ಸ್ಪಂದಿಗಳನ್ನು ನಿಯೋಜಿಸುವ ಬಗ್ಗೆ ಕಂಪನಿಯವರು ಮೈಷುಗರ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಅಶ್ವಥಿ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾರ್ಯಾರಂಭದ ಬಗ್ಗೆ ಮಾಹಿತಿ ಪಡೆದುಕೊಂಡರು. ಜೊತೆಗೆ ಸಿಬ್ಬಂದಿ ಮತ್ತು ನಿರ್ವಹಣೆ ಬಗ್ಗೆ ಪರಿಶೀಲಿಸಿ, ಸಮರ್ಪಕ ಸಲಕರಣೆ ಅಳವಡಿಸಿ, ಗುಣಮಟ್ಟದಿಂದ ದುರಸ್ತಿ ಪಡಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

ಜೊತೆಗೆ ಕಾರ್ಖಾನೆಗೆ ಬೇಕಿರುವ ಕಬ್ಬನ್ನು ರೈತರಿಂದ ಖರೀದಿಸಲು ಈಗಾಗಲೇ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದು, ರೈತರ ವಿವರಗಳನ್ನು ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಕಾರ್ಯಾರಂಭದ ಸಿದ್ಧತೆ ಒಂದರಿಂದ ಒಂದೂವರೆ ತಿಂಗಳಲ್ಲಿ ಮುಗಿಯಲಿದ್ದು, ಆಗಸ್ಟ್ ವೇಳೆಗೆ ಕಾರ್ಖಾನೆ ಆರಂಭವಾಗುವ ನಿರೀಕ್ಷೆ ಇದೆ.

ಇತ್ತೀಚೆಗೆ ಮೈಷುಗರ್ ಸಕ್ಕರೆ ಕಾರ್ಖಾನೆಗೆ ಪುಣೆಯಿಂದ ಅಧಿಕಾರಿಗಳ ತಂಡ ಬಂದು ಪರಿಶೀಲನೆ ನಡೆಸಿತ್ತು. ಕಾರ್ಖಾನೆ ತುರ್ತಾಗಿ ಆರಂಭ ಮಾಡಲು ಅವಶ್ಯವಿರುವ ಇನ್ನಿತರ ಮಾಹಿತಿಗಳನ್ನು ಕಲೆ ಹಾಕಿ ಜಿಲ್ಲಾಡಳಿತ ಮತ್ತು ಸಕ್ಕರೆ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಅನ್ವಯ ಇದೀಗ ಕಾರ್ಖಾನೆಯ ಪುನಾರಂಭದ ಪ್ರಕ್ರಿಯೆ ಆರಂಭವಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸಕ್ಕರೆ ಕಾರ್ಖಾನೆಗೆ ಭೇಟಿಕೊಟ್ಟು ಕಾರ್ಖಾನೆಯನ್ನು ಜೂನ್ ವೇಳೆಗೆ ಆರಂಭ ಮಾಡುವಂತೆ ಸೂಚಿಸಿದ್ದರು. ಜೊತೆಗೆ ಸಕ್ಕರೆ ಸಚಿವ ಶಂಕರ್ ಪಾಟೀಲ ಮುನೇನಕೊಪ್ಪ ಸಹ ಕಾರ್ಖಾನೆಗೆ ಭೇಟಿ ನೀಡಿ, ಪರಿಶೀಲಿಸಿ, ಬಜೆಟ್‌ನಲ್ಲಿ ಹಣ ಮೀಸಲಿಡುವುದಾಗಿ ಹೇಳಿದ್ದರು. ಅದರಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ 50 ಕೋಟಿ ರೂ. ಮಂಜೂರು ಮಾಡಿದ್ದರು. ಆ ಹಣದಲ್ಲಿ ಇದೀಗ ಕಾರ್ಖಾನೆ ಆರಂಭದ ಸಿದ್ಧತಾ ಕಾರ್ಯಗಳು ನಡೆಯುತ್ತಿವೆ.

ಸದ್ಯ ಸಕ್ಕರೆ ಕಾರ್ಖಾನೆ ಪುನರಾರಂಭಗೊಳ್ಳುವ ಎಲ್ಲಾ ಲಕ್ಷಣವಿದ್ದರೂ ಕಾರ್ಖಾನೆಯಲ್ಲಿ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ.ಕಾರ್ಖಾನೆಯ ಆವರಣದಲ್ಲಿ ಗಿಡಗಂಟೆಗಳು ಬೆಳೆದು ಹಾವು, ಚೇಳು, ಸೊಳ್ಳೆ ಕಾಟಗಳಿಂದ ಉತ್ತಮ ವಾತಾವರಣವಿಲ್ಲ. ಮೊದಲು ಸ್ವಚ್ಛತೆಗೆಆದ್ಯತೆ ನೀಡಬೇಕಿದೆ. ಕೆಲ ಮಿಷನರಿಗಳು ತುಕ್ಕು ಹಿಡಿದಿದ್ದು, ಸರಿಪಡಿಸಬೇಕಿದೆ.

ಭಾರೀ ಮಳೆ, ಗಾಳಿಗೆ ಆವರಣದಲ್ಲಿರುವ ಒಂದಷ್ಟು ಮರ ಧರೆಗುರುಳಿದ್ದರೆ ಮತ್ತಷ್ಟು ಮರಗಳು ಬೀಳುವ ಪರಿಸ್ಥಿತಿಯಲ್ಲಿದೆ. ಜೊತೆಗೆ ಎಲೆಕ್ಟ್ರಿಕ್ ತಂತಿಗಳು ಸಹ ಅಪಾಯದ ಹಂಚಿನಲ್ಲಿದ್ದು, ಅವುಗಳನ್ನು ಸರಿಪಡಿಸಬೇಕಿದೆ. ಜೊತೆಗೆ ಕೆಲವು ಕಡೆ ವಿದ್ಯುತ್ ಸಂಪರ್ಕ ಸಹ ಇಲ್ಲದಂತಾಗಿದ್ದು, ಅಗತ್ಯ ವಿದ್ಯುತ್ ಸಂಪರ್ಕ ಒದಗಿಸಬೇಕಿದೆ.

ಇನ್ನು ಈ ಹಿಂದೆ ಅಸ್ತಿತ್ವಕ್ಕೆ ತಂದಿದ್ದ ಡಿಸ್ಟಲರಿ ಘಟಕ, ಎಥೆನಾಲ್ ಘಟಕಗಳು ನಾಶವಾಗಿದ್ದು, ಅವುಗಳನ್ನು ಸರಿಪಡಿಸಿ ಪುನರಾರಂಭಿಸಿದರೆ ಕಬ್ಬು ಅರೆಯುವ ಜೊತೆಗೆ ಡಿಸ್ಟಲರಿ, ಎಥೆನಾಲ್‌ನಿಂದ ಸಹ ಕಾರ್ಖಾನೆಗೆ ಲಾಭ ಬರಲಿದ್ದು, ಕಾರ್ಖಾನೆ ಸುಸ್ಥಿತಿಯಲ್ಲಿ ಸಾಗಲಿದೆ. ಈ ಬಗ್ಗೆ ಜಿಲ್ಲಾಡಳಿತ, ಮೈಷುಗರ್ ಆಡಳಿತ ಮಂಡಳಿ, ಸಕ್ಕರೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮೈಷುಗರ್ ಅಧ್ಯಕ್ಷರು ಕ್ರಮ ವಹಿಸಬೇಕಿದೆ.



ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಗಳಿಸಿದ ಮಹಾಲಕ್ಷ್ಮಿ ಕಾನ್ವೆಂಟ್ ವಿದ್ಯಾರ್ಥಿನಿ ಹೊಸಹಳ್ಳಿ ಗ್ರಾಮದ ಅಪೂರ್ವ ಅವರನ್ನು ಹೊಸಹಳ್ಳಿ ಗ್ರಾಪಂ ಪಿಡಿಓ, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಅಭಿನಂದಿಸಿದರು.

ಹಣ ದುಪ್ಪಟ್ಟು ಮಾಡುವುದಾಗಿ ವಂಚಿಸಿದ್ದ ಎಂಟು ಮಂದಿಯ ಬಂಧನ

ಮಂಡ್ಯ,ಮೇ 20(ಮೋಹನ್‌ರಾಜ್)– ಮದ್ದೂರು ತಾಲೂಕಿನ ಉಪ್ಪನಕೆರೆ ಗೇಟ್ ಬಳಿ ಹಣ ದುಪ್ಪಟ್ಟು ಮಾಡಿಕೊಡುವುದಾಗಿ ನಂಬಿಸಿ 5.50 ಲಕ್ಷ ರೂ. ದೋಚಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಮದ್ದೂರು ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೊಳ್ಳೇಗಾಲ ಮೂಲದ ನಂಜುಂಡಾರಾಧ್ಯ, ಕೆಂಪರಾಜು, ಸಲೀಂ ಉಲ್ಲಾಖಾನ್, ಬೆಂಗಳೂರಿನ ಶ್ರೀನಿವಾಸ್ ಆಲಿಯಾಸ್ ಸೀನ, ಮಂಜುನಾಥ್, ಅಲಿಯಸ್ ಮಂಜು, ಚಾಮರಾಜನಗರದ ಸಾದಿದ್ ಅಹಮದ್, ಎಲೆಕ್ಟ್ರಾನಿಕ್ ಸಿಟಿಯ ಶ್ರೀನಿವಾಸ್‌ರೆಡ್ಡಿ ಆಲಿಯಾಸ್ ಸೀನ, ದೊಡ್ಡಬಳ್ಳಾಪುರದ ರಾಜು.ಎನ್.ವಿ ಬಂಧಿತ ಆರೋಪಿಗಳು.

ಕಳೆದ ಮೇ 3ರಂದು ಉಪ್ಪಿನಕೆರೆ ಗೇಟ್ ಬಳಿ ಕಿರಣ್‌ಕುಮಾರ್ ಹಾಗೂ ಪ್ರದೀಪ್ ಎಂಬುವರಿಗೆ ಕಾರ್ ಮತ್ತು ಬೈಕ್‌ನಲ್ಲಿ ಬಂದ ಆರೋಪಿಗಳು ಹಣ ದುಪ್ಪಟ್ಟು ಮಾಡುವುದಾಗಿ ನಂಬಿಸಿ 5.50 ಲಕ್ಷ ಹಣ ಪಡೆದು ವಂಚಿಸಿದ್ದರು.

ಆರೋಪಿಗಳ ಪತ್ತೆಗೆ ಮಳವಳ್ಳಿ ಡಿವೈಎಸ್ಪಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ವಂಚನೆ ಮಾಡಿದ್ದ ಎಂಟು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಅವರಿಂದ 4.2 ಲಕ್ಷ ಹಣ, ಒಂದು ಕಾರು, ಒಂದು ಬೈಕ್ ಮತ್ತು ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ನಾದಿನಿಯನ್ನು ಕೊಂದಿದ್ದ ಭಾವನ ಸೆರೆ

ಮಂಡ್ಯ, ಮೇ 20 (ಮೋಹನ್‌ರಾಜ್)– ಕಳೆದ ಏಪ್ರಿಲ್ 8ರಂದು ಕೆಸ್ತೂರು ಗ್ರಾಮದ ಸುಮಾ ಎಂಬಾಕೆಯ ಹತ್ಯೆಗೆ ಸಂಬಂಧಿಸಿದಂತೆ ಆಕೆಯ ಭಾವ ಪುಟ್ಟರಾಮುನನ್ನು ಕೆಸ್ತೂರು ಪೊಲೀಸರು ಬಂಧಿಸಿದ್ದಾರೆ.

ಕಳೆದ ತಿಂಗಳು ಕೆಸ್ತೂರಿನ ಸುಮಾ ಮನೆಯಲ್ಲಿ ಆಕೆಯ ಭಾವ ಪುಟ್ಟರಾಮು ಹತ್ಯೆ ಮಾಡಿ ಕೆಸ್ತೂರು ಪೊಲೀಸ್ ಠಾಣೆಗೆ ಬಂದು ತನ್ನ ನಾದಿನಿಯನ್ನು ಯಾರೋ ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ ಎಂದು ದೂರು ನೀಡಿದ್ದ. ಪೊಲೀಸರು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದಾಗ ಸೀರೆಯಿಂದ ಕುತ್ತಿಗೆ ಬಿಗಿದು ಸುಮಾಳನ್ನು ಹತ್ಯೆ ಮಾಡಲಾಗಿತ್ತು. ಆರೋಪಿಗಳ ಪತ್ತೆಗೆ ಪೊಲೀಸರು ತಂಡ ರಚಿಸಿದ್ದರು.

ಆದರೆ ದೂರು ಕೊಟ್ಟ ಬಳಿಕ ಮೃತೆ ಸುಮಾಳ ಭಾವ ಪುಟ್ಟರಾಮು ಕಾಣೆಯಾಗಿದ್ದ. ಆತನ ಮೇಲೆ ಅನುಮಾನ ಬಂದು ವಿಚಾರಣೆಗೆ ನಡೆಸಿದಾಗ ಆತನೇ ಹತ್ಯೆ ಮಾಡಿರುವುದು ಬೆಳಕಿಗೆ ಬಂದಿತ್ತು. ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ತುಮಕೂರಿನ ಹುಲಿಯೂರುದುರ್ಗದಲ್ಲಿ ಪೊಲೀಸರು ಬಂಧಿಸಿದ್ದಾರೆ.

ತನ್ನ ನಾದಿನಿ ಬೇರೆಯವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾಳೆಂದು ಶಂಕಿಸಿ ಹತ್ಯೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಡು ಹಂದಿ ದಾಳಿ: ರೈತನಿಗೆ ಗಂಭೀರ ಗಾಯ

ಹಲಗೂರು, ಮೇ 20(ಮೋಹನ್‌ರಾಜ್)– ಜಮೀನಿನಲ್ಲಿ ಹುಲ್ಲು ಕುಯ್ಯುತ್ತಿದ್ದ ರೈತನ ಮೇಲೆ ಕಾಡು ಹಂದಿ ದಾಳಿ ಮಾಡಿದ್ದು, ರೈತ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಮಂಡಳ್ಳಿ ಗ್ರಾಮದಲ್ಲಿ ಜರುಗಿದೆ. ಘಟನೆಯಲ್ಲಿ ರೈತ ಪ್ರಶಾಂತ್ (36) ಗಾಯಗೊಂಡಿದ್ದು, ಹಲಗೂರು ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಎಸ್‌ಎಸ್‌ಎಲ್‌ಸಿ: ಪಾಂಡವಪುರ ತಾಲೂಕಿಗೆ ಶೇ.95, ಕೆ.ಆರ್.ಪೇಟೆಗೆ ಶೇ.96 ಫಲಿತಾಂಶ

ಪಾಂಡವಪುರ, ಮೇ 20– 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿಗೆ ಶೇ.95.17ರಷ್ಟು ಫಲಿತಾಂಶ ಬಂದಿದ್ದು, ಮಹದೇಶ್ವರಪುರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ವಸತಿ ಶಾಲೆಯ ಪ್ರಕೃತಿ 625ಕ್ಕೆ 623 ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ತಾಲೂಕಿನಲ್ಲಿ ಒಟ್ಟಾರೆ 2238 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅದರಲ್ಲಿ 2130 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಈ ಬಾರಿಯೂ ಸಹ ಹೆಣ್ಣುಮಕ್ಕಳೇ ಮೇಲುಗೈ ಸಾಧಿಸಿದ್ದಾರೆ. ಜಿಲ್ಲೆಯ ಫಲಿತಾಂಶದಲ್ಲಿ ಪಾಂಡವಪುರ 6ನೇ ಸ್ಥಾನ ಪಡೆದುಕೊಂಡಿದೆ.

ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿನಿ ಪ್ರಕೃತಿ–623(99.68) ಪ್ರಥಮ ಸ್ಥಾನ, ಬಿಜಿಎಸ್ ಶಾಲೆಯ ಸುಕೃತ ಎಂ 622(99.52), ಮಾನ್ಯ ಎಂ.ಕುಂಟೆ 622(99.52) ದ್ವಿತೀಯ ಸ್ಥಾನ, ಬೆಳ್ಳಾಳೆಯ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿ ಎಂ.ಎಸ್.ಶುಭ–621(99.36) ಬಿಜಿಎಸ್ ಶಾಲೆಯ ಪಿ.ಸುಚಿತ್–621 (99.36, ಎಚ್.ಎಸ್.ಲೇಖನ–621 (99.36) ತೃತೀಯ ಸ್ಥಾನ. ನಿರ್ಮಲ ಪ್ರೌಢಶಾಲೆಯ ಕೆ.ಎಂ.ಅನುಷ–620(99.20), ಬಿಜಿಎಸ್ ಶಾಲೆಯ ಸಿ.ಎಸ್.ಸೃಜನಶ್ರೀ 620 (99.20), ನಾಲ್ಕನೇ ಸ್ಥಾನ, ಮುರಾರ್ಜಿ ದೇಸಾಯಿ ವಸತಿ ಶಾಲೆ ಕೆರೆತೊಣ್ಣೂರು–ಎಂ.ಎಸ್.ಪೃಥ್ವಿ–619(99.04), ಡಾ.ಬಿ.ಆರ್. ಅಂಬೇಡ್ಕರ್ ಮಹಿಳಾ ವಸತಿ ಶಾಲೆಯ ಸ್ಪಂದನ 619(99.04) ಅಂಕ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ತಾಲೂಕಿನ 48 ಪ್ರೌಢಶಾಲೆಗಳ ಪೈಕಿ 23 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಪ್ರಕಟಗೊಂಡಿದೆ. ಚಿನಕುರಳಿ ಕೆಪಿಎಸ್ ಸರಕಾರಿ ಪ್ರೌಢಶಾಲೆ, ಬಾಲಕಿಯರ ಸರಕಾರಿ ಪ್ರೌಢಶಾಲೆ ಚಿನಕುರಳಿ, ಸರಕಾರಿ ಪ್ರೌಢಶಾಲೆ ಟಿ.ಎಸ್.ಛತ್ರ, ಸರಕಾರಿ ಪ್ರೌಢಶಾಲೆ ಚಿಟ್ಟನಹಳ್ಳಿ, ಸರಕಾರಿ ಪ್ರೌಢಶಾಲೆ ಮೂಡಲಕೊಪ್ಪಲು ಶಾಲೆ, ಜ್ಞಾನಬಂಧು ಶಾಲೆ, ಬಿಜಿಎಸ್ ಶಾಲೆ, ಬೇಬಿ ಗ್ರಾಮದ ಡಿಎಂಎಸ್ ಜ್ಞಾನಕುಟೀರ ಶಾಲೆ ಸೇರಿದಂತೆ 23 ಶಾಲೆಗಳು ಶೇ. 100ರಷ್ಟು ಫಲಿತಾಂಶಪಡೆದುಕೊಂಡಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎ. ಲೋಕೇಶ್ ತಿಳಿಸಿದ್ದಾರೆ.

ಕೆ.ಆರ್.ಪೇಟೆ ವರದಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಕೆ.ಆರ್.ಪೇಟೆ ತಾಲೂಕು ಶೇ.96.34 ಪಡೆಯುವ ಮೂಲಕ ಜಿಲ್ಲೆಗೆ ಎರಡನೇ ಸ್ಥಾನ ಪಡೆದಿದೆ ಎಂದು ಕ್ಷೇತ್ರಶಿಕ್ಷಣಾಧಿಕಾರಿ ಬಸವರಾಜು ತಿಳಿಸಿದ್ದಾರೆ.



ಕೆ.ಆರ್.ಪೇಟೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ತಾಲೂಕಿನಾದ್ಯಂತ ನಡೆದ ಪರೀಕ್ಷೆಯಲ್ಲಿ 1310 ಬಾಲಕರು ಹಾಗೂ 1337 ಬಾಲಕಿಯರು ಸೇರಿದಂತೆ ಒಟ್ಟು 2647 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರ ಪೈಕಿ 1242 ಬಾಲಕರು ಹಾಗೂ 1308 ಬಾಲಕಿಯರು ಸೇರಿದಂತೆ ಒಟ್ಟು 2550 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ. 96.34 ಫಲಿತಾಂಶ ಪಡೆದಿದ್ದಾರೆ. ಪರೀಕ್ಷೆ ಎದುರಿಸಿದ ಬಾಲಕರು 94.81% ಫಲಿತಾಂಶ ಪಡೆದರೆ, 97.83% ಫಲಿತಾಂಶ ಪಡೆಯುವ ಮೂಲಕ ತಾಲೂಕಿನಲ್ಲಿಯೂ ಬಾಲಕಿಯರು ಮುಂದಿದ್ದಾರೆ. ತಾಲೂಕಿನ 29 ಸರ್ಕಾರಿ ಶಾಲೆಗಳ ಪೈಕಿ 9 ಶಾಲೆಗಳಲ್ಲಿ ಶೇ100 ಫಲಿತಾಂಶ ಬಂದಿದ್ದರೆ, 10 ಅನುದಾನಿತ ಶಾಲೆಗಳ ಪೈಕಿ ಒಂದು ಶಾಲೆ ಶೇ.100 ಫಲಿತಾಂಶ ಪಡೆದಿದೆ ಮತ್ತು 16 ಅನುದಾನ ರಹಿತ ಶಾಲೆಗಳ ಪೈಕಿ 15 ಶಾಲೆಗಳು ಶೇ.100 ಫಲಿತಾಂಶ ಪಡೆದಿವೆ.

ತಾಲೂಕಿನ ಆಶೀರ್ವಾದ ಪ್ರೌಢಶಾಲೆಯ ಬಿ.ಎಸ್.ಮೊನಾಲೀಸ ಮತ್ತು ಎಂ.ಪಿ.ಸಹನಾ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಯ ಹರ್ಷಿತ ಅಮಗಾಟ 625ಕ್ಕೆ 624 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಎರಡನೇ ಸ್ಥಾನ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ.

ಶಾಲೆಯ ಅಮೂಲ್ಯ, ಮಾನ್ಯ, ಆಚಾರ್ಯ ವಿದ್ಯಾ ಸಂಸ್ಥೆಯ ರೇವತಿ 623 ಅಂಕಗಳನ್ನು ಪಡೆದರೆ, ಚೈತನ್ಯ ವಿದ್ಯಾಸಂಸ್ಥೆಯ ನಿಸರ್ಗ ಆರ್.ಗೌಡ 622 ಅಂಕಗಳನ್ನು ಆಶೀರ್ವಾದ ಶಾಲೆಯ ಯಶ್ ಪ್ರೀತಂ 621 ಅಂಕಗಳನ್ನು ಗಳಿಸಿ ಮೊನಾಲೀಸ ಪತ್ರಕರ್ತ ಶ್ರೀನಿವಾಸ್ ಸಜ್ಜನ್ ರವರ ಪುತ್ರಿಯಾಗಿದ್ದಾಳೆ.

ಇದೇ ವೇಳೆ ಶಿಕ್ಷಣ ಸಂಯೋಜಕ ವೇಣು ಗೋಪಾಲ್, ಮೋಹನ್‌ಕುಮಾರ್, ವೀರಭದ್ರಯ್ಯ, ನೀಲಾಮಣಿ, ಇತರರಿದ್ದರು

ಜೂನ್ ಮೂರನೇ ವಾರದಲ್ಲಿ ದ್ವಿತೀಯ ಪಿಯುಸಿ ಫಲಿತಾಂಶ

ಬೆಂಗಳೂರು, ಮೇ 20– ಜೂನ್ ಮೂರನೇ ವಾರದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶವನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಕಟಿಸಲಿದೆ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ ಸಿ ನಾಗೇಶ್ ನಿನ್ನೆ ಹತ್ತನೇ ತರಗತಿ ಫಲಿತಾಂಶ ಪ್ರಕಟಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಇದೇ 24ರಿಂದ ದ್ವಿತೀಯ ಪಿಯುಸಿ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಆರಂಭವಾಗಲಿದ್ದು, ಜೂನ್ 16ರೊಳಗೆ ಮೌಲ್ಯಮಾಪನ ಮುಗಿಯಲಿದೆ. ಮೂರನೇ ವಾರದಲ್ಲಿ ಫಲಿತಾಂಶ ಪ್ರಕಟಿಸಲಾಗುವುದು. ಮೌಲ್ಯಮಾಪಕರ ಸಂಭಾವನೆ ಹೆಚ್ಚಿಸುವ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

8 ವಾರದಲ್ಲಿ ಬಿಬಿಎಂಪಿ ಚುನಾವಣೆ ಪ್ರಕ್ರಿಯೆ ಆರಂಭಿಸಿ

ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಆದೇಶ

ಬೆಂಗಳೂರು, ಮೇ 20– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣಾ ಪ್ರಕ್ರಿಯೆಯನ್ನು 8 ವಾರಗಳಲ್ಲಿ ಆರಂಭಿಸಿ ಎಂದು ರಾಜ್ಯ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. 198 ವಾರ್ಡ್‌ಗಳನ್ನು ಹೊಂದಿರುವ



ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದ್ದ ಪರಿಣಾಮ ಚುನಾವಣೆ ವಿಳಂಬ ವಾಗಿತ್ತು. ಈ ನಡುವೆ ಸೆ.23ರಂದು ಹೊರಡಿಸಿರುವ ಅಧಿಸೂಚನೆಯಂತೆ 198 ವಾರ್ಡ್ ಗಳಿಗೆ ಆರು ವಾರಗಳ ಒಳಗಾಗಿ ಚುನಾವಣೆ ನಡೆಸುವಂತೆ ಕರ್ನಾಟಕ ಹೈಕೋರ್ಟ್ 2020ರ ಡಿಸೆಂಬರ್ 4ರಂದು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತ್ತು

ನಂತರ ರಾಜ್ಯ ವಿಧಾನಸಭೆಯು ಹೈಕೋರ್ಟ್ ಆದೇಶವನ್ನು ರದ್ದುಪಡಿಸಿ 243 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂಬ ನಿರ್ಣಯ ಅಂಗೀಕರಿಸಿತ್ತು. ಅಲ್ಲದೇ ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿಯನ್ನು ಸರ್ಕಾರ ಸಲ್ಲಿಸಿತ್ತು.

ಇದೀಗ ಸುಪ್ರೀಂಕೋರ್ಟ್ ಬಿಬಿಎಂಪಿ ಚುನಾವಣಾ ಪ್ರಕ್ರಿಯೆಯನ್ನು ಎಂಟು ವಾರದೊಳಗಾಗಿ ನಡೆಸುವಂತೆ ಚುನಾವನಾ ಆಯೋಗಕ್ಕೆ ನಿರ್ದೇಶನ ನೀಡಿದ್ದು, ವಾರ್ಡ್ ಪುನರ್‌ವಿಂಗಡಣೆ ಮತ್ತು ಮೀಸಲಾತಿಯನ್ನು ಕಾಲಮಿತಿಯೊಳಗೆ ನಿಗದಿಪಡಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ರಸ್ತೆ ಗುಂಡಿಗಳನ್ನು ಮುಚ್ಚಿ ಮೆಚ್ಚುಗೆಗೆ ಪಾತ್ರರಾದ ಟ್ರಾಫಿಕ್ ಪೊಲೀಸರು



ಮೈಸೂರು,ಮೇ 20– ರಸ್ತೆ ಗುಂಡಿಗಳನ್ನು ಮುಚ್ಚುವ ಮೂಲಕ ಮೈಸೂರಿನ ಸಂಚಾರಿ ಪೊಲೀಸರು ಸಾರ್ವಜನಿಕರ ಮೆಚ್ಚುಗೆ ಗಳಿಸಿದ್ದಾರೆ. ಮೈಸೂರಿನ ಅಗ್ರಹಾರದ ರಸ್ತೆಯಲ್ಲಿ ಸಾಲು–ಸಾಲು ಗುಂಡಿಗಳಾಗಿದ್ದು, ವಾಹನ ಸವಾರರ ಪರದಾಡುವಂತಾಗಿತ್ತು. ವಾಹನ ಸವಾರರ ಪರದಾಟವನ್ನು ಗಮನಿಸಿ ಸಂಚಾರಿ ಪೊಲೀಸ್ ಕಾನ್‌ಸ್ಟೇಬಲ್‌ಗಳಾದ ಮಧು ಮತ್ತು ಶಿವಕುಮಾರ್ ಎಂಬುವವರು ಮಣ್ಣು ಹಾಕಿ ಗುಂಡಿ ಮುಚ್ಚಿದ್ದಾರೆ. ಇವರ ಮಾದರಿ ಕಾರ್ಯಕ್ಕೆ ಭಾರಿ ಮೆಚ್ಚುಗೆ ವ್ಯಕ್ತವಾಗಿದ್ದು, ಗುಂಡಿ ಮುಚ್ಚುವ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಹೈದರಾಬಾದ್ ಗ್ಯಾಂಗ್ ರೇಪ್ ಆರೋಪಿಗಳ ಎನ್‌ಕೌಂಟರ್ ನಕಲಿ

ಪೊಲೀಸರ ವಿರುದ್ಧ ಕೊಲೆ ಆರೋಪದ ಮೇಲೆ ಕ್ರಮ ಅಗತ್ಯ

ಸುಪ್ರೀಂಕೋರ್ಟ್ ಸಮಿತಿಯ ವರದಿ ಶಿಫಾರಸು

ನವದೆಹಲಿ, ಮೇ 20–ತೆಲಂಗಾಣದ ಹೈದರಾಬಾದ್‌ನಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನಾಲ್ವರು ಆರೋಪಿಗಳನ್ನು ಎನ್ ಕೌಂಟರ್ ಹೆಸರಿನಲ್ಲಿ ಉದ್ದೇಶಪೂರ್ವಕವಾಗಿ ಅವರ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ ಎಂದು ಸುಪ್ರೀಂಕೋರ್ಟ್ ನೇಮಿಸಿದ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ನ್ಯಾಯಮೂರ್ತಿ ವಿ.ಎಸ್.ಸಿರ್ಪುರ್ಕರ್ ನೇತೃತ್ವದಲ್ಲಿ ಸುಪ್ರೀಂಕೋರ್ಟ್ ನೇಮಿಸಿದ್ದ ಸಮಿತಿಯು ಆರೋಪಿಗಳನ್ನು ಎನ್‌ಕೌಂಟರ್ ಮಾಡಿದ 10 ಪೊಲೀಸರನ್ನು ಕೊಲೆ ಆರೋಪದ ಮೇಲೆ ವಿಚಾರಣೆಗೆ ಒಳಪಡಿಸಲು ಶಿಫಾರಸು ಮಾಡಿದೆ.

2019ರ ನವೆಂಬರ್‌ನಲ್ಲಿ ನಡೆದ ಪಶು ವೈದ್ಯೆಯ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು. ಸ್ಥಳ ಪರಿಶೀಲನೆ ವೇಳೆ ಆರೋಪಿಗಳು ಪೊಲೀಸರ ಮೇಲೇ ಹಲ್ಲೆಗೆ ಮುಂದಾದರೆಂದು ನಾಲ್ವರನ್ನೂ ಹೈದರಾಬಾದ್ ಬಳಿ ಎನ್‌ಹೆಚ್–44ನಲ್ಲಿ ಎನ್‌ಕೌಂಟರ್ ಮಾಡಲಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಿಂದ ರಚಿಸಲಾಗಿದ್ದ ಮೂವರು ಸದಸ್ಯರ ತನಿಖಾ ಆಯೋಗ ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಇಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದು, ಮುಂದಿನ ಕ್ರಮಕ್ಕಾಗಿ ಪ್ರಕರಣವನ್ನು ತೆಲಂಗಾಣ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ.

6 ವರ್ಷ ಜೈಲು ವಾಸದ ಬಳಿಕ ಬಿಡುಗಡೆಯಾದ ಇಂದ್ರಾಣಿ

ನವದೆಹಲಿ: ಸುಪ್ರಿಂಕೋರ್ಟ್ ಬುಧವಾರ ಐಎನ್‌ಎಕ್ಸ್ ಕಂಪನಿ ಮಾಲಕಿ ಇಂದ್ರಾಣಿ ಮುಖರ್ಜಿಗೆ ಜಾಮೀನು ಮಂಜೂರು ಮಾಡಿದ್ದು, ಶುಕ್ರವಾರ ಜೈಲಿನಿಂದ ಹೊರಬಂದಿದ್ದಾರೆ. ಇಂದ್ರಾಣಿ ಮುಖರ್ಜಿ ತನ್ನ ಪುತ್ರಿ ಶೀನಾ ಬೋರಾ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿ, 2015ರಲ್ಲಿ ಜೈಲು ಸೇರಿದ್ದರು. ಇದೀಗ 6 ವರ್ಷಗಳ ಜೈಲು ವಾಸ ಅನುಭವಿಸಿ, ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ.

ಜೈಲಿನಿಂದ ಹೊರಬರುತ್ತಲೇ ಮಾಧ್ಯಮದೊಂದಿಗೆ ಮಾತನಾಡಿದ ಇಂದ್ರಾಣಿ ಮುಖರ್ಜಿ, ತೆರೆದ ಆಕಾಶವನ್ನು ನೋಡುತ್ತಾ ಬಹಳ ಸಂತೋಷವಾಗುತ್ತಿದೆ. ನಾನು ಜೈಲಿನಲ್ಲಿ ಬಹಳಷ್ಟು ಕಲಿತಿದ್ದೇನೆ. ಮುಂದಿನ ಸಂದರ್ಶನದಲ್ಲಿ ಅದರ ಬಗ್ಗೆ ಮಾತನಾಡುತ್ತೇನೆ ಎಂದಿದ್ದಾರೆ. ಬುಧವಾರ ಸುಪ್ರೀಂಕೋರ್ಟ್ ಇಂದ್ರಾಣಿ ಮುಖರ್ಜಿಗೆ 2 ಲಕ್ಷ ರೂ. ಶ್ಯೂರಿಟಿ ಮತ್ತು ತನಿಖಾಧಿಕಾರಿಗಳು ಕರೆದಾಗ ವಿಚಾರಣೆಗೆ ಹಾಜರಾಗಬೇಕೆಂದು ಷರತ್ತು ವಿಧಿಸಿ ಜಾಮೀನು ಮಂಜೂರು ಮಾಡಿತ್ತು.

ಆರೋಪ ಏನು?: 2012 ಏಪ್ರಿಲ್ 24 ರಂದು ಇಂದ್ರಾಣಿ ಮುಖರ್ಜಿ, ಕಾರು ಚಾಲಕ ಶ್ಯಾಮ್‌ವರ್ ರೈ ಮತ್ತು ಮಾಜಿ ಪತಿ ಸಂಜೀವ್ ಖನ್ನಾ ಸೇರಿ ಶೀನಾ ಬೋರಾಳನ್ನು ಹತ್ಯೆ ಮಾಡಿದ್ದರು. ಪುತ್ರಿಯ ಶವವನ್ನು ರಾಯಗಢ ಜಿಲ್ಲೆಯ ಕಾಡಿನಲ್ಲಿ ಎಸೆದು ಸುಟ್ಟು ಹಾಕಲಾಗಿದೆ ಎಂಬ ಆರೋಪ ಇಂದ್ರಾಣಿ ಮುಖರ್ಜಿ ಮೇಲಿದೆ.

ಈ ಸಂಬಂಧ 2015ರಲ್ಲಿ ಮುಂಬೈ ಪೊಲೀಸರು ಇಂದ್ರಾಣಿ ಮುಖರ್ಜಿಯನ್ನು ಬಂಧಿಸಿದ್ದರು. ಹೈ ಪ್ರೊಫೈಲ್ ಪ್ರಕರಣದ ಹಿನ್ನೆಲೆ ಇದರ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲಾಗಿತ್ತು.

ತೇಜಶ್ರೀಗೆ 620 ಅಂಕ

ಹಾಸನ, ಮೇ 20–ಹೊಳೆನರಸೀಪುರ ಪಟ್ಟಣದ ಗ್ರೀನ್ ವುಡ್ ಶಾಲೆ ವಿದ್ಯಾರ್ಥಿನಿ ಹೆಚ್.ಎಸ್.ತೇಜಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 620 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.



ಕನ್ನಡ–125, ಇಂಗ್ಲಿಷ್–100, ಹಿಂದಿ–100, ಗಣಿತ–98, ವಿಜ್ಞಾನ–100, ಸಮಾಜ ವಿಜ್ಞಾನ–97 ಅಂಕ(ಶೇ.99.2) ಪಡೆದಿದ್ದು, ಗ್ರೀನ್‌ವುಡ್ ಪ್ರೌಢಶಾಲೆಯ ಮುಖ್ಯೋಧ್ಯಾಯರು ಹಾಗೂ ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಈಕೆ ಹೊಳೆನರಸೀಪುರ ವಕೀಲರಾದ ಶಂಕರಾಚಾರ್, ನಂದಿನಿ ದಂಪತಿ ಪುತ್ರಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.05.2022 ಶನಿವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ : ಉಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಭಗವದ್ಗೀತೆ ಕಂಠಪಾಠ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪದಕ ಮತ್ತು ಪ್ರಮಾಣ ಪತ್ರ ವಿತರಣೆ, ಸಂಜೆ 6.30ಕ್ಕೆ ಸಂಗೀತ ಸೇವೆ : ವಿದ್ವಾನ್ ಫಣಿ ನಾರಾಯಣ್ ಅವರಿಂದ ವೀಣೆ, ವಿದ್ವಾನ್ ಚಂದನ್‌ಕುಮಾರ್ ಅವರಿಂದ ಕೊಳಲು, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀಯವರಿಗೆ ಮಹಾಭಿಷೇಕ, ಸಂಜೆ 7ಕ್ಕೆ ವರ್ಷೋತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ, ಸಂಜೆ 6ಕ್ಕೆ.

■ **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಹೋಟೆಲ್ ನಳಪಾಕ್, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಗ್ರಾಹಕ ರಕ್ಷಣೆ ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ, ಮುಖ್ಯ ಅತಿಥಿಗಳು : ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆರ್.ಕೆ. ಅಗರವಾಲ್, ಅಧ್ಯಕ್ಷತೆ: ಜೆಎಸ್‌ಎಸ್ ಕಾನೂನು ಕಾಲೇಜು ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್, ಗೌರವ ಅತಿಥಿಗಳು: ಪ್ರೊ. ಅಶೋಕ್ ಪಾಟೀಲ್, ವೈ.ಜಿ. ಮುರಳೀಧರನ್, ಪ್ರಿನ್ಸಿಪಾಲ್ ಡಾ. ಎಸ್. ನಟರಾಜು, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 10ಕ್ಕೆ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ಅಖಿಲ ಭಾರತ ಮುಕ್ತ ರ್‍ಯಾಪಿಡ್ ಫಿಡೆ ರೇಟಿಂಗ್ ಚೆಸ್ ಟೂರ್ನಮೆಂಟ್, ಉದ್ಘಾಟನೆ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ. ಸುರೇಶ್, ಮುಖ್ಯ ಅತಿಥಿಗಳು : ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ. ಹೆಚ್.ಎನ್. ದಿನೇಶ್, ಪಿ. ಮೊಯಿದೀನ್, ಅರವಿಂದ ಶಾಸ್ತ್ರಿ, ಶಿವರಾಮೇಗೌಡ, ಎಂ. ಆನಂದ್, ಸ್ಥಳ: ಕೇರಳ ಸಮಾಜಂ, ವಿಜಯನಗರ 2ನೇ ಹಂತ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಜೆಎಸ್‌ಎಸ್ ಸೈಂಟಿಯಾ ಟಿ20 ಭಾಷಣ ಸ್ಪರ್ಧೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಡೀನ್ ಪ್ರೊ. ಹೆಚ್.ಟಿ. ಬಸವರಾಜಪ್ಪ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಗೌರವ ಅತಿಥಿಗಳು: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಪಿ. ವಿಜೇಂದ್ರ ಕುಮಾರ್, ಸ್ಥಳ: ಗೋಲ್ಡನ್ ಜ್ಯೂಬಿಲಿ ಹಾಲ್, ಬೆಳಗ್ಗೆ 10.30ಕ್ಕೆ.


■ **ರಂಗಾಯಣ :** ರಂಗಾಯಣ ತಂಡದಿಂದ ಡಾ. ಎಸ್.ಎಲ್. ಭೈರಪ್ಪ ಅವರ 'ಪರ್ವ' ನಾಟಕ ಪ್ರದರ್ಶನ, ರಂಗರೂಪ, ನಿರ್ದೇಶನ : ಪ್ರಕಾಶ್ ಬೆಳವಾಡಿ, ಸ್ಥಳ: ಭೂಮಿಗೀತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ರಾಜೀವ್ ಗಾಂಧಿ ಮಹಾಸ್ಮರಣೆ, ಪುಷ್ಪಾರ್ಚನೆ : ಮಾಜಿ ಸಂಸದ ಆರ್. ಧ್ರುವನಾರಾಯಣ್, ಉಪಸ್ಥಿತರು : ನಗರಾಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ನಾದಬ್ರಹ್ಮ ಸಂಗೀತ ಸಭಾ :** ವಿದುಷಿ ಶ್ರೀವಾಣಿ ಯಲ್ಲಾ ಅವರಿಂದ ವೀಣಾ ವಾದನ, ತುಮಕೂರು ಬಿ. ರವಿಶಂಕರ್ (ಮೃದಂಗ), ಶರತ್ ಕೌಶಿಕ್ (ಘಟಂ), ಸ್ಥಳ: ಸಭಾ ಭವನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 7.15 ಎದೆ ತುಂಬಿದ ಹಾಡು–ಕವಿ ಮೆಚ್ಚಿ ಆಯ್ದ ಕವನ, ಕವಿ ಮಾತು ಹಾಗೂ ಗೀತೆ ಗಾಯನ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, ರಾಗ–ಹಂಸಾನಂದಿ, ಪ್ರಸ್ತುತಿ– ಜಿ. ಪುಷ್ಪಲತಾ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಆರ್.ಕೆ. ಪದ್ಮನಾಭ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ನಾಗಬಸಮ್ಮ ಮತ್ತು ತಂಡ, 1.20 ಭಾವಗೀತೆ–ಎಂ. ಪ್ರಭಾಕರ್, 3.35ಮಕ್ಕಳ ಮಂಟಪ– ಪೀಪಲ್ಸ್ ಪಾರ್ಕ್ ಪದವಿ ಪೂರ್ವ ಕಾಲೇಜಿನ ಬಾಲಕಿಯರ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ, 4.30 ಹಿರಿಯ ಸುಗಮ ಸಂಗೀತ ಕಲಾವಿದ ಹಾಗೂ ಸಂಗೀತ ನಿರ್ದೇಶಕ ಸಿ. ಅಶ್ವಥ್ ಅವರೊಂದಿಗೆ ಎಂ.ಶಂಕರಪ್ಪ ಹಾಗೂ ಎಂ.ಎಸ್. ಅನುಪಮಾ ಅವರು ನಡೆಸಿದ್ದ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ –ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ. 9.15 ಜೀವ ವೈವಿಧ್ಯದ ಅಳಿವು ಉಳಿವು –ರಮೇಶ್ ಕಿಕ್ಕೇರಿ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಆರ್. ಕೈಲಾಶ್ ಪಾತ್ರ, ವಯೋಲಿನ್ ವಾದನ, 11.00 ಸವಿನೆನಪು

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ: ಮಾತು ತಪ್ಪಿದ ಸರ್ಕಾರದ ವಿರುದ್ಧ ಮತ್ತೆ ಹೋರಾಟ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆ ಬಳಿಯಿಂದಲೇ ಉಪವಾಸ ಸತ್ಯಾಗ್ರಹ ಆರಂಭ

ಮೈಸೂರು, ಮೇ 20(ಎಸ್‌ಬಿಡಿ)– ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವುದಾಗಿ ಭರವಸೆ ನೀಡಿದ್ದ ಸರ್ಕಾರ ಮಾತು ತಪ್ಪಿರುವ ಕಾರಣ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆ ಬಳಿಯಿಂದಲೇ ಉಪವಾಸ ಸತ್ಯಾಗ್ರಾಹ ಆರಂಭಿಸುವುದಾಗಿ ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.




ಮೈಸೂರಿನ ಅಗ್ರಹಾರ ಹೊಸಮಠದ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿ ಕಚೇರಿ ಬಳಿ ಒಂದು ದಿನ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಶಿಗ್ಗಾಂವಿಯ ಮನೆ ಎದುರಿನಿಂದಲೇ ಪ್ರಾರಂಭಿಸಲಾಗುವುದು. ಸಿಎಂ ಮನೆ ಬಳಿ ಮೇ 23ಕ್ಕೆ ಉಪವಾಸ ಸತ್ಯಾಗ್ರಹ ನಡೆಸಲು ನಿಗದಿಯಾಗಿತ್ತಾದರೂ ನಿರಂತರ ಮಳೆ ಕಾರಣದಿಂದ ಅನಿವಾರ್ಯವಾಗಿ ದಿನಾಂಕ ಬದಲಿಸುವ ಸಾಧ್ಯತೆ ಇದ್ದು, ನಾಳೆ ಈ ಬಗ್ಗೆ ಸ್ಪಷ್ಟಪಡಿಸಲಾಗುವುದು. ಆದರೆ ನಮ್ಮ ಹೋರಾಟವಂತೂ ತೀವ್ರಗೊಳ್ಳಲಿದೆ ಎಂದರು.

ಮಾತು ತಪ್ಪಿದ ಸರ್ಕಾರ: ಶಿಕ್ಷಣ ಹಾಗೂ ಉದ್ಯೋಗ ಹಿತದೃಷ್ಟಿಯಿಂದ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ 15–16 ತಿಂಗಳಿಂದ ನಿರಂತರ ಹೋರಾಟ ನಡೆದಿದೆ. ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಕಳೆದ ಸೆ.15ರೊಳಗೆ 2ಎ ಮೀಸಲಾತಿ ಕಲ್ಪಿಸುವುದಾಗಿ ಅಧಿವೇಶನದಲ್ಲೇ ಹೇಳಿದ್ದರು. ಅಷ್ಟರೊಳಗೆ ಅವರೇ ಅಧಿಕಾರದಿಂದ ಕೆಳಗಿಳಿದರು. ನಂತರ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸ್ಪಂದನೆ ನಮ್ಮ ವಿಶ್ವಾಸವನ್ನು ಗಟ್ಟಿಗೊಳಿಸಿತ್ತು. ಪಂಚಮಸಾಲಿ ಸಮುದಾಯದ ಋಣ ತೀರಿಸುವ ಮಾತನ್ನಾಡಿದ್ದಲ್ಲದೆ ಸಮುದಾಯದ ನಾಯಕರಾದ ಸಿ.ಸಿ.ಪಾಟೀಲ್ ಮತ್ತಿತರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮಾಹಿತಿ ತಿಳಿಯುತ್ತಿದ್ದರು. ಸಮುದಾಯದ ಶಾಸಕರೊಂದಿಗೆ ಸಭೆ ನಡೆಸಿ, 3 ತಿಂಗಳ ಕಾಲಾವಕಾಶ ಕೇಳಿ ಬಜೆಟ್ ಅಧಿವೇಶನದಲ್ಲಿ ಒಳ್ಳೆಯ ಸುದ್ದಿ ನೀಡುತ್ತೇವೆ ಎಂದಿದ್ದರು. ಹೀಗೆ ಬೊಮ್ಮಾಯಿ ಅವರು 2 ಬಾರಿ ಭರವಸೆ ನೀಡಿದ್ದರು. ಏ.14ರೊಳಗೆ ನಿರ್ಧರಿಸುವಂತೆ ಗಡುವು ನೀಡಿದ್ದೆವು. ಆದರೂ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಆದರೆ ನಾವು ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮುಂದುವರೆಸಿದ್ದೇವೆ ಎಂದು ತಿಳಿಸಿದರು.

ಈಗಲೂ ಭರವಸೆ ಇದೆ: ಗಡುವು ಮುಗಿದರೂ ಸರ್ಕಾರ ನಿರ್ಲಕ್ಷ್ಯ ಮಾಡಿರುವುದರಿಂದ ಏ.14ರಿಂದ ಮೇ 4ರವರೆಗೂ ಸಭೆ, ಧರಣಿ ಮೂಲಕ ಎಚ್ಚರಿಸಲಾಗಿದೆ. ಮೇ 5ರಂದು ಹಲವೆಡೆ ತಹಸೀಲ್ದಾರ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ವ್ಯಕ್ತಪಡಿಸಲಾಗಿದೆ. 'ಸಹಕಾರವೋ? ಅಸಹಕಾರವೋ?' ಎಂಬ ಪತ್ರ ಚಳವಳಿ ಮೂಲಕ ರಾಜ್ಯದ ಎಲ್ಲಾ ಕ್ಷೇತ್ರದ ಶಾಸಕರನ್ನೂ ಎಚ್ಚರಿಸಲಾಗುತ್ತಿದೆ. ನಮ್ಮ ಬೇಡಿಕೆ ಈಡೇರದಿದ್ದರೆ 2023ರ ಚುನಾವಣೆಗೆ ನಮ್ಮ ಅಸಹಕಾರ ನಿಶ್ಚಿತ ಎಂದು ಮನವರಿಕೆ ಮಾಡಲಾಗಿದೆ. 2 ತಿಂಗಳಿಂದ ಮುಖ್ಯಮಂತ್ರಿಗಳು ಮೌನ ವಹಿಸಿರುವುದು ನಮ್ಮ ಆತಂಕ ಹೆಚ್ಚಿಸಿದೆ. ಈಗಲೂ ಬಸವರಾಜ ಬೊಮ್ಮಾಯಿ ಅವರ ಬಗ್ಗೆ ನಂಬಿಕೆ ಇದೆ. ಈ ಬಗ್ಗೆ ನಿರ್ಲಕ್ಷ್ಯ ಮಾಡಿದ್ದರಿಂದ ಯಡಿಯೂರಪ್ಪನವರ ಮೇಲೆ ಸಮುದಾಯದ ಜನ ಅಸಮಾಧಾನಗೊಂಡಿದ್ದಾರೆ. ನೀವೂ ಅದಕ್ಕೆ ಗುರಿಯಾಗಬೇಡಿ. ನಿಮ್ಮ ಬೆಳವಣಿಗೆಗೆ ಸಹಕಾರವಾದ ಸಮುದಾಯ ನಿಮ್ಮ ಮನೆ ಮುಂದೆ ಉಪವಾಸ ಸತ್ಯಾಗ್ರಹ ನಡೆಸುವ ಸನ್ನಿವೇಶ ತಂದುಕೊಳ್ಳಬೇಡಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದರು.

ಸಮುದಾಯದ ಮುಖಂಡರಾದ ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ರೈತ ಮುಖಂಡ ಮಲ್ಲೇಶ್, ಬಿಜೆಪಿ ಮುಖಂಡ ಕೇಬಲ್ ಮಹೇಶ್, ದೀಪಕ್ ಚುಂಚುವಾಡ, ಕುಮಾರ್ ಕೊತ್ತವಾಡಿ, ಶ್ರೀಶೈಲಗೌಡ, ವಕೀಲ ಮಂಜುನಾಥ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ರವಿ ಡಿ.ಚನ್ನಣ್ಣನವರ್ ಸಹೋದರನ ವಿರುದ್ಧ ವರದಕ್ಷಿಣೆ ಕಿರುಕುಳ ಕೇಸ್

ಬೆಂಗಳೂರು, ಮೇ 20– ಐಎಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಅವರ ಸಹೋದರ ರಾಘವೇಂದ್ರ ಡಿ.ಚನ್ನಣ್ಣನವರ್ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪದ ಮೇರೆಗೆ ಚಂದ್ರಾ ಲೇಔಟ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ರಾಘವೇಂದ್ರ ತನಗೆ ಗೊತ್ತಿಲ್ಲದೆ ತನ್ನ ಸಂಬಂಧಿಯನ್ನು ಮದುವೆಯಾಗಿದ್ದಾನೆ ಎಂದು ಅವರ ಪತ್ನಿ ಎಲ್.ರೋಜಾ ಆರೋಪಿಸಿದ್ದಾರೆ.

ರಾಘವೇಂದ್ರ ಡಿ.ಚನ್ನಣ್ಣವರ್ ಹಾಗೂ ರೋಜಾ ಅವರ ವಿವಾಹ 2015ರಲ್ಲಿ ನಡೆದಿತ್ತು. ಆ ವೇಳೆ ರಾಘವೇಂದ್ರನ ಕುಟುಂಬಕ್ಕೆ ವರದಕ್ಷಿಣೆಯಾಗಿ ಚಿನ್ನಾಭರಣ ನೀಡಿದ್ದಾರೆ. ಮದುವೆ ಆದ ಸ್ವಲ್ಪ ಸಮಯದ ನಂತರ ತನ್ನ ಪತಿ ಅವರ ಸಂಬಂಧಿಕ ಮಹಿಳೆಯೊಬ್ಬರೊಂದಿಗೆ ಸಂಬಂಧ ಹೊಂದಿರುವುದು ತಿಳಿದುಬಂತು.

ಈ ಬಗ್ಗೆ ಪ್ರಶ್ನಿಸಿದಾಗ, ರಾಘವೇಂದ್ರ ಇಬ್ಬರೂ ಮಹಿಳೆಯರೊಂದಿಗೆ ವಾಸಿಸಲು ಬಯಸಿದ್ದರಿಂದ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಅವಳಿಗೆ ಅತ್ತೆ ಮಾವ ಸಲಹೆ ನೀಡಿದ್ದಾರೆ. ಆದರೆ, ಅದನ್ನು ನಿರಾಕರಿಸಿದಾಗ ರಾಘವೇಂದ್ರ ವರದಕ್ಷಿಣೆ ನೀಡುವಂತೆ ಕಿರುಕುಳ ನೀಡತೊಡಗಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ.

ಕೆನಡಾದಲ್ಲಿ ಕನ್ನಡ ಪ್ರೇಮ ಮೆರೆದ ಕನ್ನಡಿಗ

ಸಂಸತ್‌ನಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ ಸಂಸದ

ಕೆನಡಾ, ಮೇ 20– ವಿದೇಶಗಳಲ್ಲಿ ಕನ್ನಡಿಗರು ತಮ್ಮ ಮಾತೃ ಭಾಷೆಯಾದ ಕನ್ನಡದಲ್ಲಿ



ಮಾತನಾಡಿ ಭಾಷಾಪ್ರೇಮ ಮೆರೆಯುತ್ತಿದ್ದಾರೆ. ಈಗ ಅದೇ ಸಾಲಿಗೆ ಕೆನಡಾದ ಸಂಸದ ಕನ್ನಡಿಗರಾದ ಚಂದ್ರ ಆರ್ಯ ಅವರು ಕೆನಡಾದ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿ ಭಾಷಾ ಪ್ರೇಮ ಮೆರೆದಿದ್ದಾರೆ.

ಸಂಸತ್ತಿನಲ್ಲಿ ಮಾತನಾಡಿದ ಅವರು, 'ಮಾನ್ಯ ಸಭಾಪತಿ, ಕೆನಡಾ ದೇಶದ ಸಂಸತ್ತಿನಲ್ಲಿ ನನ್ನ ಮಾತೃ ಭಾಷೆ ಕನ್ನಡದಲ್ಲಿ ಮಾತನಾಡಲು ಅವಕಾಶ ಸಿಕ್ಕಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಭಾರತ ದೇಶದ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ದ್ವಾರಾಳು ಗ್ರಾಮದ ವ್ಯಕ್ತಿಯೊಬ್ಬ ಕೆನಡಾದಲ್ಲಿ ಸಂಸತ್ ಸದಸ್ಯನಾಗಿ ಆಯ್ಕೆಯಾಗಿ ಮತ್ತು ಕನ್ನಡದಲ್ಲಿ ಮಾತನಾಡುವುದು ಸುಮಾರು 5 ಕೋಟಿ ಕನ್ನಡಿಗರಿಗೆ ಹೆಮ್ಮೆಯ ಕ್ಷಣವಾಗಿದೆ. ಕೆನಡಾ ದೇಶದ ಕನ್ನಡಿಗರು 2018ರಲ್ಲಿ ಈ ಸಂಸತ್ತಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಿದರು. ರಾಷ್ಟ್ರಕವಿ ಕುವೆಂಪು ಬರೆದ ಮತ್ತು ನಟಸಾರ್ವಭೌಮ ಡಾ. ರಾಜ್‌ಕುಮಾರ್ ಹಾಡಿರುವ ಭಾವಗೀತೆ ಕೆಲವು ಪದಗಳೊಂದಿಗೆ ನನ್ನ ಹೇಳಿಕೆಗಳನ್ನು ಮಗಿಸುತ್ತಿದ್ದೇನೆ, ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ಕನ್ನಡವಾಗಿರು, ಧನ್ಯವಾದಗಳು ಸಭಾಪತಿ' ಎಂದು ಅವರು ತಮ್ಮ ಭಾಷಣದಲ್ಲಿ ಮಾತನಾಡಿದರು. ಇದಕ್ಕೆ ಎಲ್ಲ ಸದಸ್ಯರು ಚಪ್ಪಾಳೆ ಮೂಲಕ ಅಭಿನಂದಿಸಿದರು.

ಪಾದಚಾರಿಗಳ ಮೇಲೆ ಕಾರು ಹರಿಸಿದ ಕಿರುತೆರೆ ಸಹ ನಿರ್ದೇಶಕ

ಓರ್ವ ಸಾವು, ಮೂವರಿಗೆ ತೀವ್ರ ಗಾಯ

ಬೆಂಗಳೂರು, ಮೇ 20– ಕಿರುತೆರೆ ಸಹಾಯಕ ನಿರ್ದೇಶಕನೋರ್ವ ನಾಲ್ವರು



ಪಾದಚಾರಿಗಳ ಮೇಲೆ ಕಾರು ಹರಿಸಿರುವ ಘಟನೆ ಬೆಂಗಳೂರಿನ ಕತ್ರಿಗುಪ್ಪೆ ಬಳಿ ನಡೆದಿದ್ದು, ಈ ಅಪಘಾತದಲ್ಲಿ ಓರ್ವ ಸಾವನ್ನಪ್ಪಿ, ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಶುಕ್ರವಾರ ಬೆಳಗ್ಗೆ 7.20ರ ಸುಮಾರಿನಲ್ಲಿ ಬನಶಂಕರಿ ಕಡೆಯಿಂದ ಕಾರಿನಲ್ಲಿ ವೇಗವಾಗಿ ಬಂದ ಕಿರುತೆರೆ ಸಹಾಯಕ ನಿರ್ದೇಶಕ ಮುಖೇಶ್, ನಾಲ್ವರು ಪಾದಚಾರಿಗಳಿಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿಯ ರಭಸಕ್ಕೆ ಪಾದಚಾರಿಗಳು ಮೇಲಕ್ಕೆ ಚಿಮ್ಮಿದ್ದಾರೆ. ಮಾತ್ರವಲ್ಲದೇ ಸ್ಥಳದಲ್ಲೇ ಇದ್ದ ಇನ್ನೊಂದು ಕಾರು ಹಾಗೂ ಬೈಕಿಗೂ ಡಿಕ್ಕಿಯಾಗಿದೆ. ಅಪಘಾತದಲ್ಲಿ ಸುರೇಶ್ ಎಂಬಾತ ಮೃತಪಟ್ಟಿದ್ದು, ಮೂವರು ಪಾದಚಾರಿಗಳು ತೀವ್ರವಾಗಿ ಗಾಯಗೊಂಡಿದ್ದಾರೆ. ಬನಶಂಕರಿ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಚಾಲಕ ಮುಖೇಶ್‌ನನ್ನು ಪೊಲೀಸರು ಬಂಧಿಸಿದ್ದು, ಆತನ ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 20– ಮೈಸೂರಿನ ಆಕಾಶವಾಣಿ ಸರ್ಕಲ್‌ನಲ್ಲಿರುವ ಸುನಂದ ಅಕಾಡೆಮಿ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಧನುಷ್ ಕೆಂಪೇಗೌಡ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 568 (ಶೇ. 90.72) ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಈತ ಮೈಸೂರಿನ ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿ ಜಲ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ. ಕೃಷ್ಣೇಗೌಡ ಅಲಿಯಾಸ್ ಸೂರಾಪುರ ಕೃಷ್ಣ ಮತ್ತು ಪಿ. ಜಯಲಕ್ಷ್ಮಿ ದಂಪತಿ ಪುತ್ರ.






ಬಾಂಗ್ಲಾ ಯುವತಿಯ ಮೇಲೆ ಬೆಂಗಳೂರಲ್ಲಿ ಗ್ಯಾಂಗ್ ರೇಪ್: 7 ಮಂದಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು, ಮೇ 20– ಬಾಂಗ್ಲಾದೇಶದ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ 7 ಮಂದಿಗೆ ಜೀವಾವಧಿ ಶಿಕ್ಷೆ ಹಾಗೂ ಮಹಿಳೆಗೆ 20 ವರ್ಷ ಜೈಲು ಹಾಗೂ ಓರ್ವನಿಗೆ 5 ವರ್ಷ ಜೈಲು ಶಿಕ್ಷೆ ವಿಧಿಸಿ ಬೆಂಗಳೂರಿನ 54ನೇ ಸಿಸಿಹೆಚ್ ಕೋರ್ಟ್ ತೀರ್ಪು ನೀಡಿದೆ.

ಸೋಭುಜ್ ಶೇಖ್, ರಿದಯ್ ಬಾಬು, ರಕಿಬುಲ್ ಇಸ್ಲಾಂ ಸಾಗರ್, ಮೊಹಮ್ಮದ್ ಬಾಬು, ರಫ್ಸಾನ ಮಂಡಲ್, ದಾಲಿಮ್, ಅಜೀಂ ಎಂಬವರಿಗೆ ಜೀವಾವಧಿ ಶಿಕ್ಷೆ, ತಾನಿಯಾ ಎಂಬಾಕೆಗೆ 20 ವರ್ಷ ಜೈಲು ಹಾಗೂ ಜಮಾಲ್ ಎಂಬಾತನಿಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2021ರ ಮೇ 18 ರಂದು ಗ್ಯಾಂಗ್‌ರೇಪ್ ನಡೆದಿತ್ತು. ವಿಡಿಯೋ ವೈರಲ್ ಆದ ಬಳಿಕ ಮೇ 27 ರಂದು ಎಫ್‌ಐಆರ್ ದಾಖಲಾಗಿತ್ತು.





ನ್ಯಾ.ನಾಗಮೋಹನ್‌ದಾಸ್ ವರದಿ ಜಾರಿಗೆ ಚಾ.ನಗರ ಜಿಲ್ಲಾದ್ಯಂತ ಬೃಹತ್ ಪ್ರತಿಭಟನೆ





ನ್ಯಾ.ನಾಗಮೋಹನ್‌ದಾಸ್ ವರದಿ ಜಾರಿಗೆ ಆಗ್ರಹಿಸಿ ಚಾಮರಾಜನಗರದ ಜಿಲ್ಲಾಡಳಿತ ಭವನ, ಗುಂಡ್ಲುಪೇಟೆಯ ರಾಷ್ಟ್ರೀಯ ಹೆದ್ದಾರಿ, ಯಳಂದೂರಿನ ಮಿನಿ ವಿಧಾನ ಸೌಧದ ಮುಂಭಾಗ ನಾಯಕ ಸಮುದಾಯದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಮೇ 20–ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಜಾರಿಗೆ ಆಗ್ರಹಿಸಿ ಹಾಗೂ ಜನಾಂಗದ ದಾವಣಗೆರೆ ಜಿಲ್ಲೆಯ ರಾಜನಹಳ್ಳಿಯ ವಾಲ್ಮೀಕಿ ಮಠದ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿ ಅವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಬೆಂಬಲಿಸಿ ನಾಯಕ ಸಮುದಾಯದಿಂದ ನಗರ ಸೇರಿದಂತೆ ಜಿಲ್ಲಾದ್ಯಂತ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರದ ಪ್ರವಾಸಿಮಂದಿರ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿತರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆತಡೆ ನಡೆಸಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟಿಸಿ ಎಡಿಸಿ ಕಾತ್ಯಾಯಿನಿದೇವಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಾಯಕ ಜನಾಂಗದ ಮುಖಂಡ ಪು.ಶ್ರೀನಿವಾಸ ನಾಯಕ ಮಾತನಾಡಿ, 2011ರ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಗೆ ಇರುವ ಶೇ.15ರಷ್ಟು ಮೀಸಲಾತಿಯನ್ನು ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಇರುವ ಶೇ.3ರಷ್ಟು ಮೀಸಲಾತಿಯನ್ನು ಶೇ.7.5ಕ್ಕೆ ಹೆಚ್ಚಿಸಲು ವರದಿ ಸೂಚಿಸಿದ್ದು, ಇದನ್ನು ಯಥಾವತ್ತಾಗಿ ಜಾರಿ ಮಾಡಬೇಕು. ಇಲ್ಲದ್ದರೆ ಜನ–ಜಾನುವಾರುಗಳೊಂದಿಗೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ದಲಿತ ಮುಖಂಡ ಅರಕಲವಾಡಿ ನಾಗೇಂದ್ರ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮಾಜಿ ಸದಸ್ಯರಾದ ಎಸ್.ಸೋಮನಾಯಕ, ರಮೇಶ್, ತಾಪಂ ಮಾಜಿ ಅಧ್ಯಕ್ಷ ಹೆಚ್.ವಿ.ಚಂದ್ರು, ಪಾಳ್ಯ ಜಯಸುಂದರ್, ನಿವೃತ್ತ ಅಭಿಯಂತರ ರಂಗರಾಮನಾಯಕ, ಯ.ರಾಜುನಾಯಕ, ನಗರಸಭಾ ಸದಸ್ಯರಾದ ಶಿವರಾಜ್, ಸುರೇಶ್, ಪ್ರಕಾಶ್, ಮಾಜಿ ಸದಸ್ಯ ಚೆಂಗುಮಣಿ, ಮುಖಂಡರಾದ ಕಪಿನಿನಾಯಕ, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ಚಾ.ಸಿ.ಸೋಮನಾಯಕ, ಕೃಷ್ಣನಾಯಕ, ನಾರಾಯಣ್, ಶಿವುವಿರಾಟ್, ಬುಲೆಟ್ ಚಂದ್ರು ದಲಿತಮುಖಂಡ ಸಿ.ಎಂ.ಕೃಷ್ಣಮೂರ್ತಿ, ಬಿಎಸ್ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಸೇರಿದಂತೆ ತಾಲೂಕಿನ ನಾಯಕ ಸಮುದಾಯದವರು ಸಹಸ್ರಾರು ಸಂಖ್ಯೆಯಲ್ಲಿದ್ದರು.

ಗುಂಡ್ಲುಪೇಟೆ ವರದಿ: ಜನಾಂಗದ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಪಟ್ಟಣದಲ್ಲಿ ನಾಯಕ ಸಮುದಾಯದವರಿಂದ ಬೃಹತ್ ಪ್ರತಿಭಟಿಸಲಾಯಿತು. ಪಟ್ಟಣದ ಪಟ್ಟಲದಮ್ಮನವರ ದೇವಾಲಯದಿಂದ ಪ್ರವಾಸಿ ಮಂದಿರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೆರವಣಿಗೆ ಸಾಗಿದ ಪ್ರತಿಭಟನಾಕಾರರು, ಸಾರಿಗೆ ಬಸ್ ನಿಲ್ದಾಣದ ಎದುರು ಮಾನವ ಸರಪಳಿ ರಚಿಸಿ ನಾಗಮೋಹನ್ ವರದಿ ಜಾರಿಗೆ ತರುವಂತೆ ಘೋಷಣೆ ಕೂಗಿ ಆಗ್ರಹಿಸಿದರು. ನಂತರ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್ ರವಿಶಂಕರ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಮಲ್ಲೇಶ್, ಮುಖಂಡರಾದ ನಿಂಗರಾಜನಾಯ್ಕ, ತಮ್ಮಣ್ಣನಾಯ್ಕ, ಪುರಸಭೆ ಸದಸ್ಯ ಕುಮಾರ್, ಪುರಸಭೆ ಮಾಜಿ ಉಪಾಧ್ಯಕ್ಷ ಸುರೇಶ್‌ನಾಯಕ್, ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಲಿಂಗರಾಜು, ವಕೀಲ ಟಿ.ಎಸ್.ವೆಂಕಟೇಶ್, ಟಿ.ಆರ್.ರಮೇಶ್‌ನಾಯ್ಕ, ವೆಂಕಟೇಶ್ ನಾಯಕ, ಹಂಗಳ ಗ್ರಾಪಂ ಸದಸ್ಯ ವೃಷಭೇಂದ್ರ, ನಾರಾಯಣನಾಯ್ಕ, ನಾಗೇಂದ್ರ, ಚಂದ್ರಶೇಖರ ಸೇರಿದಂತೆ ತಾಲೂಕಿನ ವಿವಿಧ ಭಾಗಗಳ ನಾಯಕ ಸಮುದಾಯದ ಯಜಮಾನರು, ಮುಖಂಡರು ಹಾಗೂ ಸಮುದಾಯದವರಿದ್ದರು.

ಯಳಂದೂರು ವರದಿ: ಯಳಂದೂರು ಪಟ್ಟಣದಲ್ಲೂ ಭಾರೀ ಪ್ರತಿಭಟನೆ ನಡೆಸಲಾಯಿತು. ತಾಲೂಕು ನಾಯಕ ಮಂಡಳಿ ಹಾಗೂ ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ನಾಯಕ ಜನಾಂಗದವರು ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಪಟ್ಟಣದ ಪ್ರಮುಖಬೀದಿಗಳಲ್ಲಿ ಮೆರವಣಿಗೆ ಸಾಗಿ ಧಿಕ್ಕಾರ ಕೂಗಿದರಲ್ಲದೆ, ಪಟ್ಟಣದ ಮಿನಿ ವಿಧಾನಸೌಧ ಮುಂಭಾಗದ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟಿಸಿದರು. ನಂತರ ತಹಸೀಲ್ದಾರ್ ಆನಂದಪ್ಪ ನಾಯಕ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಜನಾಂಗ ಯಜಮಾನರಾದ ಮೂರ್ತಿ, ಪಪಂ ಸದಸ್ಯ ಮಹೇಶ್, ಕಂದಹಳ್ಳಿ ಮಹೇಶ್, ಮಾಜಿ ಸದಸ್ಯ ವೈ.ವಿ. ಉಮಾಶಂಕರ್, ಕಂದಹಳ್ಳಿ ನಾರಾಯಣ, ಅಗ್ರಹಾರ ರಂಗಸ್ವಾಮಿ, ಶ್ರೀನಿವಾಸ್ ಮಾತನಾಡಿದರು.

ತಾಲೂಕು ನಾಯಕ ಮಂಡಳಿ ಅಧ್ಯಕ್ಷ ವೈ.ಎನ್.ಮುರಳೀಕೃಷ್ಣ, ವೆಂಕಟೇಶ್, ಉಮೇಶ್, ವೆಂಕಟಾಚಲ, ಪಪಂ ಸದಸ್ಯರಾದ ವೈ.ಜಿ.ರಂಗನಾಥ, ಮಹದೇವ ನಾಯಕ, ಮಂಜು, ಮಾಜಿ ಸದಸ್ಯರಾದ ಭೀಮಪ್ಪ ಮುಖಂಡರಾದ ರಾಜಶೇಖರ್ ಸೇರಿದಂತೆ ಅನೇಕರಿದ್ದರು.

ಬೇಗೂರು ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.100 ಫಲಿತಾಂಶ


ಬಸವ ಸಿರಿ


ಚೈತ್ರ.ಎಂ


ವೇಣುಗೋಪಾಲ


ಪುಷ್ಪಲತಾ

ಬೇಗೂರು, ಮೇ 20(ಕಿರಣ್)– ಗುಂಡ್ಲುಪೇಟೆ ತಾಲೂಕಿನ ಹೊರೆಯಾಲದ ಜೆಎಸ್‌ಎಸ್ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಲಭಿಸಿದೆ. ಅತ್ಯುನ್ನತ ಶ್ರೇಣಿಯಲ್ಲಿ 9 ಪ್ರಥಮ ಶ್ರೇಣಿಯಲ್ಲಿ 32, ದ್ವಿತೀಯ ಶ್ರೇಣಿಯಲ್ಲಿ 8 ವಿದ್ಯಾರ್ಥಿ ತೇರ್ಗಡೆಯಾಇದ್ದಾರೆ. ಹೆಚ್.ಎಲ್.ಬಸವ ಸಿರಿ–608, ಚೈತ್ರ.ಎಂ–584, ವೇಣುಗೋಪಾಲ.ಎನ್–573, ಪುಷ್ಪಲತಾ.ಹೆಚ್.ಎಸ್–572, ಚಿಕ್ಕದೇವಮ್ಮ–563, ರಾಜೇಶ್ವರಿ–558, ಈಶ್ವರಿ.ಹೆಚ್.ಆರ್–539, ಅನಿತಾ–536 ಹಾಗೂ ಸುಚಿತ್ರ.ಸಿ 532 ಅಂಕಗಳನ್ನು ಪಡೆದು ಶಾಲೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ 49 ವಿದ್ಯಾರ್ಥಿಗಳು ಹಾಜರಾಗಿದ್ದು, ಎಲ್ಲರೂ ತೇರ್ಗಡೆಯಾಗಿದ್ದರೆ ಎಂದು ಮುಖ್ಯಶಿಕ್ಷಕಿ ರೇಣುಕಮ್ಮ ತಿಳಿಸಿದ್ದಾರೆ. ವಿದ್ಯಾರ್ಥಿಗಳನ್ನು ಶಿಕ್ಷಕರು ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಇಂದು ಸಂತೇಮರಹಳ್ಳಿಯಲ್ಲಿ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆ

ಚಾಮರಾಜನಗರ, ಮೇ 20– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಂತೇಮರಹಳ್ಳಿ ಉಪವಿಭಾಗವು ಮಾಸಿಕ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆಯನ್ನು ಮೇ 21ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಸಂತೇಮರಹಳ್ಳಿ ಉಪವಿಭಾಗ ಕಚೇರಿಯಲ್ಲಿ ನಡೆಸಲಿದೆ.

ವಿದ್ಯುತ್ ಸಂಬಂಧ ಸಮಸ್ಯೆಗಳಿದ್ದಲ್ಲಿ ಗ್ರಾಹಕರು ಸಭೆಗೆ ಹಾಜರಾಗಿ ತಿಳಿಸುವಂತೆ ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸುವರ್ಣಾವತಿ, ಚಿಕ್ಕಹೊಳೆ ಜಲಾಶಯ ಭರ್ತಿ ಸಾಧ್ಯತೆ

ಮುಂಜಾಗ್ರತಾ ಕ್ರಮ ವಹಿಸಲು ಡಿಸಿ ಮನವಿ

ಚಾಮರಾಜನಗರ, ಮೇ 20–ನಿರಂತರ ಮಳೆಯಿಂದ ಚಾಮರಾಜನಗರ ತಾಲೂಕಿನ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯ ಭರ್ತಿಯಾಗುವ ಸಂಭವವಿದ್ದು, ನದಿಪಾತ್ರದಲ್ಲಿ ವಾಸಿಸುತ್ತಿರುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಲು ಹಾಗೂ ಮುಂಜಾಗ್ರತೆ ವಹಿಸಲು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮನವಿ ಮಾಡಿದ್ದಾರೆ.

ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾನಯನ ಪ್ರದೇಶದಲ್ಲಿ ಮಳೆಯ ಹಿನ್ನೆಲೆಯಲ್ಲಿ ಜಲಾಶಯದ ನೀರಿನ ಶೇಖರಣಾ ಸಾಮರ್ಥ್ಯವು ಗರಿಷ್ಠ ಮಟ್ಟ ತಲುಪುವ ಹಂತದಲ್ಲಿದ್ದು, ಜಲಾಶಯವು ಯಾವುದೇ ಸಮಯದಲ್ಲಿ ಭರ್ತಿಯಾಗಬಹುದು. ಹೀಗಾಗಿ ಜಲಾಶಯದ ಪಾತ್ರದಲ್ಲಿ ವಾಸಿಸುವ ಜನರು ಜಲಾಶಯದ ನೀರಿನಲ್ಲಿ ಬಟ್ಟೆ ಒಗೆಯುವುದು, ಸ್ನಾನ ಮಾಡುವುದು, ಹಸು ತೊಳೆಯುವುದು, ಈಜುವುದು ಇನ್ನಿತರ ಚಟುವಟಿಕೆಗಳನ್ನು ಮಾಡಬಾರದು. ಜಲಾಶಯದ ನದಿಪಾತ್ರದಲ್ಲಿ ಬರುವ ರೈತ ಬಾಂಧವರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಮುನ್ನೆಚ್ಚರಿಕೆಯಿಂದ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಆಸ್ತಿ–ಪಾಸ್ತಿ ಹಾಗೂ ಜಾನುವಾರುಗಳ ಬಗ್ಗೆ ನಿಗಾವಹಿಸಬೇಕು. ಅಲ್ಲದೆ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಅಧಿಕಾರಿ, ಸಿಬ್ಬಂದಿಗೆ ಸಹಕರಿಸಬೇಕು. ಜಲಾಶಯದ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ನದಿಗಳಿಗೆ ಇಳಿಯಬಾರದು ಎಂದು ಜಿಲ್ಲಾಧಿಕಾರಿ ಕೋರಿದ್ದಾರೆ.

ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು ವಿಪತ್ತನ್ನು ನಿಭಾಯಿಸಲು ತಯಾರಿ ಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಮಕ್ಕಳು, ಸಾರ್ವಜನಿಕರು ಅಪಾಯಕಾರಿ ವಿದ್ಯುತ್ ಕಂಬ, ಕಟ್ಟಡ, ಮರಗಳ ಹತ್ತಿರ, ಕೆಳಗೆ ನಿಲ್ಲದೆ ಸುರಕ್ಷಿತ ಸ್ಥಳಗಳನ್ನು ತಲುಪಬೇಕು. ತುರ್ತು ಸೇವೆಗೆ ಶುಲ್ಕ ರಹಿತ ಸಂಖ್ಯೆ 1077, ದೂ. 08226–223160, ಹಾಗೂ ಮೊ. 9740942901 ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಚಾರುಲತಾ ಸೋಮಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌತಮ ಪ್ರೌಢಶಾಲೆಗೆ ಪೂರ್ಣ ಫಲಿತಾಂಶ

ಗುಂಡ್ಲುಪೇಟೆ, ಮೇ 20(ಸೋಮ್.ಜಿ)–ತಾಲೂಕಿನ ಬೊಮ್ಮಲಾಪುರದಲ್ಲಿರುವ ಗೌತಮ ಪ್ರೌಢಶಾಲೆಗೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ ಎಂದು ಮುಖ್ಯಶಿಕ್ಷಕ ಕೆ.ರಾಜು ತಿಳಿಸಿದ್ದಾರೆ.

ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 10 ವಿದ್ಯಾರ್ಥಿಗಳಲ್ಲಿ 6 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣಗೊಂಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಗೌತಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎ.ಸಿದ್ದರಾಜು ಮತ್ತು ಆಡಳಿತ ಮಂಡಳಿಯ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಜೂ.5, ಮುಪ್ಪಿನ ಷಡಕ್ಷರದೇವ ಸಹಕಾರ ಸಂಘಕ್ಕೆ ಚುನಾವಣೆ

ಯಳಂದೂರು ಮೇ 20(ವಿ.ನಾಗರಾಜು)–ತಾಲೂಕಿನ ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರ ಸಂಘದ 2022–23ನೇ ಸಾಲಿನ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿದೆ.

ಸಂಘದ ಒಟ್ಟು 15 ನಿರ್ದೇಶಕ ಸ್ಥಾನಕ್ಕೆ ಮೇ 24ರಿಂದ ಮೇ 27 ರವರೆಗೆ ನಾಮಪತ್ರ ಸಲ್ಲಿಸಬಹುದು. ನಾಮಪತ್ರವನ್ನು ಹಿಂಪಡೆಯಲು ಮೇ 29 ಕೊನೆಯ ದಿನ. ಜೂ.5 ರ ಭಾನುವಾರ ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರಗೆ ಮತದಾನ ಪಕ್ರಿಯೆ ಶ್ರೀಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರ ಸಂಘದ ಕಚೇರಿಯಲ್ಲಿ ನಡೆಯಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಎಸ್.ನಾಗರಾಜು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.6360444473 ಅನ್ನು ಸಂಪರ್ಕಿಸಿ.

ಮಹದೇವಮ್ಮ ನಿಧನ



ಕೊಳ್ಳೇಗಾಲ, ಮೇ 20– ಪತ್ರಿಕಾ ವರದಿಗಾರ ಎಂ.ಪಿ.ಮಹೇಶ್ ಅವರ ತಾಯಿ ಮಹದೇವಮ್ಮ(60) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಶುಕ್ರವಾರ ಮಧ್ಯಾಹ್ನ ಸ್ವಗ್ರಾಮ ಮೂಗೂರಿನ ಹೊರವಲಯದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹಿರಿಯ ಪತ್ರಕರ್ತ ಎ.ಹೆಚ್.ಗೋವಿಂದ, ಕೋಟಂಬಳ್ಳಿ ಗುರುಸ್ವಾಮಿ. ತಾಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ನಾಗೇಂದ್ರ ಸ್ವಾಮಿ ಇತರರು ಸಂತಾಪ ಸೂಚಿಸಿದ್ದಾರೆ.

ಮಹದೇವಶೆಟ್ಟಿ



ಯಳಂದೂರು, ಮೇ 20–ತಾಲೂಕಿನ ದುಗ್ಗಹಟ್ಟಿ ಗ್ರಾಮದ ಉಪ್ಪಾರ ಬಡಾವಣೆಯ ನಿವಾಸಿ ಮಹದೇವಶೆಟ್ಟಿ(50) ಬುಧವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ ಇಬ್ಬರು ಪುತ್ರಿಯರು, ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು.

ರೆಡ್‌ಕ್ರಾಸ್ ಸಂಸ್ಥೆಯ ಶತಮಾನೋತ್ಸವ ಭವನ ಉದ್ಘಾಟನೆ



ಮಡಿಕೇರಿ, ಮೇ 20–ಭಾರತೀಯ ರೆಡ್‌ಕ್ರಾಸ್ ಜಾಗತಿಕ ಸಂಸ್ಥೆಯಾಗಿದ್ದು, ಪ್ರಾಕೃತಿಕ ವಿಕೋಪ ಹಾಗೂ ಕೋವಿಡ್–19 ಸಂದರ್ಭದಲ್ಲಿ ಒಳ್ಳೆಯ ಕೆಲಸ ಮಾಡಿದೆ ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಶ್ಲಾಘಿಸಿದ್ದಾರೆ.

ನಗರದ ಸ್ಟೀವರ್ಟ್ ಹಿಲ್ ರಸ್ತೆಯಲ್ಲಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ಕೊಡಗು ಜಿಲ್ಲಾ ಘಟಕದ ಶತಮಾನೋತ್ಸವ ಭವನವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ಯುದ್ಧ ಹಾಗೂ ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ಸಂಕಷ್ಟಕ್ಕೆ ತುತ್ತಾದವರಿಗೆ ಆರೋಗ್ಯ ಸೇವೆ ಕಲ್ಪಿಸುವುದು ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ರೆಡ್‌ಕ್ರಾಸ್ ಸಂಸ್ಥೆಯ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿಯೂ ರೆಡ್‌ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವುದಕ್ಕೆ ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಯಲ್ಲಿ 2018, 2019 ಮತ್ತು 2020 ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪ ಹಾಗೂ ಕೋವಿಡ್–19 ಸಂದರ್ಭದಲ್ಲಿ ನಾಗರಿಕರ ಆರೋಗ್ಯಕ್ಕೆ ಸಂಬಂಧಿಸಿದ ಮಾರ್ಗದರ್ಶನ ಮಾಡುವ ಮೂಲಕ ಜನಸಾಮಾನ್ಯರಿಗೆ ಒಳಿತು ಮಾಡುವಲ್ಲಿ ರೆಡ್‌ಕ್ರಾಸ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ ಮಾತನಾಡಿ ಸಮಾಜದಲ್ಲಿ ತೊಂದರೆಗೆ ಸಿಲುಕಿದವರಿಗೆ ಸ್ಪಂದಿಸುವಲ್ಲಿ ರೆಡ್‌ಕ್ರಾಸ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಜಿಲ್ಲೆಯಲ್ಲಿ 600 ಕ್ಕೂ ಹೆಚ್ಚು ರೆಡ್‌ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು ಇದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಹೊಂದಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ರೆಡ್‌ಕ್ರಾಸ್ ಸಂಸ್ಥೆ ಬಲಯುತವಾದಲ್ಲಿ ಸಮಾಜದಲ್ಲಿ ಸಂಕಷ್ಟಕ್ಕೆ ತುತ್ತಾದವರಿಗೆ ಆರೋಗ್ಯ ಸೇವೆ ಕಲ್ಪಿಸುವಲ್ಲಿ ಸಹಕಾರಿಯಾಗಲಿದೆ ಎಂದರು.

ಮಾಜಿ ಸಚಿವ ಎಂ.ಸಿ.ನಾಣಯ್ಯ ಮಾತನಾಡಿ ರೆಡ್‌ಕ್ರಾಸ್ ಸಂಸ್ಥೆಯು ಸ್ವಿಜರ್‌ಲ್ಯಾಂಡ್‌ನ ಜಿನೀವಾದಲ್ಲಿ ಸ್ಥಾಪನೆಯಾಗಿದೆ. ಸುಮಾರು 120 ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ರೆಡ್‌ಕ್ರಾಸ್ ಶತಮಾನೋತ್ಸವ ಭವನ ನಿರ್ಮಾಣಕ್ಕೆ ಜಿಲ್ಲಾಡಳಿತ ಎಲ್ಲಾ ರೀತಿಯ ಸಹಕಾರ ನೀಡಿದೆ. ಆ ನಿಟ್ಟಿನಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಜಿಲ್ಲೆಯಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ ಮಾತನಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಆರ್.ವೆಂಕಟೇಶ್, ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಬಿ.ಕೆ.ರವೀಂದ್ರ ರೈ, ರೆಡ್ ಕ್ರಾಸ್ ಸೊಸೈಟಿಯ ಉಪ ಸಭಾಪತಿ ಎಂ. ಸುರೇಶ್ ಚಂಗಪ್ಪ ಅನಿಲ್ ಎಚ್.ಟಿ., ಪ್ರಧಾನ ಕಾರ್ಯದರ್ಶಿ ಎಚ್.ಆರ್. ಮುರಳೀಧರ್, ಕೋಶಾಧಿಕಾರಿ ಶ್ಯಾಂ ಜೋಸೇಫ್, ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳಾದ ಡಾ.ಯಶೋಧ, ಎಂ.ಧನಂಜಯ್, ಮಹಮ್ಮದ್ ಹನೀಫ್, ಮಧುಕರ, ಪ್ರಕಾಶ್, ಕೆ.ಡಿ.ದಯಾನಂದ, ಬಿ.ಜಿ.ಅನಂತಶಯನ, ಅಂಬೆಕಲ್ಲು ನವೀನ್, ಕುಶಾಲಪ್ಪ, ರತನ್ ತಮ್ಮಯ್ಯ, ದರ್ಶನ್ ಬೋಪಯ್ಯ, ಸತೀಶ್ ರೈ, ಶರತ್ ಶೆಟ್ಟಿ, ಸತೀಶ್ ಸೋಮಣ್ಣ, ವಿಜಯ ಶೆಟ್ಟಿ, ಜಿಲ್ಲಾ ಆಯುಷ್ ಅಧಿಕಾರಿ ರೇಣುಕಾ ದೇವಿ, ನಿರ್ಮಿತಿ ಕೇಂದ್ರಯೋಜನಾ ನಿರ್ದೇಶಕರಾದ ಸಚಿನ್ ಇದ್ದರು.

ಕೋವಿಡ್–19 ಸಂದರ್ಭದಲ್ಲಿ ಮೃತಪಟ್ಟ ಕುಟುಂಬದವರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು. ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಬಿ.ಕೆ.ರವೀಂದ್ರ ರೈ ಮತ್ತು ಪ್ರಧಾನ ಕಾರ್ಯದರ್ಶಿ ಎಚ್.ಆರ್.ಮುರಳೀಧರ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ

ಫುಡ್ ಡೆಲಿವರಿ ಬಾಯ್ ಸಾವು



ಮಡಿಕೇರಿ, ಮೇ 20– ಅಪರಿಚಿತ ವಾಹನವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಆಹಾರ ಡೆಲಿವರಿ ಮಾಡಲು ತೆರಳುತ್ತಿದ್ದ ಯುವಕನೊಬ್ಬ ಮೃತಪಟ್ಟ ಘಟನೆ ನಗರದ ಚೈನ್ ಗೇಟ್ ಬಳಿ ಶುಕ್ರವಾರ ಮಧ್ಯಾಹ್ನ ನಡೆದಿದೆ. ಮೂಲತಃ ಮೈಸೂರು ವಿಜಯನಗರ 2ನೇ ಹಂತದ ನಿವಾಸಿ, ಕುಶಾಲನಗರದಲ್ಲಿ ನೆಲೆಸಿದ್ದ ಎ.ಸಿ.ತಿಮ್ಮಯ್ಯ ತೇಜಸ್(27) ಅಪಘಾತದಲ್ಲಿ ಮೃತಪಟ್ಟ ಯುವಕ.

ವಿವರ: ಕಳೆದ 2 ತಿಂಗಳ ಹಿಂದೆ ತಿಮ್ಮಯ್ಯ ತೇಜಸ್ ಮಡಿಕೇರಿಯಲ್ಲಿ ಆನ್‌ಲೈನ್ ಮೂಲಕ ಆಹಾರ ಪೂರೈಕೆ ಮಾಡುವ ಖಾಸಗಿ ಸಂಸ್ಥೆಗೆ ಕೆಲಸಕ್ಕೆ ಸೇರಿದ್ದರು ಎನ್ನಲಾಗಿದೆ. ಪ್ರತಿ ದಿನವೂ ಕುಶಾಲನಗರದಿಂದ ಮಡಿಕೇರಿಗೆ ಕೆಲಸಕ್ಕೆ ಬರುತ್ತಿದ್ದ ತಿಮ್ಮಯ್ಯ ತೇಜಸ್, ಶುಕ್ರವಾರ ಸಂಜೆ 3.30 ಗಂಟೆಯ ವೇಳೆಗೆ ಚೆಟ್ಟಳ್ಳಿಯ ಗ್ರಾಹಕರೊಬ್ಬರಿಗೆ ಫುಡ್ ಡೆಲಿವರಿ ಮಾಡಲು ತೆರಳುತ್ತಿದ್ದರು. ಈ ವೇಳೆ ಚೈನ್ ಗೇಟ್ ಬಳಿ ಅಪರಿಚಿತ ವಾಹನವೊಂದು ತಿಮ್ಮಯ್ಯ ತೇಜಸ್ ಅವರು ತೆರಳುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲಿ ವಾಹನ ನಿಲ್ಲಿಸದೇ ಚಾಲಕ, ವಾಹನ ಸಹಿತ ಪರಾರಿಯಾಗಿದ್ದಾನೆ. ಇದೇ ವೇಳೆ ಆ ದಾರಿಯಲ್ಲಿ ಬರುತ್ತಿದ್ದ ಮಿನಾಜ್ ಪ್ರವೀಣ್ ಎಂಬ ಸಮಾಜ ಸೇವಕಿ ಗಾಯಾಳು ತಿಮ್ಮಯ್ಯ ತೇಜಸ್ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ತೀವ್ರ ಗಾಯಗೊಂಡು ರಕ್ತ ಸ್ರಾವದಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಪ್ರಕರಣದ ಕುರಿತು ಮಡಿಕೇರಿ ನಗರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಓರ್ವನ ಸಾವಿಗೆ ಕಾರಣವಾದ ವಾಹನ ಮತ್ತು ಅದರ ಚಾಲಕನ ಪತ್ತೆಗಾಗಿ ಪೊಲೀಸರು ಆ ಮಾರ್ಗದಲ್ಲಿರುವ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಘಟನೆಯ ಸ್ಥಳ ಮಹಜರು ನಡೆಸಿದ ಪೊಲೀಸರು ದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ವಿ.ಪೇಟೆಯಲ್ಲಿ ಬೃಹತ್ ಹಿಂದೂ ಸಮಾಜೋತ್ಸವ



ವಿರಾಜಪೇಟೆ,ಮೇ 20–ವಿಶ್ವ ಹಿಂದೂ ಪರಿಷತ್, ಬಜರಂಗದಳ, ದುರ್ಗಾವಾಹಿನಿ ಹಾಗೂ ಮಾತೃ ಶಕ್ತಿ ವತಿಯಿಂದ ವಿರಾಜಪೇಟೆ ತಾಲೂಕು ಮೈದಾನದಲ್ಲಿ ಬೃಹತ್ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ನಡೆಯಿತು. ಅರಕಲಗೊಡು ಬಸವಪಟ್ಟಣದ ತೋಂಟದಾರ್ಯ ಸಂಸ್ಥಾನ ಮಠದ ಬಸವಲಿಂಗ ಸ್ವಾಮೀಜಿಯವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ದಿಕ್ಸೂಚಿ ಭಾಷಣ ಮಾಡಿದ ಕುಮಾರಿ ಹಾರಿಕ ಮಂಜುನಾಥ್, ನಮ್ಮಲ್ಲಿ ಪ್ರಮುಖವಾಗಿ ಹಿಂದೂ ಧರ್ಮದ ಮಹತ್ವವನ್ನು ತಿಳಿಸಿಕೊಡಬೇಕು. ಜಾತಿ ಎಂಬುದನ್ನು ದೇವರಕೋಣೆಯಲ್ಲಿಟ್ಟು ಹಿಂದೂ ಧರ್ಮದ ಬಗ್ಗೆ ತಾಯಂದಿರನ್ನು ಜಾಗೃತಗೊಳಿಸಬೇಕು. ಲವ್ ಜಿಹಾದ್ ವಿರುದ್ಧ ಹೋರಾಡುವಂತಾಗಬೇಕು. ಮನೆಯಲ್ಲಿ ಮಕ್ಕಳನ್ನು ಜಾಗೃತಗೊಳಿಸುವ ಮೂಲಕ ಅವರಿಗೆ ನಮ್ಮ ಧಾರ್ಮಿಕತೆಯ ಮಹತ್ವದ ಬಗ್ಗೆ ತಿಳಿಸಬೇಕು. ಟಿಪ್ಪು ಕಾಲದಲ್ಲಿ ದೇವಟ್ಟಿ ಪರಂಬುವಿನಲ್ಲಿ 35 ಸಾವಿರ ಕೊಡವ ನರಮೇದ ನಡೆಸಿದ್ದು, ಉಳಿದ ಅನೇಕರನ್ನು ಮತಾಂತರಗೊಳಿಸಿದ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ಮಾಡಬೇಕು ಎಂದರಲ್ಲದೆ, ಪೊನ್ನಂಪೇಟೆಯಲ್ಲಿ ತ್ರಿಶೂಲ ದೀಕ್ಷೆಯನ್ನು ಸಮರ್ಥಿಸಿ ಅದು ಶೌರ್ಯ ಪ್ರೇರಣೆ ಮುಂದೆಯು ಇದು ನಡೆಯಲಿದ್ದು, ದೇಶ ಕಾಯುವ ಯೋಧರನ್ನು ರೂಪಿಸುವ ಕಾರ್ಯವಾಗಿದೆ ಎಂದರು.

ಶಂಖ ಊದುವ ಮೂಲಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು, ವಿಶ್ವ ಹಿಂದೂ ಪರಿಷತ್‌ನ ತಾಲೂಕು ಅಧ್ಯಕ್ಷ ಬಿ.ಎಂ. ಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ವಿಶ್ವಹಿಂದೂ ಪರಿಷತ್ ಜಿಲ್ಲಾ ಅಧ್ಯಕ್ಷ ಜಿ.ಕೃಷ್ಣಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರೆ, ಅತಿಥಿಗಳಾಗಿ ಪುಗ್ಗೇರ ಪೊನ್ನಪ್ಪ ಮಾತನಾಡಿದರು. ವಿಶ್ವ ಹಿಂದೂ ಪರಿಷತ್ ತಾಲೂಕು ಕಾರ್ಯದರ್ಶಿ ಕೇತಿರ ಯತೀಶ್, ಬಜರಂಗದಳದ ಸಂಚಾಲಕರಾದ ವಿವೇಕ್ ರೈ, ಮಾತೃಮಂಡಳಿ ತಾಲೂಕು ಅಧ್ಯಕ್ಷೆ ಧನಲಕ್ಷ್ಮೀ ಮತ್ತಿತರರು ಉಪಸ್ಥಿತರಿದ್ದರು. ಮಳೆಯ ನಡುವೆಯೂ ಹಿಂದೂ ಕಾರ್ಯಕರ್ತರು ಎರಡು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು

ಮೊದಲಿಗೆ ಪಟ್ಟಣದ ತೆಲುಗರ ಬೀದಿಯ ಮಾರಿಗುಡಿಯಲ್ಲಿ ಗೋ ಪೂಜೆ ನೆರವೇರಿಸಿ ಬಳಿಕ ಶೋಭಯಾತ್ರೆಗೆ ಚಾಲನೆ ನೀಡಲಾಯಿತು. ಈ ಸಂದರ್ಭ ಶಾಸಕ ಕೆ.ಜಿ.ಬೋಪಯ್ಯ, ಜಿಪಂ ಮಾಜಿ ಸದಸ್ಯರಾದ ಮಹೇಶ್ ಗಣಪತಿ, ಶಶಿ ಸುಬ್ರಮಣಿ ಮತ್ತು ಕಾಂತಿ ಸತೀಶ್ ಮುಂತಾದವರು ಉಪಸ್ಥಿತರಿದ್ದರು.

ಕೊಡಗು ಪತ್ರಕರ್ತರ ಸಂಘ ಉದ್ಘಾಟನೆ

ಪತ್ರಕರ್ತರು ವ್ಯಕ್ತಿಯ ಚಾರಿತ್ರ್ಯವಧೆ ಮಾಡಬಾರದು

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್



ಮಡಿಕೇರಿ ಮೇ 20– ಸಮಾಜದ ತಪ್ಪುಗಳನ್ನು ತಿದ್ದುವ ಮೂಲಕ ಅಭಿವೃದ್ಧಿಗೆ ಪೂರಕವಾಗುವ ರೀತಿಯಲ್ಲಿ ಪತ್ರಕರ್ತರು ಕಾರ್ಯ ನಿರ್ವಹಿಸಬೇಕೆ ಹೊರತು ವ್ಯಕ್ತಿಯ ಚಾರಿತ್ರ್ಯವಧೆ ಮಾಡಬಾರದು ಎಂದು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಕರೆ ನೀಡಿದ್ದಾರೆ.

ನಗರದ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ನಡೆದ ಕೊಡಗು ಪತ್ರಕರ್ತರ ಸಂಘದ ಉದ್ಘಾಟನೆ ಮತ್ತು ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಮಾಡುವ ವರದಿಗಳು ಸಮಾಜ ಸುಧಾರಣೆ ಮತ್ತು ಅಭಿವೃದ್ಧಿ ಪರವಾಗಿರಬೇಕು ಎಂದರು.

ಪತ್ರಕರ್ತರ ಕೆಲಸ ಕಷ್ಟದ ಕೆಲಸ, ಆದರೆ ವ್ಯಕ್ತಿಯ ಚಾರಿತ್ರ್ಯವಧೆಯ ವರದಿಗಳಿಂದ ಯಾವುದೇ ಪ್ರಯೋಜನವಿಲ್ಲ ರಾಜಕಾರಣಿಗಳ, ಸಮಾಜ ಸೇವಕರ ತಪ್ಪುಗಳನ್ನು ತಿದ್ದುವುದರ ಜೊತೆಗೆ ಉತ್ತಮ ಕಾರ್ಯಗಳಿಗೆ ಪ್ರೋತ್ಸಾಹ ನೀಡುವಂತಿರಬೇಕು ಎಂದರು.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಉದ್ಘಾಟಿಸಿ ಮಾತನಾಡಿದ ಶಾಸಕ ಕೆ.ಜಿ.ಬೋಪಯ್ಯ, ಸಮಾಜದಲ್ಲಿ ಪತ್ರಕರ್ತರ ಪಾತ್ರ ಮತ್ತು ಜವಾಬ್ದಾರಿ ದೊಡ್ಡದು, ಸಂವಿಧಾನದ 4ನೇ ಅಂಗವಾಗಿ ಪತ್ರಿಕಾರಂಗವನ್ನು ಗುರುತಿಸಲಾಗಿದ್ದು, ಸಮಾಜದಲ್ಲಿನ ವ್ಯತ್ಯಾಸಗಳನ್ನು ಹುಡುಕಿ ಜನರಿಗೆ ಮನವರಿಕೆ ಮಾಡುವ ಕೆಲಸ ಆಗಬೇಕು ಎಂದರು.ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕಾರಂಗ ಶಾಶ್ವತವಾಗಿರಬೇಕೆಂದ ಅವರು, ಪತ್ರಕರ್ತರ ಬೇಡಿಕೆಗಳಿಗೆ ಸರಕಾರದ ಮಟ್ಟದಲ್ಲಿ ಸ್ಪಂದಿಸುವ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಕರ್ನಾಟಕ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಮಾತನಾಡಿ, ಪತ್ರಕರ್ತರು ಸಮಾಜದ ಆಸ್ತಿಯಾಗಿದ್ದರೂ ರಕ್ಷಣೆ ಮತ್ತು ಜೀವನ ಭದ್ರತೆ ಇಲ್ಲದಾಗಿದೆ. ಜಿಲ್ಲೆಯ ಪತ್ರಕರ್ತರಿಗೆ ನಿವೇಶನ ನೀಡುವ ನಿಟ್ಟಿನಲ್ಲಿ ಜಾಗ ಗುರುತಿಸಿ ಕೊಡುವ ಭರವಸೆ ನೀಡಿದ ಅವರು, ಸರಕಾರದ ಮಟ್ಟದಲ್ಲಿ ಸೂಕ್ತ ಸ್ಪಂದನೆ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಪತ್ರಕರ್ತರು ಒಬ್ಬ ವ್ಯಕ್ತಿ ಅಥವಾ ವಿಷಯದ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಿ ವರದಿ ಮಾಡುವುದರಿಂದ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಪತ್ರಕರ್ತ ಬಿ.ಜಿ.ಅನಂತಶಯನ, ಧೈರ್ಯ ಮತ್ತು ಆತ್ಮಸ್ಥೈರ್ಯ ಪತ್ರಕರ್ತರಿಗೆ ಮುಖ್ಯ, ಜ್ಞಾನವನ್ನು ತುಂಬಿಸಿಕೊಳ್ಳುವ ಕೆಲಸವನ್ನು ಪತ್ರಕರ್ತರು ಮಾಡಬೇಕು, ನಿಂತ ನೀರಾಗದೆ ಹರಿಯುವ ನದಿಯಾಗಿ ಎಲ್ಲರಿಗೂ ಉಪಕಾರಿಯಾಗಿ ಬಾಳಬೇಕು ಎಂದರು.


ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್, ಹಿರಿಯ ಪತ್ರಕರ್ತ ಟಿ.ಪಿ.ರಮೇಶ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್. ರಮೇಶ್ ಹೊಳ್ಳ ಹಾಗೂ ಕೊಡಗು ಪತ್ರಿಕಾ ಭವನ ಟ್ರಸ್ಟಿ ಬಿ.ಎಸ್.ಮನುಶೆಣೈ ಮಾತನಾಡಿದರು.

ಕ್ಷೇಮನಿಧಿಗೆ ಆರ್ಥಿಕ ನೆರವು

ಇದೇ ಸಂದರ್ಭ ಶಾಸಕರುಗಳಾದ ಎಂ.ಪಿ.ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ, ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆಯ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ ಇದೇ ಸಂದರ್ಭ ಕೊಡಗು ಪತ್ರಕರ್ತರ ಸಂಘದ ಕ್ಷೇಮನಿಧಿಗೆ ಆರ್ಥಿಕ ನೆರವು ಘೋಷಣೆ ಮಾಡಿದರು. ತಮ್ಮ ತಾಯಿ ರಾಜಲಕ್ಷ್ಮೀ ಅವರ ಹೆಸರಿನಲ್ಲಿ ಹಿರಿಯ ಪತ್ರಕರ್ತ ಬಿ.ಜಿ.ಅನಂತಶಯನ ಅವರು ರೂ.25 ಸಾವಿರ ದತ್ತಿನಿಧಿ ನೀಡಿದರು.

ಬಿ.ಜಿ.ಅನಂತಶಯನ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಸೋಮವಾರ	2850.39 ಅಡಿ
ಒಳ ಹರಿವು	2310 ಕ್ಯೂಸೆಕ್
ಹೊರ ಹರಿವು	250 ಕ್ಯೂಸೆಕ್

ಮೂರನೇ ಪುಟದಿಂದ

ಬಸವರಾಜ ಬೊಮ್ಮಾಯಿ ರಾಜೀನಾಮೆ?

ನಾಯಕತ್ವ ಬದಲಾವಣೆ ಮತ್ತು ಮುಂಬರುವ ವಿಧಾನಸಭೆ ಚುನಾವಣೆ ಕುರಿತಂತೆ ಚರ್ಚೆ ನಡೆದಿದೆ. ಇದರ ಬೆನ್ನಲ್ಲೆ ಮುಖ್ಯಮಂತ್ರಿಯವರು ಇಂದು ತಮ್ಮ ಮಧ್ಯಾಹ್ನದ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಹಠಾತ್ತನೆ ದೆಹಲಿಗೆ ತೆರಳಿದ್ದಾರೆ. ದೆಹಲಿಯಿಂದ ನಗರಕ್ಕೆ ಹಿಂತಿರುಗುವ ಅಧಿಕೃತ ಸಮಯ ಪ್ರಕಟಗೊಂಡಿಲ್ಲ.

ಕಳೆದ ವಾರ ತ್ರಿಪುರ ಮುಖ್ಯಮಂತ್ರಿಯಾಗಿದ್ದ ಬಿಪ್ಲಬ್‌ಕುಮಾರ್ ದೇಬ್ ಅವರನ್ನು ಇದೇ ರೀತಿ ದೆಹಲಿಗೆ ದಿಢೀರನೆ ಕರೆಸಿಕೊಂಡ ವರಿಷ್ಠರು ರಾಜೀನಾಮೆ ಪಡೆದಿದ್ದರು.

ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಹೊರ ಬರುತ್ತಿದ್ದಂತೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವ ವಿಷಯವನ್ನು ಬಿಪ್ಲಬ್ ಬಹಿರಂಗಪಡಿಸಿದರು.

ಉತ್ತರ ಪ್ರದೇಶ ಹೊರತುಪಡಿಸಿ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅಲ್ಲಿನ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ನಾಯಕತ್ವ ಬದಲಾವಣೆ ಮಾಡಿ ಅಲ್ಲೆಲ್ಲಾ ಮತ್ತೆ ಅಧಿಕಾರಕ್ಕೆ ಬಂದಿದೆ. ಮಹಾರಾಷ್ಟ್ರ ಸೇರಿದಂತೆ ಎಲ್ಲಿ ನಾಯಕತ್ವ ಬದಲಾವಣೆ ಮಾಡಿಲ್ಲವೋ ಅಂತಹ ಕಡೆ ಬಿಜೆಪಿ ಪರಾಭವಗೊಂಡಿದೆ. ಇದೇ ಭಯದಿಂದ ಕರ್ನಾಟಕದಲ್ಲೂ ಹೊಸ ನಾಯಕತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸಲು ವರಿಷ್ಠರು ಮುಂದಾಗಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ.

ಇಬ್ಬರು ಯುವಕರು ದುರ್ಮರಣ

ಚಾಲನೆ ಮಾಡುತ್ತಿದ್ದ ಸಚಿನ್ ಮತ್ತು ಆತನ ಹಿಂದೆ ಕುಳಿತಿದ್ದ ದೊರೆಸ್ವಾಮಿ ಮೃತಪಟ್ಟಿದ್ದು, ಇವರಿಬ್ಬರ ಹಿಂದೆ ಕುಳಿತಿದ್ದ ರಘು ತೀವ್ರವಾಗಿ ಗಾಯಗೊಂಡಿದ್ದಾನೆ.

ಅಪಘಾತ ನಡೆದ ಸ್ಥಳದಿಂದ ಸುಮಾರು 800 ಮೀಟರ್ ದೂರದಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ನಂಜನಗೂಡು ಸಂಚಾರ ಠಾಣೆ ಪೊಲೀಸರು, ತಕ್ಷಣವೇ ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಮೃತ ಸಚಿನ್ ಸಹೋದರ ಸಂಜಯ್ ನೀಡಿದ ದೂರಿನ ಮೇರೆಗೆ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ನಂಜನಗೂಡು ಸಂಚಾರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ತಾನು ಗುಂಡ್ಲುಪೇಟೆ ಕಡೆಯಿಂದ ನಂಜನಗೂಡು ಕಡೆಗೆ ಬಸ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ರಸ್ತೆ ಕ್ಲಿಯರೆನ್ಸ್ ಇತ್ತು. ಬಸ್ 80 ಕಿ.ಮೀ. ವೇಗದಲ್ಲಿದ್ದು, ಎದುರಿಗೆ ಬರುತ್ತಿದ್ದ ಲಾರಿಯನ್ನು ಹಿಂದಿಕ್ಕಿ ಹಠಾತ್ತನೇ ಮೂವರು ಸವಾರಿ ಮಾಡುತ್ತಿದ್ದ ಬೈಕ್ ಬಸ್‌ಗೆ ಡಿಕ್ಕಿ ಹೊಡೆಯಿತು ಎಂದು ಬಸ್‌ನ ಚಾಲಕ ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ ಎನ್ನಲಾಗಿದೆ.

ರೈತರಿಂದ ಲಕ್ಷಾಂತರ ರೂ. ಸುಲಿಗೆ

ಅಂಬೇಡ್ಕರ್ ಅಭಿವೃದ್ಧಿ ನಿಗಮ, ಸಮಾಜ ಕಲ್ಯಾಣ ಇಲಾಖೆ ಮತ್ತು ದೇವರಾಜ ಅರಸು ಹಿಂದುಳಿದ ವರ್ಗದ ಇಲಾಖೆ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಕೊರೆಸಲು ಅನುದಾನ ಕೊಡಿಸುವುದಾಗಿ ತಿಳಿಸಿ, ಅರಸೀಕೆರೆ ಪ್ರವಾಸಿ ಮಂದಿರದ ಬಳಿ ಬರಲು ಹೇಳಿ ದ್ದಾರೆ. 2021ರ ಜನವರಿ 30ರಂದು ವಿಶ್ವನಾಥ್ ಅವರು ಅಲ್ಲಿಗೆ ತೆರಳಿದಾಗ ಅದೇ ಕಾರಿನಲ್ಲಿ ಪವನ್ ಜೊತೆಗೆ ರಾಜಣ್ಣ ಹಾಗೂ ವಿನೋದ ಮತ್ತು ಮಂದಾರ ಎಂಬ ಮಹಿಳೆಯ ರಿದ್ದರು. ಈ ವೇಳೆ ಪವನ್, ಮಹಿಳೆಯರನ್ನು ತೋರಿಸಿ "ಇವರು ಜಿಲ್ಲಾಧಿಕಾರಿಗಳಿದ್ದಂತೆ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳಾಗಿದ್ದಾರೆ" ಎಂದು ತಿಳಿಸಿದ್ದಾನೆ. ಒಂದು ಬೋರ್‌ವೆಲ್‌ಗೆ ಸರ್ಕಾರದಿಂದ 5ರಿಂದ 6 ಲಕ್ಷ ರೂ. ಅನುದಾನ ಬರುತ್ತದೆ. ಈಗ ಖರ್ಚಿಗೆ 1 ಲಕ್ಷ ರೂ. ಕೊಟ್ಟರೆ ಅನುದಾನ ಮಂಜೂರು ಮಾಡಿಸಿಕೊಡುತ್ತೇವೆ ಎಂದು ತಿಳಿಸಿದ್ದಲ್ಲದೇ, ನಿಮ್ಮ ಪರಿಚಯಸ್ಥರಿಗೂ ಈ ವಿಚಾರವನ್ನು ತಿಳಿಸಿ ಎಂದು ಹೇಳಿದ್ದಾರೆ.

ಇವರ ಮಾತನ್ನು ನಂಬಿದ ತಾವು ಚಿಕ್ಕನಾಯಕನಹಳ್ಳಿ, ತುರುವೇಕೆರೆ ಹಾಗೂ ಅರಸೀಕೆರೆ ತಾಲೂಕಿನ ಕೆಲ ಗ್ರಾಮಗಳಿಗೆ ಇವರನ್ನು ಕರೆದೊಯ್ದು ಹಲವರ ಪರಿಚಯ ಮಾಡಿಸಿ, ಅವರ ಜಮೀನುಗಳನ್ನು ತೋರಿಸಿ ದಾಖಲೆಗಳನ್ನು ಕೊಟ್ಟು ಹಣವನ್ನೂ ಕೂಡ ಕೊಟ್ಟಿದ್ದೇವೆ. ಈ ವ್ಯಕ್ತಿಗಳು ಅರಸೀಕೆರೆಯ ಸಮಾಜ ಕಲ್ಯಾಣ ಇಲಾಖೆ ಹತ್ತಿರ ನಮ್ಮನ್ನು ಕರೆತಂದು ಇದೇ ನಮ್ಮ ಕಚೇರಿ ಎಂದು ತೋರಿಸಿದ್ದರು. ಹಣ ಮತ್ತು ಜಮೀನಿನ ದಾಖಲೆಗಳನ್ನು ಪಡೆದ ನಂತರ ಈ ವ್ಯಕ್ತಿಗಳು ಸಂಪರ್ಕಕ್ಕೆ ಸಿಗದ ಕಾರಣ, ಅರಸೀಕೆರೆ ಸಮಾಜ ಕಲ್ಯಾಣ ಇಲಾಖೆ ಬಳಿ ತೆರಳಿದಾಗ ಅಲ್ಲಿ ಇವರಿಗೆ 10 ಲಕ್ಷ ರೂ. ನೀಡಿದ್ದ ಮಮತಾ, 10 ಲಕ್ಷ ರೂ. ನೀಡಿದ್ದ ರವಿಶಂಕರ್, 9.50 ಲಕ್ಷ ರೂ. ನೀಡಿದ್ದ ಸೋಮಶೇಖರ್ ಮತ್ತು 9.50 ಲಕ್ಷ ರೂ. ನೀಡಿದ್ದ ಹೆಗ್ಗೆರೆ ಯಮ ರಾಜಣ್ಣ ಎಂಬುವರು ಕೂಡ ನಮ್ಮಂತೆಯೇ ಇವರಿಗೆ ಹಣ ನೀಡಿ ಮೋಸ ಹೋಗಿದ್ದಾರೆ ಎಂದು ತಿಳಿಯಿತು. ಈ ಹಿನ್ನೆಲೆಯಲ್ಲಿ ಕಳೆದ ಏಪ್ರಿಲ್ 28ರಂದು ಗಟ್ಟದಹಳ್ಳಿ ಗ್ರಾಮದ ಪವನ್ ಮನೆಗೆ ತೆರಳಿದಾಗ ಆತ ಮನೆಯಲ್ಲಿ ಇರಲಿಲ್ಲ. ಆದರೆ, ಆತನ ತಂದೆ ಶ್ರೀನಿವಾಸ ಮತ್ತು ಪತ್ನಿ ಮಂದಾರ ಅವರುಗಳು ನಮ್ಮನ್ನು ಹಣ ಕೇಳಿದರೆ, ಜಾತಿ ನಿಂದನೆ ಕೇಸ್ ಹಾಕುತ್ತೇವೆ ಎಂದು ಬೆದರಿಸಿ ಕಳುಹಿಸಿದರು. ಅದೇ ರೀತಿ ರಾಜಣ್ಣನ ಮನೆಗೆ ತೆರಳಿದಾಗ ಆತ ಮತ್ತು ಆತನ ಪತ್ನಿ ವಿನೋದ ಅವರು ಕೂಡ ತಮ್ಮನ್ನು ಬೆದರಿಸಿ ಕಳುಹಿಸಿದ್ದಾರೆ ಎಂದು ವಿಶ್ವನಾಥ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಅವರು ದೂರಿನಲ್ಲಿ ತಿಳಿಸಿರುವಂತೆ ಈ ವಂಚಕರು 15 ಮಂದಿಯಿಂದ ತಲಾ 1 ಲಕ್ಷ ರೂ., ಒಬ್ಬರಿಂದ 2 ಲಕ್ಷ ರೂ., ಮತ್ತೊಬ್ಬರಿಂದ 2.80 ಲಕ್ಷ ರೂ. ಪಡೆದು ವಂಚಿಸಿದ್ದಾರೆ. ಈ ಸಂಬಂಧ ಅರಸೀಕೆರೆ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಕೃಷಿಯಲ್ಲಿ ಡ್ರೋಣ್ ಬಳಕೆ ಪ್ರಾತ್ಯಕ್ಷಿಕೆ

ಡ್ರೋಣ್ ಆಪರೇಟರ್ ಕೆಟಿ.ವಿಕಾಸ ಮಾತನಾಡಿ, 5 ಎಕರೆ ಭೂಮಿಗೆ ಕೇವಲ 20 ನಿಮಿಷದಲ್ಲಿ ಔಷಧಿ, ಕೀಟನಾಶಕ, ಕಳೆನಾಶಕವನ್ನು ಸಿಂಪಡಿಸಬಹುದು, ಅದರಿಂದ ರೈತರಿಗೆ ಹಣ, ಸಮಯ ಉಳಿಯುತ್ತದೆ ಎಂದರು. ಗ್ರಾಮೀಣ ಪ್ರದೇಶದ ಯುವಕರಿಗೆ ತರಬೇತಿ ನೀಡಿ ಡ್ರೋಣ್ ಬಳಕೆ ಮಾಡಲು ಸಜ್ಜುಗೊಳಿಸುತ್ತಿದ್ದು, ಇದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ವಿಎಯು ಮುಖ್ಯಸ್ಥ ವಿನಯ್ ತಿಳಿಸಿದರು.

ಅನಿಲ ರೂಪದ ರಾಸಾಯನಿಕ ಗೊಬ್ಬರ ಸಿಂಪಡಿಸಿ ಬಿತ್ತನೆ ಬೀಜ ಹಾಕಲು ಡ್ರೋಣ್ ಉಪಕರಣ ಸಹಕಾರಿಯಾಗಲಿದ್ದು, 4ರಿಂದ 4.5 ಲಕ್ಷ ರೂ. ಬೆಲೆಗೆ ಸಿಗುವ ಡ್ರೋಣ್‌ನಿಂದ ರೈತರಿಗೆ ಅನುಕೂಲವಾಗಲಿದೆ. ಜಮ್ಮು-ಕಾಶ್ಮೀರದಲ್ಲಿ ಡ್ರೋಣ್ ಉಪಕರಣ ಬಳಸಿ ರೈತರು ಹೆಚ್ಚು ಆದಾಯ ಗಳಿಸುತ್ತಿದ್ದಾರೆ. ಮಧ್ಯಮ ಮತ್ತು ಬೃಹತ್ ಹಿಡುವಳಿ ರೈತರಿಗೆ ಡ್ರೋಣ್ ವರದಾನವಾಗಿದ್ದು, ಕೃಷಿ ಕಾರ್ಮಿಕರ ಕೊರತೆಯಿಂದ ಬೇಸಾಯ ತ್ರಾಸದಾಯಕವಾಗಿರುವ ಇಂದಿನ ದಿನಗಳಲ್ಲಿ ರೈತರಿಗೆ ಈ ಉಪಕರಣ ಸಹಕಾರಿಯಾಗಿದೆ.

ತಿಂಗಳ ನಂತರ ಅಭಿವೃದ್ಧಿ ಭಾಗ್ಯ

ವಾರ್ಡ್‌ನ ಇತರೆ ರಸ್ತೆಗಳ ಗುಂಡಿ ಮುಚ್ಚಲು ತಲಾ 10 ಲಕ್ಷ ರೂ. ಅನುದಾನ ನೀಡಲಾಗಿದೆ. ಈಗಾಗಲೇ ಕೆಲವೆಡೆ ಗುಂಡಿ ಮುಚ್ಚುವ ಕಾರ್ಯ ನಡೆಯುತ್ತಿದೆ. ಅಗ್ರಹಾರ ಹಾಗೂ ಎನ್.ಆರ್.ಮೊಹಲ್ಲಾ ಭಾಗದಲ್ಲಿ ಯುಜಿಡಿ ಸಮಸ್ಯೆಯಿದ್ದು, 4 ಕೋಟಿ ರೂ. ವೆಚ್ಚದಲ್ಲಿ ಹೊಸ ಪೈಪ್‌ಲೈನ್ ಕಾಮಗಾರಿ ಕೈಗೊಳ್ಳಲಾಗುವುದು. ಕುವೆಂಪುನಗರ ಅಪೊಲೋ ಆಸ್ಪತ್ರೆ ಬಳಿಯಿಂದ ಕಾವೇರಿ ಶಾಲೆವರೆಗೆ 4 ಕೋಟಿ ರೂ. ಅಂದಾಜು ಮೊತ್ತದ ಯುಜಿಡಿ ಪೈಪ್‌ಲೈನ್ ಕಾಮಗಾರಿ ಆರಂಭವಾಗಿದೆ ಎಂದು ತಿಳಿಸಿದರು.

3 ವರ್ಷ ನಿರ್ವಹಣೆ ಕರಾರು: ರಸ್ತೆ ಕಾಮಗಾರಿ ನಡೆಸಿದ ಗುತ್ತಿಗೆದಾರರೇ 3 ವರ್ಷ ನಿರ್ವಹಣೆ ಮಾಡಬೇಕೆಂದು ಕರಾರು ಮಾಡಿಕೊಳ್ಳಲಾಗಿದೆ. ಈ ಅವಧಿಯಲ್ಲಿ ಗುಂಡಿ ಬಿದ್ದರೆ ಗುತ್ತಿಗೆದಾರರೇ ದುರಸ್ತಿಪಡಿಸಬೇಕಿದೆ. ಈಗಾಗಲೇ ಕಾಮಗಾರಿ ಮುಗಿಸಿರುವ ಗುತ್ತಿಗೆದಾರರಿಗೂ ಹಣ ಬಿಡುಗಡೆ ಮಾಡಿಲ್ಲ ಎಂದು ತಿಳಿಸಿದರು.

ಮಳೆ ನಿರ್ವಹಣೆಗೆ ಸಜ್ಜು: ಮೂರ್‍ನಾಲ್ಕು ತಿಂಗಳ ಹಿಂದೆ ಮಳೆಯಿಂದ ಸೃಷ್ಟಿಯಾದ ಅವಾಂತರ ಮರುಕಳಿಸಬಾರದು ಎಂದು ಸಾಕಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಉಪಮೇಯರ್, ಆಡಳಿತ ಪಕ್ಷದ ನಾಯಕರು, ಆಯುಕ್ತರು ಇನ್ನಿತರ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಳೆ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಗಳಿಗೆ ಸೂಚಿಸಲಾಗಿದೆ. ಅಭಯ ತಂಡ ಹಾಗೂ ಇಂಜಿನಿಯರ್‌ಗಳು 24/7 ಕರ್ತವ್ಯಕ್ಕೆ ಸಿದ್ಧರಾಗಿರುವಂತೆ ಆದೇಶಿಸಲಾಗಿದೆ. ಈ ಹಿಂದೆ ಹಾನಿಗೊಳಗಾಗಿದ್ದ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ. ಒಳಚರಂಡಿ ನಿರ್ವಹಣೆಗಾಗಿ ಪ್ರತಿ ವಾರ್ಡ್‌ಗೆ ಒಂದು ಲಕ್ಷ ರೂ. ಅನುದಾನ ನೀಡಲು ತೀರ್ಮಾನಿಸಲಾಗಿದೆ. ಚರಂಡಿಯಲ್ಲಿ ಹೂಳೆತ್ತಲು 2 ಮಿನಿ ಎಕ್ಸ್‌ವೇಟರ್‌ಗಳು ಒಂದು ವಾರದಿಂದ ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ ಅಗತ್ಯವಿರುವ 12 ಜೆಸಿಬಿ, 7 ಟಿಪ್ಪರ್, 65 ಆಟೋಗಳು ಕೆಲಸ ನಿರ್ವಹಿಸುತ್ತಿದ್ದು, ಇನ್ನೂ 65 ಆಟೋ, 12 ಕಾಂಪ್ಯಾಕ್ಟರ್‌ಗಳು, 5 ಜೆಸಿಬಿಗಳು ಮೇ.23ರಿಂದ ಹೊಸದಾಗಿ ಕೆಲಸ ಆರಂಭಿಸಲಿವೆ. ಗಾಳಿ-ಮಳೆಯಿಂದ ಹೆಚ್ಚು ಮರಗಳು ಬೀಳುತ್ತಿರುವುದರಿಂದ ಸಶಕ್ತವಲ್ಲದ ಮರಗಳನ್ನು ಗುರುತಿಸಿ, ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಸಾಮೂಹಿಕ ಯೋಗ ಪ್ರದರ್ಶನ

ಪ್ರತಾಪ್ ಸಿಂಹ ಆಹ್ವಾನ: ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನದಂದು 1,10,000ಕ್ಕೂ ಅಧಿಕ ಮಂದಿ ಪಾಲ್ಗೊಂಡ ಸಾಮೂಹಿಕ ಯೋಗ ಪ್ರದರ್ಶನದ ಮೂಲಕ ಗಿನ್ನಿಸ್ ವಿಶ್ವ ದಾಖಲೆ ಬರೆಯಲು ಮೈಸೂರು ಸಜ್ಜಾಗುತ್ತಿದ್ದು, ಈ ಬೃಹತ್ ಯೋಗ ಪ್ರದರ್ಶನಕ್ಕೆ ತಾವು ಆಗಮಿಸಬೇಕೆಂದು ಸಂಸದ ಪ್ರತಾಪ್ ಸಿಂಹ, ಪ್ರಧಾನಿ ನರೇಂದ್ರ ಮೋದಿಯವರನ್ನು ಖುದ್ದು ಆಹ್ವಾನಿಸಿದ್ದರು.

ತಿಂಗಳ ಹಿಂದೆ ಕೇಂದ್ರ ಸಚಿವ, ರಾಜ್ಯದವರೇ ಆದ ಪ್ರಹ್ಲಾದ್ ಜೋಷಿ ಅವರೊಂದಿಗೆ ಪ್ರತಾಪ್ ಸಿಂಹ, ತಮ್ಮ ಪತ್ನಿ ಅರ್ಪಿತಾ ಹಾಗೂ ಪುತ್ರಿ ವಿಪಂಚಿಯೊಂದಿಗೆ ದೆಹಲಿಯಲ್ಲಿ ಪ್ರಧಾನಿ ಅವರನ್ನು ಭೇಟಿಯಾಗಿ, ಆಹ್ವಾನಿಸಿದ್ದರು. 2017ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು 55,500ಕ್ಕೂ ಅಧಿಕ ಮಂದಿ ಸಾಮೂಹಿಕ ಯೋಗ ಪ್ರದರ್ಶಿಸಿದ್ದರು. ಅದು ಗಿನ್ನಿಸ್ ವಿಶ್ವ ದಾಖಲೆಯಾಗಿತ್ತು. ಅದರ ಶ್ರೇಯಸ್ಸನ್ನು ಪ್ರಧಾನಿಗಳಾದ ತಮಗೆ ಅರ್ಪಿಸಲಾಗಿತ್ತು. 2018ರಲ್ಲಿ ರಾಜಸ್ಥಾನದ ಕೋಟಾದಲ್ಲಿ ನಡೆದ ಯೋಗ ಪ್ರದರ್ಶನದಲ್ಲಿ 1,00,984 ಮಂದಿ ಭಾಗವಹಿಸುವ ಮೂಲಕ ಮೈಸೂರಿನ ಗಿನ್ನಿಸ್ ದಾಖಲೆ ಮುರಿಯಲಾಗಿತ್ತು. ಈ ಬಾರಿ ಮತ್ತೆ ದಾಖಲೆ ಬರೆಯಲು ಸಾಂಸ್ಕೃತಿಕ ನಗರಿ ಸಜ್ಜಾಗಿದ್ದು, ಈ ಒಂದು ಸುಸಂದರ್ಭದಲ್ಲಿ ತಾವೂ ಭಾಗಿಯಾಗುವಂತೆ ಪ್ರತಾಪ್ ಸಿಂಹ ಕೋರಿದ್ದರು.

ಕೇಂದ್ರದ ಯೋಜನೆ, ಅನುದಾನ ಸಮರ್ಪಕವಾಗಿ ಬಳಸಿಕೊಳ್ಳಲು

ಒಂದೇ ಇಲಾಖೆಯಡಿ ಕೃಷಿ, ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ, ಮೀನುಗಾರಿಕೆ ಅನಿವಾರ್ಯ

- ಮೈಸೂರಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇಂಗಿತ
- 10 ಸಾವಿರ ಕೃಷಿ ಉತ್ಪಾದಕರ ಸಂಘ ಸ್ಥಾಪನೆ
- ರೈತರ ಖಾತೆಗಳಿಗೆ ನೇರವಾಗಿ ಹಣ ಪಾವತಿ
- 2023ರ ವೇಳೆಗೆ ದೇಶದಲ್ಲಿ ರಸಗೊಬ್ಬರ ಉತ್ಪಾದನೆ
- ಕೊರೊನಾ ನಂತರ ಕೃಷಿ ಉತ್ಪಾದನೆ ಜಾಸ್ತಿ



ಮೈಸೂರು,ಮೇ 20(ಎಂಟಿವೈ)- ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಕೇಂದ್ರ ಸರ್ಕಾರದ ಯೋಜನೆ ಹಾಗೂ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತಾಗಲು ರಾಜ್ಯದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ ಹಾಗೂ ಮೀನುಗಾರಿಕೆ ಇಲಾಖೆಯನ್ನು ಒಂದೇ ಸೂರಿನಡಿ ತರುವ ಅಗತ್ಯವಿದೆ ಎಂದು ಕೇಂದ್ರ ಕೃಷಿ ರಾಜ್ಯಸಚಿವೆ ಶೋಭಾ ಕರಂದ್ಲಾಜೆ ಇಂಗಿತ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಕೃಷಿ, ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ, ಮೀನುಗಾರಿಕೆಗೆ ಪ್ರತ್ಯೇಕ ಸಚಿವಾಲಯವಿರುವುದೇ ಕಾರಣ ಎಂದರು.

ಈ ಐದು ಸಚಿವರನ್ನು ಒಂದುಗೂಡಿಸುವುದು ಕಷ್ಟದ ಕೆಲಸ. ಹೀಗಾಗಿ ಕೇಂದ್ರದ ಯೋಜನೆ ಸಮರ್ಪಕ ಅನುಷ್ಠಾನ ಹಾಗೂ ಅನುದಾನವನ್ನು ಪರಿಣಾಮಕಾರಿಯಾಗಿ ಬಳಸುವಂತಾಗಲು ಕೃಷಿ ಮತ್ತು ತೋಟಗಾರಿಕೆ ಇಲಾಖೆಯನ್ನು ಒಂದುಗೂಡಿಸಬೇಕು. ಹೈನುಗಾರಿಕೆ ಹಾಗೂ ಮೀನುಗಾರಿಕೆಯನ್ನು ಒಂದೇ ಸೂರಿನಡಿ ತರಬೇಕು. ಪ್ರತ್ಯೇಕ ಸಚಿವರು, ಪ್ರತ್ಯೇಕ ಕಾರ್ಯದರ್ಶಿಗಳು ಇದ್ದರೆ ಸಮನ್ವಯದ ಕೊರತೆಯಿಂದಾಗಿ ಅನುದಾನ ಬಳಕೆಯಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ್ದೇನೆ ಎಂದರು.

ಕೇಂದ್ರ ಸರ್ಕಾರ ರೂಪಿಸುವ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರಬೇಕು. ಕೃಷಿ ಉತ್ಪನ್ನಗಳನ್ನು ಆಮದು ಮಾಡಬೇಕಾದ ಕೃಷಿ ಇಲಾಖೆ ಅದರಿಂದ ದೂರವಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಐಟಿ-ಬಿಟಿ ಉತ್ಪನ್ನಗಳಿಗೆ ಒತ್ತು ನೀಡುವಂತೆ ಕೃಷಿ ಉತ್ಪನ್ನಗಳಿಗೆ ಗಮನಹರಿಸಿಲ್ಲ. ಹೀಗಾಗಿ, ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ಪ್ರತ್ಯೇಕ ವಿಂಗ್ ಮಾಡುವಂತೆ ಮನವರಿಕೆ ಮಾಡಿಕೊಡಲಾಗಿದೆ ಎಂದು ನುಡಿದರು.

ದೇಶದಲ್ಲಿ 10 ಸಾವಿರ ಕೃಷಿ ಉತ್ಪಾದಕರ ಸಂಘ: ಸಣ್ಣ-ಮಧ್ಯಮ ವರ್ಗದ ರೈತರು ದೇಶದಲ್ಲಿ ಹೆಚ್ಚಾಗಿರುವ ಕಾರಣ ಕೃಷಿ ಮತ್ತು ಕೃಷಿ ಅವಲಂಬಿತರನ್ನು ಪ್ರೋತ್ಸಾಹಿಸಲು ದೇಶದುದ್ದಗಲಕ್ಕೂ ಕೃಷಿ ಉತ್ಪಾದಕರ ಸಂಘ ರಚಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಮೊದಲ ಹಂತದಲ್ಲಿ 10 ಸಾವಿರ ಕೃಷಿ ಉತ್ಪಾದಕರ ಸಂಘಗಳನ್ನು ರಚಿಸಲಾಗುತ್ತದೆ. ಇದರಿಂದ ಸಣ್ಣ ಹಾಗೂ ಮಧ್ಯಮ ವರ್ಗದ ರೈತರನ್ನು ಒಂದುಗೂಡಿಸಿ ಸಂಪರ್ಕ ಬೆಳೆಸುವುದಕ್ಕೂ ಹಾಗೂ ಸಣ್ಣ ರೈತರು ಬೆಳೆಯುವ ಬೆಳೆಗಳಿಗೂ ಸೂಕ್ತ ಮಾರುಕಟ್ಟೆ ದೊರಕಲು ಸಾಧ್ಯವಾಗಲಿದೆ ಎಂದರು.


ಖಾದ್ಯತೈಲದಲ್ಲಿ ಸ್ವಾವಲಂಬನೆ ಅಗತ್ಯ: ಅಡುಗೆ ಎಣ್ಣೆ ಪದಾರ್ಥಗಳನ್ನು ಕಡಿಮೆ ಮಾಡಲು ಖಾದ್ಯತೈಲದಲ್ಲಿ ಸ್ವಾವಲಂಬನೆ ಆಗಬೇಕಿದೆ. ಇಂಡೋನೇಷಿಯಾ, ಮಲೇಶಿಯಾ ದೇಶಗಳಿಂದ ಖಾದ್ಯ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ನಮ್ಮಲ್ಲಿ ಸೂರ್ಯಕಾಂತಿ, ನೆಲಗಡಲೆ, ಸೋಯಾಬೀನ್ ಬೆಳೆಯುವ ಪ್ರದೇಶಗಳು ಕಡಿಮೆಯಾಗಿರುವ ಕಾರಣ ಮುಂದಿನ ದಿನಗಳಲ್ಲಿ ಹೆಚ್ಚು ಮಾಡಬೇಕು. ಸೂರ್ಯಕಾಂತಿ, ಸೋಯಾಬೀನ್ ಬೆಳೆಯುವ ರೈತರಿಗೆ ಸಬ್ಸಿಡಿ, ಬೆಂಬಲ ಬೆಲೆ ಮೊದಲಾದ ಅನುಕೂಲ ಕಲ್ಪಿಸಿದರೆ ಉತ್ಪಾದನೆ ಹೆಚ್ಚಾಗಲಿದೆ. ನಾವು ಬೆಳೆಸುತ್ತಿರುವ ಅಡುಗೆ ಎಣ್ಣೆ ಬೇರೆ ಬೇರೆ ಬ್ರಾಂಡ್‌ಗಳಲ್ಲಿ ಮಾರುಕಟ್ಟೆಗೆ ಬರುತ್ತಿದೆಯೇ ಹೊರತು ನಾವು ಉತ್ಪಾದನೆ ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ, ಆಯಿಲ್ ಸೀಡ್ಸ್ ಬೆಳೆಯಲು ಉತ್ತೇಜನ ಕೊಡುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಮೈಸೂರು ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ವಿ.ಸೋಮಸುಂದರ್, ವಾಣೀಶ್ ಕುಮಾರ್, ನಗರಪಾಲಿಕೆ ಸದಸ್ಯ ಎಂ.ಸತೀಶ್, ಮಾಧ್ಯಮ ವಕ್ತಾರ ಎಂ.ವಿ.ಮೋಹನ್, ಮುಖಂಡ ಯು.ವಿ.ಶೇಖರ್ ಇನ್ನಿತರರು ಇದ್ದರು.

'ಜೆಸಿಯಾನ'ದಲ್ಲಿ ಶಿವರಾಜ್ ಕುಮಾರ್ ಭರ್ಜರಿ ಸ್ಟೆಪ್

ಅರ್ಜುನ್ ಜನ್ಯ ನೇತೃತ್ವದಲ್ಲಿ ರಂಜಿಸಿದ ಸಂಗೀತ ಸಂಜೆ





ಮೈಸೂರು,ಮೇ 20(ಜಿಎ)- ಟುವ್ವಿ ಟುವ್ವಿ ಎಂದು ಹಾಡುತ್ತ ವಿದ್ಯಾರ್ಥಿಗಳೊಂದಿಗೆ 'ಜೆಸಿಯಾನ'ದಲ್ಲಿ ನಟ ಡಾ. ಶಿವರಾಜ್ ಕುಮಾರ್ ಡ್ಯಾನ್ಸ್ ಮಾಡುವ ಮೂಲಕ ಯುವ ಸಮೂಹವನ್ನು ರಂಜಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ಕಾಲೇಜಿನ ಆವರಣದಲ್ಲಿ ಏರ್ಪಡಿಸಿರುವ 'ಜೆಸಿಯಾನ'ವನ್ನು ಶುಕ್ರವಾರ ಸಂಜೆ ಅವರು ಉದ್ಘಾಟಿಸಿದ ವೇಳೆ ಡ್ಯಾನ್ಸ್ ಮಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಅವರು, ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ಏಕೆಂದರೆ ನನ್ನ ಕಾಲೇಜಿನ ದಿನಗಳು ನೆನಪಾಗುತ್ತಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಮತ್ತಷ್ಟು ಹುರುಪು ಹೆಚ್ಚಿಸುತ್ತದೆ ಎಂದರು.

ಕಳೆದ ಆರು ತಿಂಗಳಿನಿಂದ ಮೈಸೂರಿನಲ್ಲಿ ಓಡಾಟ ಹೆಚ್ಚಾಗಿದ್ದು, ಒಡನಾಟವು ಹೆಚ್ಚಾಗಿದೆ. ನಮ್ಮ ಕುಟುಂಬ ಮತ್ತು ಸಂದೇಶ್ ನಾಗರಾಜ್ ಅವರ ಕುಟುಂಬದ ನಡುವೆ ಅವಿನಾಭಾವ ಸಂಬಂಧವಿದ್ದು, ಅವರ ನಿರ್ಮಾಣದಲ್ಲಿ ಈಗಾಗಲೇ ಎರಡು ಚಿತ್ರಗಳಲ್ಲಿ ನಟಿಸಿದ್ದೇನೆ. ಮುಂದೆ ಗೋಸ್ಟ್ ಎಂಬ ಚಿತ್ರವನ್ನು ಮಾಡುತ್ತಿದ್ದೇನೆ. ಕಾಲೇಜಿನ ವಿದ್ಯಾರ್ಥಿ ಕೌನ್ಸಿಲ್‌ನ ಉಪಾಧ್ಯಕ್ಷರಾದ ವಿಸ್ಮಯ ಸಂದೇಶ್ ಅವರು ಜೆಸಿಯಾನ ಕಾರ್ಯಕ್ರಮಕ್ಕೆ ಉದ್ಘಾಟನೆಗೆ ಆಹ್ವಾನಿಸಿದ ಹಿನ್ನೆಲೆಯಲ್ಲಿ ಇಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಕಾಲೇಜಿನ ವಾತಾವರಣದಿಂದ ಹೆಚ್ಚು ಸಂತಸವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೆಲವು ಚಿತ್ರಗೀತೆಗಳನ್ನು ಹಾಡುವುದರ ಜೊತೆಗೆ ಡ್ಯಾನ್ಸ್ ಮಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು. ನಂತರ ಕನ್ನಡ ಚಿತ್ರರಂಗದ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಟ್ಟರು. ನಾಳೆ(ಮೇ21) ಕನ್ನಡದ ಚಿತ್ರದ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರು ಪಾಲ್ಗೊಳ್ಳಲಿದ್ದಾರೆ ಹಾಗೂ ಗಾಯಕ ಅರ್ಜುನ್ ಕನುಂಗೊ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟ್‌ಸೂರ್ ಮಠ್, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಚಿತ್ರ ನಿರ್ಮಾಪಕ ಸಂದೇಶ್, ಪಾಲಿಕೆ ಸದಸ್ಯ ಸಾತ್ವಿಕ್, ಕಾಲೇಜಿನ ಪ್ರಾಧ್ಯಾಪಕರ ವೃಂದ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 19-ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಶ್ರೀ ಮಹಾವೀರ್ ಜೈನ್ ವಿದ್ಯಾಲಯದ ವಿದ್ಯಾರ್ಥಿ ಎಂ.ಮನೋಲ್ಲಾಸ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 564 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಮಲ್ಲೇಶ್ ಮತ್ತು ಅಂಜನಾ ದಂಪತಿ ಪುತ್ರ.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಬನ್ನೂರಿನ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ದಿಶಾ ಬಿ.ಎಂ. ಅವರನ್ನು ಮೈಸೂರಿನ ಆದಿಚುಂಚನಗಿರಿ ಶಾಖಾಮಠದ ಸೋಮೇಶ್ವರನಾಥ ಮಹಾಸ್ವಾಮೀಜಿರವರು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘದ ಸಮ್ಮುಖದಲ್ಲಿ ಸನ್ಮಾನಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷ ರವಿ ರಾಜಕೀಯ, ಬನ್ನೂರು ಮಹೇಶ್, ಪ್ರಧಾನ ಕಾರ್ಯದರ್ಶಿ ಚೇತನ್, ನಿರ್ದೇಶಕ ಒಂಟಿಕೊಪ್ಪಲ್ ಗುರುರಾಜ್, ಮೈಸೂರಿನ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿಯಾದ ನರಸೇಗೌಡ, ಪ್ರಕಾಶ್, ನಾರಾಯಣ್, ಸಮಾಜಸೇವಕ ಕಾಳಪ್ಪ, ಬಿಜಿಎಸ್ ಶಾಲೆಯ ವ್ಯವಸ್ಥಾಪಕ ಆನಂದ್, ಮುಖ್ಯೋಪಾಧ್ಯಾಯರಾದ ಪಲ್ಲವಿ, ಅಶ್ವಥ್, ವಿದ್ಯಾರ್ಥಿಯ ಪೋಷಕರು, ಶಿಕ್ಷಕ ವೃಂದದವರು ಹಾಗೂ ಇತರ ವಿದ್ಯಾರ್ಥಿಗಳು ಹಾಜರಿದ್ದರು.

ಡಿ. ಸುಬ್ಬಲಕ್ಷ್ಮಮ್ಮ ನಿಧನ



ಮೈಸೂರು, ಮೇ 20-ಹುಣಸೂರು ತಾಲೂಕಿನ ಬಿಳಿಕೆರೆ ನಿವಾಸಿ ಚಂದ್ರಶೇಖರ್ ಅವರ ಪತ್ನಿ ಡಿ. ಸುಬ್ಬಲಕ್ಷ್ಮಮ್ಮ (75) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅವರ ಹುಟ್ಟೂರಾದ ಗೆರಸನಹಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾತಗಳ್ಳಿಯಲ್ಲಿ 4 ಸಿಎ ನಿವೇಶನ, 2 ಉದ್ಯಾನವನ ಮುಡಾ ವಶಕ್ಕೆ



ಮೈಸೂರು, ಮೇ 20(ಆರ್‌ಕೆ)- ಮೈಸೂರಿನ ಸಾತಗಳ್ಳಿ ಬಡಾವಣೆಯಲ್ಲಿ 4 ಸಿಎ ನಿವೇಶನ ಮತ್ತು 2 ಉದ್ಯಾನವನಗಳನ್ನು ಮುಡಾ ಅಧಿಕಾರಿಗಳು ಇಂದು ವಶಕ್ಕೆ ಪಡೆದು, ನಾಮಫಲಕ ಅಳವಡಿಸಿದ್ದಾರೆ.

ಸಾತಗಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ವಿದ್ಯಾಶಂಕರ ಗೃಹ ನಿರ್ಮಾಣ ಸಹಕಾರ ಸಂಘದವರು ಮುಡಾದಿಂದ ಅನುಮೋದನೆ ಪಡೆದು 52.37 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ರಚಿಸಿದ್ದರು. ಅದರಲ್ಲಿ 6 ಸಿಎ ನಿವೇಶನ ಹಾಗೂ 4 ಉದ್ಯಾನವನಗಳನ್ನು 2003ರ ಮಾರ್ಚ್ 20ರಂದು ಮುಡಾಗೆ ಒಪ್ಪಿಸಿದ್ದರು.

ಆ ಪೈಕಿ 2 ಸಿಎ ನಿವೇಶನ, 4 ಸಿಎ ನಿವೇಶನ ಖಾಲಿ ಇದ್ದು, ಭೂ ಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ಹಂಚಿಕೆ ಮಾಡಿರುವುದಿಲ್ಲ. ಉಳಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇಲ್ಲದಿರುವ 4 ಸಿಎ ನಿವೇಶನ ಹಾಗೂ 2 ಉದ್ಯಾನವನಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯದ ಇಂಡುವಾಳು ಬಳಿ ಸೇವಾ ರಸ್ತೆಯ ಸೇತುವೆ ಏರಿ ಕೊರೆತ

ರಸ್ತೆ ಕಾಮಗಾರಿ ಮುಂದುವರಿಕೆಗೆ ಅಡ್ಡಿಯಿಲ್ಲ: ಸಿಂಹ

ಮೈಸೂರು, ಮೇ 20(ಪಿಎಂ)- ಬೆಂಗಳೂರು-ಮೈಸೂರು ದಶಪಥ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ನಿರಂತರ ಮಳೆ ಪರಿಣಾಮ ಮಂಡ್ಯದ ಇಂಡುವಾಳು ಬಳಿ ಸೇವಾ ರಸ್ತೆಯ ಸೇತುವೆಯ ಸಂಪರ್ಕಿತ ಏರಿಯ ಕೊರೆತ ಉಂಟಾಗಿದೆ. ಈ ಸ್ಥಳದಲ್ಲಿ ಇನ್ನೂ 6 ಪಥದ ರಸ್ತೆ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ. ಸೇವಾ ರಸ್ತೆಗೆ ಸೇತುವೆ ನಿರ್ಮಾಣ ಮಾಡಿರುವ ಏರಿ ಮಾತ್ರ ನಿರಂತರ ಮಳೆಗೆ ಕುಸಿತವಾಗಿದೆ. ಈ ಸ್ಥಳದಲ್ಲಿ ಕಾಮಗಾರಿ ಪೂರ್ಣಗೊಂಡಿದ್ದರೆ ನೀರಿನ ಹರಿವು ಸರಾಗವಾಗಿ ಸಾಗುವ ಮೂಲಕ ಇಂತಹ ಸಮಸ್ಯೆಯೇ ಉಂಟಾಗುತ್ತಿರಲಿಲ್ಲ. ನಿರ್ಮಾಣ ಹಂತದಲ್ಲಿ ಇವೆಲ್ಲಾ ಸಹಜ ಮತ್ತು ಬರುವ ದಸರಾ ವೇಳೆಗೆ ರಸ್ತೆ ಉದ್ಘಾಟನೆಯಾದ ಮೇಲೂ ಮುಂದಿನ 15 ವರ್ಷಗಳವರೆಗೂ ರಸ್ತೆಯ ನಿರ್ವಹಣೆ ಗುತ್ತಿಗೆದಾರನದ್ದೇ ಆಗಿರುತ್ತದೆ. ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು ಎಂದು ಸಂಸದರು ಮನವಿ ಮಾಡಿದ್ದಾರೆ.

ಸಾಮಾನ್ಯ ಕುಟುಂಬದಲ್ಲಿ ಅಸಾಮಾನ್ಯ ಸಾಧನೆಗೈದ ವಿದ್ಯಾರ್ಥಿಗಳು

- ಹೋಟೆಲ್ ಕೆಲಸಗಾರರಿಬ್ಬರ ಮಕ್ಕಳು ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ
- ಪೌರ ಕಾರ್ಮಿಕರ ಮಗಳ ಸಾಧನೆ
- ಗ್ರಾಪಂ ಮಾಜಿ ಅಧ್ಯಕ್ಷರ ಪುತ್ರಿಗೆ ಉನ್ನತ ಶ್ರೇಣಿ

ಮೈಸೂರು, ಮೇ 20(ಎಂಟಿವೈ)- ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ವ್ಯಕ್ತಿಗಳ ಮಕ್ಕಳು ಹಾಗೂ ಪೌರ ಕಾರ್ಮಿಕರೊಬ್ಬರ ಮಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.



ನಂಜನಗೂಡಿನ ಕ್ಯಾಂಟೀನ್‌ವೊಂದರಲ್ಲಿ ಕೆಲಸ ಮಾಡುತ್ತಿರುವ ಲೋಕೇಶ್, ಪ್ರತಿಭಾ(ಗೃಹಿಣಿ) ದಂಪತಿ ಪುತ್ರಿ ಎಲ್.ಅಕ್ಷತಾ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 623 ಅಂಕ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ. ಎಲ್.ಅಕ್ಷತಾ ನಂಜನಗೂಡು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿರುವುದು ವಿಶೇಷ. ನಂಜನಗೂಡು ಬಿಇಓ ಸಿ.ಎನ್.ರಾಜು, ನೋಡಲ್ ಅಧಿಕಾರಿ ರಮೇಶ್ ಅವರು ಅಕ್ಷತಾ ಅವರ ಮನೆಗೆ ತೆರಳಿ ಅಭಿನಂದಿಸಿದರು. ಅಕ್ಷತಾ ನಂಜನಗೂಡು ತಾಲೂಕಿಗೆ ಸರ್ಕಾರಿ ಶಾಲೆಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಲ್ಲಿ ಮೊದಲಿಗರು ಎನಿಸಿದ್ದಾರೆ.

ಸಾಗರ್ ಶೆಟ್ಟಿಗೆ 622 ಅಂಕ



ಮೈಸೂರಿನ ಸದ್ವಿದ್ಯಾ ಶಾಲೆಯ ವಿದ್ಯಾರ್ಥಿ ಸಾಗರ್ ಶೆಟ್ಟಿ 622 ಅಂಕ ಪಡೆದ ತೇರ್ಗಡೆಯಾಗಿದ್ದಾರೆ. ಸಾಗರ್ ಶೆಟ್ಟಿ ಅವರ ತಂದೆ ಸಂತೋಷ್ ಶೆಟ್ಟಿ ಮೂಲತಃ ಕುಂದಾಪುರದವರಾಗಿದ್ದು, ಹೋಟೆಲ್‌ವೊಂದರಲ್ಲಿ ಕೆಲಸ ಮಾಡುವ ಮೂಲಕ ಪುತ್ರನಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ.

ಹೇಮಾರ್ಷಿತಗೆ 615 ಅಂಕ



ಮೈಸೂರಿನ ಶ್ರೀರಾಮಪುರದ ನಿರ್ಮಲ ಪ್ರೌಢ ಶಾಲೆಯ ವಿದ್ಯಾರ್ಥಿನಿ, ಧನಗಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ದೊಡ್ಡ ಹುಂಡಿ ಸೋಮಣ್ಣ ಹಾಗೂ ದಂಪತಿ ಪುತ್ರಿಯಾಗಿರುವ ಡಿ.ಎಸ್.ಹೇಮಾರ್ಶಿತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪೊಲೀಸ್ ಪೇದೆ ಮಗಳ ಸಾಧನೆ



ಮೈಸೂರು ಜಿಲ್ಲಾ ಮಹಿಳಾ ಠಾಣೆಯಲ್ಲಿ ಹಿರಿಯ ಪೇದೆಯಾಗಿರುವ ಹರೀಶ್ ಕುಮಾರ್, ಉಷಾ ದಂಪತಿ ಪುತ್ರಿ, ಟೆರೇಶಿಯನ್ ಪ್ರೌಢಶಾಲೆಯ ವಿದ್ಯಾರ್ಥಿನಿ ಹೆಚ್.ವೇದಿಕಾ 625ಕ್ಕೆ 618 ಶೇ.98.88ರಷ್ಟು ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪೌರ ಕಾರ್ಮಿಕರ ಮಗಳ ಸಾಧನೆ



ಪೌರ ಕಾರ್ಮಿಕರಾದ ಕೆ.ನಾಗರಾಜ ಅವರ ಪುತ್ರಿ ಕೆ.ಎಂ.ಸಿಂಚನಾ 593 ಅಂಕಗಳಿಸುವ ಮೂಲಕ ಶಾಲೆಗೆ ಟಾಪರ್ ಆಗಿದ್ದಾರೆ. ಭಾರತ್ ನಗರ ಸಮೀಪದ ಡಾ.ಬಿ.ಆರ್. ಅಂಬೇಡ್ಕರ್ ನಗರದ ನಿವಾಸಿಯಾದ ಕೆ.ಎಂ.ಸಿಂಚನಾ ರಾಜೀವ್ ನಗರ ಅಲ್ಕರಿಂ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಈ ಕುರಿತು ಸಿಂಚನಾ ಮಾತನಾಡಿ, ಸಮುದಾಯದಲ್ಲಿ ತಂದೆ ತಾಯಿಯ ಕೀರ್ತಿ ಹೆಚ್ಚಿಸಬೇಕೆಂಬ ಆಸೆಯಿತ್ತು. ಅದನ್ನು ನೇರವೇರಿಸಿದ್ದೇನೆ. ಮುಂದೆ ವೈದ್ಯೆ ಆಗಬೇಕೆಂಬ ಕನಸಿದೆ. ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರ ಸಹಕಾರವೇ ನನ್ನ ಈ ಸಾಧನೆಗೆ ಕಾರಣ ಎಂದು ತಿಳಿಸಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಸಿರುವ ಜಾಕಿ ಕ್ವಾಟ್ರಸ್ ಆದರ್ಶ ಶಾಲೆಯ ವಿದ್ಯಾರ್ಥಿನಿ ಎಂ.ಜಿ.ಏಕ್ತಾಳನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿ, ಶುಭ ಕೋರಿದರು. ಈ ವೇಳೆ ಆಕೆಯ ಪೋಷಕರಾದ ಗಣಪತಿ, ಗಂಗಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮ ಶೇಖರ್, ಮಾಜಿ ಮಹಾಪೌರ ಪುಷ್ಪಲತಾ ಜಗನ್ನಾಥ್, ಮಾಜಿ ಪಾಲಿಕೆ ಸದಸ್ಯರಾದ ಎಂ. ಸುನೀಲ್, ಪ್ರದೀಪ್ ಕುಮಾರ್, ಕುರುಬಾರಳ್ಳಿ ರವಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಟೀಚರ್ಸ್ ಬೇಕಾಗಿದ್ದಾರೆ
ಶಾಶ್ವತ್ ವಿದ್ಯಾಮಂದಿರ (ಆಂಗ್ಲ ಮಾಧ್ಯಮ) ಸಿದ್ದರಾಮನಹುಂಡಿ ಶಿಕ್ಷಕಿಯರು ಬೇಕಾಗಿದ್ದಾರೆ. ಇಂಗ್ಲೀಷ್, ಗಣಿತ, ನರ್ಸರಿ ಹಾಗೂ ವಾಹನ ಚಾಲಕರು
9740032559
9986791152

ಪೆಟ್ರೋಲ್ ಬಂಕ್ ಖರೀದಿಗೆ ಬೇಕಾಗಿದೆ
ಮೈಸೂರು ನಗರದ ಸರಹದ್ದಿನಲ್ಲಿ ಪೆಟ್ರೋಲ್ ಬಂಕ್ ಖರೀದಿಗೆ ಬೇಕಾಗಿರುತ್ತದೆ. ಇಚ್ಛೆಯುಳ್ಳವರು ಸಂಪರ್ಕಿಸಬಹುದು.
9845025590
9448067802

FOR SALE
17'X30' E/F site at Srirampura 10th Cross
30'x40' - E/F Site No. 349 at Dwarakanagar, Near Ring Road Maramma Temple
20'x30' - 2 Floors-S/F House # 399, Srirampura 12th Cross
99004-93490
96638-38530

ಜಮೀನು ಮಾರಾಟಕ್ಕಿದೆ
17.04 ಗುಂಟೆ ಜಮೀನು ಮಾರಾಟಕ್ಕಿದೆ. ahad ಸಿಟಿ ಪಕ್ಕ, ಫೋರಮ್ ಮಾಲ್ ನಿಂದ 8.3 km
7892565278

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50%-50% ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

HOUSE FOR SALE
30x50 MUDA
New 4 BHK Duplex with Home Theatre, N/F Door with Pillar Construction at Somnathanagar, Dattagalli - Rs.1.95 Cr. (Brokers Excuse)
Contact Owner: 9035412545

SITES FOR SALE
30x40 - 26.40 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limits) 1.5 kms from J P Nagar Ring Road.
8660105902

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ.ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

ಬೇಕಾಗಿದ್ದಾರೆ
ದೊಡ್ಡ ಬಾಗಿಲು ಗ್ರಾಮ ಟಿ.ನರಸೀಪುರ ದಿಂದ 8 ಕಿ.ಮೀ ದೂರದಲ್ಲಿ ತೋಟ ನೋಡಿಕೊಳ್ಳಲು ಬೇಕಿದ್ದಾರೆ. ಒಂದು ಕುಟುಂಬಕ್ಕೆ ತಿಂಗಳಿಗೆ 10,000/– ರೂಪಾಯಿ ಕೊಡಲಾಗುವುದು. ಉಚಿತ ವಸತಿ ವ್ಯವಸ್ಥೆಯಿದೆ
7348808417

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

MUDA APPROVED SITES FOR SALE
30x40, West facing 2 Sites with fencing done at 18 Lakhs Each, near Lalbahadur Shastri Road. 1.5 Km from Ring Road
Call: 7795609173

ಹೊಸ ಮನೆ ಭೋಗ್ಯಕ್ಕಿದೆ
20x30 ಕೆಳಗಡೆ ಮನೆ NF 5 ಲಕ್ಷ ಭೋಗ್ಯಕ್ಕಿದೆ, ರಾಮಕೃಷ್ಣನಗರ, ಹೆಚ್ ಬ್ಲಾಕ್, ರೂಬಿ ಬೇಕರಿ, ಡೌನ್‌ನಲ್ಲಿ
ಸ್ವಾಮಿ: 9845570573
ಸತೀಶ್: 9113612442

ಬೇಕಾಗಿದ್ದಾರೆ
1) ಅಕೌಂಟೆಂಟ್ಸ್ 2) ಟ್ಯಾಲೀ ಟ್ರೈನರ್ಸ್
3) ಕಂಪ್ಯೂಟರ್ ಹಾರ್ಡ್‌ವೇರ್ ಟ್ರೈನರ್ಸ್
4) ಸ್ಪೋಕನ್ ಇಂಗ್ಲೀಷ್ ಟ್ರೈನರ್ಸ್
5) ಪ್ರೊಫೆಷನಲ್ ಮತ್ತು ಇಂಟರ್‌ವ್ಯೂ ಸ್ಕಿಲ್ಸ್ ಟ್ರೈನರ್ಸ್
6) ಲ್ಯಾಪ್ ಟಾಪ್ ರಿಪೇರ್ ಟ್ರೈನರ್ಸ್
ಫ್ರೆಶರ್‌ಗಳಿಗೆ ಮಾತ್ರ / ಉಚಿತ ತರಬೇತಿಯನ್ನು ನೀಡಲಾಗಿದೆ
9663579654 / 9902955544

HOUSE FOR SALE
MUDA 30x40
New 4 BHK Duplex House with 22 Squares Furnished, E/F Door at SBM Layout, Bogadi - Rs.1.40 Cr Pillar construction,100 mtrs from Gaddige Road
Direct Owner: 6361295132

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಹೊಸ ಮನೆ ಮಾರಾಟಕ್ಕಿದೆ
20x30 ಕೆಳಗೆ ಮತ್ತು ಮೇಲೆ ಹೊಸ ಮನೆ ಮಾರಾಟಕ್ಕಿದೆ. 2BHK ಲಾಲ್ ಬಹದ್ದೂರ್ ಶಾಸ್ತ್ರಿ ನಗರ
9844212414

ASFT Fashion Design Courses
3 MONTHS SHORT TERM COURSES
* Basic Hand Embroidery * Basic Stitches & Motifs Kurtha * Saree Designing for hand * Embroidery Motif * Basic Sewing * Basic Necklines * 2 Frock Zabla Petticoat * Blouse Lining without lining.
Srirampura Branch - Alpha Intl. School. Proposed Branch: Gokulam & Udayagiri
Mob: 782 993 7469

WANTED
Wanted for RESTO CAFÉ at Hunsur near Mysore
» MANAGER - With minimum 10 years Experience in Restaurant
» CASHIER
» COOK
» DOSA MASTER
» WAITER
Call 9446003500

HOME LOANS
CORPORATION, MUDA, KHB GRAMATHANA PROPERTY
Site Purchase, Site Construction, House Purchase, Site Mortgage, House Mortgage
ROI 6.65%
Contact: 9108416410

ಶಾದಿಗುರೂಜಿ.ಕಾಂ
ಎಲ್ಲಾ ಜಾತಿಯ ವಧುಗಳು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಅದೃಷ್ಟದ ರುದ್ರಾಕ್ಷಿಯನ್ನು ಉಚಿತವಾಗಿ ಕೊಡಲಾಗುತ್ತದೆ.
ಡಾ.ಗುರೂಜಿ ಮೈಸೂರು
6361740552
shaadiguruji.com

HOUSE FOR SALE
MUDA Allotted 40x55
N/F, 4 BHK Duplex Furnished, 32 squares, 15 years Old House at T K Layout, 4th Stage, Prime Location, Rs. 1.95 cr. Owner will give 6 months Time for registration. Brokers Excuse
8660105902

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರು ಸಿಟಿ ಸುತ್ತಮುತ್ತ ಕಾರ್ಯನಿರ್ವಹಿಸಲು ಊಟ, ತಿಂಡಿ, ESI, PF ಸೌಲಭ್ಯವಿದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364560079
9900763507

ತಿರುಮಲ ಸೆಕ್ಯೂರಿಟಿ ಏಜೆನ್ಸಿ
ಮೈಸೂರು. ಮಾಲೀಕರು ಚಂದ್ರೇಗೌಡ (Rtd., ಎಎಸ್‌ಐ ಅಧಿಕಾರಿ)
ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್ ಫೀಲ್ಡ್ ಆಫೀಸರ್. ಸಂಪರ್ಕಿಸಿ:
7619622404 / 6361439167

ಸುವರ್ಣ ಯಾತ್ರ
01/06/22 ಕಾಶಿ ಪ್ರವಾಸ 7 ದಿನಗಳು, ಅಯೋಧ್ಯ, ಪ್ರಯಾಗ್‌ರಾಜ್, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ. 11/06/22 ಚಾರ್ ದಾಮ್ ಪ್ರವಾಸ 13 ದಿನಗಳು ಕೇದಾರ್‌ನಾಥ, ಬದ್ರಿನಾಥ, ಯಮುನೋತ್ರಿ, ಗಂಗೋತ್ರಿ ಹಾಗೂ ಇತರೆ 9 ದಿನಗಳ ಮುಕ್ತಿನಾಥ ಪ್ರವಾಸ 10/06/22 ಮುಕ್ತಿನಾಥ, ಪಶುಪತಿನಾಥ, ಪೋಕ್ರ, ಕಠ್ಮಂಡು, ಹಾಗು ಇತರೆ ಸ್ಥಳಗಳು. 5 ದಿನಗಳ ತಮಿಳುನಾಡು ಪ್ರವಾಸ 28/06/22, 9 ನವಗ್ರಹ, ತಂಜಾವೂರು, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಪಳನಿ ಹಾಗೂ ಇತರೆ ಸ್ಥಳಗಳು
8970949434 / 9019462508

WANTED
Female Sales Executive - 5 Nos.
Graduates with computer knowledge, may walk-in interview with handwritten bio-data to:
Sharada Jewellers
58, D.D. Urs Road, Opp. Anjaneyaswamy Temple, Mysore.

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ತಕ್ಷಣ ಬೇಕಾಗಿದ್ದಾರೆ
Housekeeping, Security, Office boy, Production Line, Data Entry, Cashier, Billing, Sales Executives, Promters ಮುಂತಾದ ಕೆಲಸಗಳಿಗೆ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ಸರಸ್ವತಿಪುರಂ, ಒಂಟಿಕೊಪ್ಪಲ್, ಜೆ.ಪಿ.ನಗರ, ಕುವೆಂಪುನಗರ, ಎನ್.ಆರ್.ಮೊಹಲ್ಲಾ ಮುಂತಾದ ವಿಠಯಾಗಳಿಗೆ ಬೇಕಾಗಿದ್ದಾರೆ. (Any Qualification) ಸಂಬಳ: 14,000–35,000 (ESI+PF+OT) ಸೇರಿ
9353753194 / 9980850141

SHOP FOR RENT
15x25 Vivekananda Circle
9342111096

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ತರಬೇತಿ ಮೈಸೂರಿನಲ್ಲಿ ಟೈಲರಿಂಗ್ ಮತ್ತು ಬ್ಯೂಟಿಷಿಯನ್ ಯಾವುದೇ ರೀತಿಯ ಶುಲ್ಕಗಳೂ ಇರುವುದಿಲ್ಲ. ಸೀಮಿತ ಸೀಟ್‌ಗಳು, ಮೊದಲು ಬಂದವರಿಗೆ ಆದ್ಯತೆ
9844736136 / 9844264134

FLAT - 2 BHK @ YADAVAGIRI for SALE - 54 Lakhs
Near Akashavani Circle
CONTACT 9886697052

ಟಿ.ವಿ. ಚಾನೆಲ್‌ಗೆ ಬೇಕಾಗಿದ್ದಾರೆ.
ಶೀಘ್ರದಲ್ಲೇ ಶುರುವಾಗಲಿರುವ ಸುದ್ದಿವಾಹಿನಿಗೆ ವಾರ್ಡ್, ತಾಲ್ಲೂಕು ಮತ್ತು ಜಿಲ್ಲಾವಾರು ವರದಿಗಾರರು,. ನಿರೂಪಕ, ನಿರೂಪಕಿಯರು, ಕಾಪಿ ಎಡಿಟರ್ಸ್, ವಿಡಿಯೋ ಎಡಿಟರ್ಸ್, ಕ್ಯಾಮರಾ ಮೆನ್ MCR & PCR ಟೆಕ್ನಿಷಿಯನ್ ಮತ್ತು ಪ್ರೋಗ್ರಾಮರ್ಸ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ. ಮೋ :
99805 32402

ತಕ್ಷಣ ಬೇಕಾಗಿದ್ದಾರೆ
ಮನೆಯಿಂದಲೇ ಸರಳವಾದ ಕೈ ಬರವಣಿಗೆಯ ಮೂಲಕ ಫಾರಂ ಫಿಲ್ಲಿಂಗ್ ಮತ್ತು ಡಾಟಾ ಎಂಟ್ರಿ ಮಾಡಿ ಸುಲಭವಾಗಿ ಪ್ರತಿವಾರ ಮತ್ತು ಪ್ರತಿ ತಿಂಗಳು ಕೈ ತುಂಬಾ ಹಣಗಳಿಸಿ. ಸಂಪರ್ಕಿಸಿರಿ
9663321516 / 9886652470

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

S.K.CONSTRUCTION
Diploma in Civil Auto CAD ಗೊತ್ತಿರುವ ಮಹಿಳೆಯರು ಮಾತ್ರ
8073015759

WANTED TRAINED TEACHERS
1) Principal (3 to 5 years experience in CBSC school),
2) BA B sc/ M.A, M.Sc with B.Ed
3) BCA/MCA/NTT. Free Accomodation,
SAI NALANDA CENTRAL SCHOOL K R NAGAR, MYSORE DISTRICT. 571602. Email:nalandakrn@gmail.com, Web:www.sainalanda.com CONTACT:
8722073456 / 8722093456

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

S.M. GOLD
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೆ ಬಿಡಿಸಿ ಮಾರುಕಟ್ಟೆ ಬೆಲೆಯಲ್ಲಿ ತೆಗೆದು ಕೊಂಡು ಉಳಿದ ಹಣವನ್ನು ಕೊಡುತ್ತೇವೆ. ನಮ್ಮಲ್ಲಿ ಕಡಿಮೆ ವೆಸ್ಟೇಜಲ್ಲಿ ಚಿನ್ನವನ್ನು ಮಾಡಿಸಲು ಅವಕಾಶವಿದೆ. (T&C) ಕೂಡಲೇ ಸಂಪರ್ಕಿಸಿ –
8050518881

AFFIDAVIT
I, Syed Umer, residing at Door No. 49, 1st Floor, 1st Stage, 6th Cross, Udayagiri, Mysore-570 019, have changed my name as Syed Umar, on my own free will, in front of Notary Asadulla Khan on 19.5.2022. I declare that I shall at all times hereafter in all records, deeds and writings and in all proceedings, dealings and transactions, private as upon all occasions whatsoever use and sign the name of Syed Umar.
Sd/- Syed Umar

LOST
Frank Leo, No. 16, 8th Cross, KEB Colony, Udayagiri, Mysuru-570 019, lost of khata in & near Udayagiri, Khata No. 49, Property No. 17, 8th Cross, KEB Colony, Udayagiri, Mysore. Finders please contact:
Mob: 9986680666

ಕಳೆದಿದೆ
ಮರಿಗೌಡ, ನಂ. 2722, 2ನೇ ಕ್ರಾಸ್, ಕೆ.ಜಿ. ಕೊಪ್ಪಲ್, ಮೈಸೂರು, ನನಗೆ ಸೇರಿದ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಂಜೂರಾಗಿದ್ದ ನಿವೇಶನ ಸಂಖ್ಯೆ 24, ಸರಸ್ವತಿಪುರಂ, ಟಿ.ಕೊಪ್ಪಲು, ಮೈಸೂರು, ಅಸಲು ಮಂಜೂರಾತಿ ಪತ್ರ ಸಂಖ್ಯೆ: ಬಿ3 ಎಲ್: 102/68–69ನ್ನು ದಿನಾಂಕ: 24.01.2022 ರಂದು ಜೆರಾಕ್ಸ್ ಮಾಡಿಸಲು ಹೋಗುತ್ತಿದ್ದಾಗ ಆಕಸ್ಮಿಕವಾಗಿ ಬಿದ್ದು ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
Mob: 7019917646

BUSY BEES MONTESSORI (R) DEEPTI EDUCATIONAL TRUST (R)
#74 NISARGA 5 th cross, 3 rd main, 1st stage, Brindavan Extensions Mysuru- 570020
Admission open Year 2022-23
Pre Nursery, Nursery Lkg, Ukg
Time: 9.30AM to 2.30 PM Monday to Friday
9449074228

ಶಕ್ತಿ ಪ್ರಾಪರ್ಟೀಸ್
ಹಳೆ ಮನೆ 20x30 ಮಾರಾಟಕ್ಕಿದೆ. ಮನೆ ಹಾಗೂ ಕಮರ್ಷಿಯಲ್ ಬಿಲ್ಡಿಂಗ್ ಬೇಕಾಗಿದೆ.
9731135881 / 9740289998

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು.
9916908454

WANTED
For Reputed Guarage in Mysore
1) Experience Mechanics
2) Helapers
Nishan Cars, Opp. Sara Convention Hall (Ring Road), Dattagalli, Mysore.
9845537863
8660129178

REQUIRED
Female Telecallers & Male Field Executive for Financial Institutions. Qualification-SSLC & PUC Female 7 to 8k Salary Computer Skills, male 10 to 12k field work, SLV Enterprises, #2060, Vaibhav Complex, 2nd Floor, Near 101 Ganapathi Temple, Agrahara, Mysuru.
9513965656 / 0821-4281421

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ ಮೈಸೂರು – 570015
8088887802

NGO SERVICES
* Society / Trust Regn.
* Renewal Documents for Societies.
* Income Tax Filing
* Income Tax Regn (12AB & 80G)
BUSINESS SOLUTIONS
9972000268

ವಾಟರ್ ಪ್ರೂಫಿಂಗ್ ಕೆಲಸ
ತಾರಸಿ ಮತ್ತು ಕಟ್ಟಡದ ಸೋರಿಕೆಯನ್ನು ಶಾಶ್ವತವಾಗಿ ನಿಲ್ಲಿಸುವ ಕಾಮಗಾರಿ ಕೆಲಸಗಳನ್ನು ಗ್ಯಾರಂಟಿಯೊಂದಿಗೆ ಮಾಡಲಾಗುತ್ತದೆ. ತಾರಸಿ ಸೋರುವುದನ್ನು ಶಾಶ್ವತವಾಗಿ ನಿಲ್ಲಿಸುತ್ತೇವೆ.
(Water Proofing Expert)
9916021886(w)
9480900009

JOB DESIGNATION
STORE KEEPER
Qualification: SSLC / Diploma Holder, Location: Belagola IND. Area Meatagalli, Mysore.
9880021111

ಬಾಡಿಗೆಗೆ ಇದೆ
(ಮನೆ ಮತ್ತು ಗೋಡೌನ್)
2BHK ಹಾಗೂ 6 ಮಳಿಗೆಗಳೂ ಇದೆ. ರೂಪನಗರ, (ಬೋಗಾದಿ) ಮೈಸೂರು – 570026
9148152792
7353171785

CONTACT FOR
* IT Returns Filing
* GST Regn & Returns Filing
* Tally Accounting Services
* Project Report
* TDS, PAN, TAN, DSC, DIN
BUSINESS SOLUTIONS
9972000268

ಹೋಟೆಲ್ ಕೆಲಸಕ್ಕೆ
ಸಪ್ಲೇಯರ್ಸ್ ಬೇಕಾಗಿದ್ದಾರೆ. ಸ್ಥಳ: ಇಲವಾಲದ ಹತ್ತಿರ, ಮೈಸೂರು. ಆಕರ್ಷಕ ಸಂಬಳ ನೀಡಲಾಗುವುದು
8197459398

ಹೊಸಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 3ನೇ ಹಂತ, 20x30, E/F, 11 ಚದರ, 3BHK, ಅತ್ಯಾಧುನಿಕ ಸೌಲಭ್ಯವುಳ್ಳ, ಮನೆ, ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ. ಡ್ಯೂಪ್ಲೆಕ್ಸ್ ಮನೆ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9110650781

30x50 ಸೈಟು @ Rs.25 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಮೈದನಹಳ್ಳಿ ಪಕ್ಕ, ಇಲವಾಲ, ಹುಣಸೂರು ರೋಡ್, ಮೈಸೂರು
9538583377

ಬೇಕಾಗಿದ್ದಾರೆ
ಹುದ್ದೆ : ಲೇಡಿ ಆಡಿಟರ್ ಅಸಿಸ್ಟೆಂಟ್, ವಿದ್ಯಾರ್ಹತೆ: ಪಿಯುಸಿ ಅಥವಾ ಡಿಗ್ರಿ ಮತ್ತು Tally ಕಂಪ್ಯೂಟರ್ ಜ್ಞಾನ. ಸಂಪರ್ಕಿಸಿ:– ಹೆಬ್ಬಾಳ್, ಕುಂಬಾರಕೊಪ್ಪಲು, ವಿಜಯನಗರ ಮೊದಲನೇ ಹಂತ, ಅಭ್ಯರ್ಥಿಗಳಿಗೆ ಮೊದಲ ಆದ್ಯತೆ.
9742168396

ಸೈಟು ಮಾರಾಟಕ್ಕಿದೆ
20x30, MUDA Alloted, ಸಾತಗಳ್ಳಿ 'A' Zone
9740129802

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ GRS ಫ್ಯಾಂಟಸಿ ಪಾರ್ಕ್ ಹಿಂಭಾಗ ಕಾರ್ಖಾನೆಗೆ 8 Hrs ದಿನಕ್ಕೆ 3 ಪಾಳಿಯಲ್ಲಿ ಕೆಲಸ ಮಾಡುವ ವಿದ್ಯಾವಂತ ಹಾಗೂ ಅನುಭವವಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ಹಾಗೂ ಮಹಿಳೆಯರಿಗೆ ಪ್ಯಾಕಿಂಗ್ ಸೂಪರ್‌ವೈಸರ್ ಕಂಪ್ಯೂಟರ್ ನಾಲೆಡ್ಜ್ ಇರುವವರಿಗೆ ಆದ್ಯತೆ. ವಯಸ್ಸು 45 ರೊಳಗೆ, ವೇತನ ಮಾಸಿಕ 14,000/- ರೂ. ಹಾಗೂ ESI & PF ಮಾಸಿಕ ರಜಾ ಸೌಲಭ್ಯವಿರುತ್ತದೆ.
9731976148

ನುರಿತ ವೈದ್ಯರು ಬೇಕಾಗಿದ್ದಾರೆ
ಪಿರಿಯಾಪಟ್ಟಣದ ಟೌನ್ ಬೆಟ್ಟದಪುರ ಸರ್ಕಲ್‌ನಲ್ಲಿ ನೂತನವಾಗಿ ಆರಂಭಗೊಂಡಿರುವ ಆರ್ಯ ಕ್ಲಿನಿಕ್‌ಗೆ ನುರಿತ ಅನುಭವ ಇರುವ BAMS, MBBS ವೈದ್ಯರು ಬೇಕಾಗಿದ್ದಾರೆ.ಆಸಕ್ತರು ಸಂಪರ್ಕಿಸಿ: ಆರ್ಯ ಮೆಡಿಕಲ್ ಬೆಟ್ಟದಪುರ ಸರ್ಕಲ್, ಪಿರಿಯಾಪಟ್ಟಣ
7892608503 / 9972978239

ತಕ್ಷಣ ಬೇಕಾಗಿದ್ದಾರೆ
7/8/9/10ನೇ ತರಗತಿ, ಪಿ.ಯು.ಸಿ, ಐ.ಟಿ.ಐ ಹಾಗೂ ಡಿಪ್ಲೋಮೊ, ಡಿಗ್ರಿ ಉತ್ತೀರ್ಣ ಅಥವಾ ಅನುತ್ತೀರ್ಣಗೊಂಡಿರುವ ಯುವಕರು ತಕ್ಷಣ ಬೇಕಾಗಿದ್ದಾರೆ. ವೇತನ ಸುಮಾರು 10,800 ರಿಂದ 15,000 ಸಾವಿರದವರೆಗೆ ದೊರೆಯುತ್ತದೆ ಹಾಗೂ ESI, PF, ತಿಂಡಿ, ಊಟ ಇರುತ್ತದೆ.
SRI SAI ENTERPRISES
9686963526 / 9686965326
9945852004 / 9686453136

SITE FOR SALE
Brahmin Layout Sapthagiri Nagar
30x40 E/F, 30x40 W/F
C Block
9886481265

WANTED
Security Field Officer (Male) Candidate, Experience Should have 2-3 Years, Fresher's, BSF & Ex-Serviceman can also apply With Good Communication
9513999755

WANTED
Trained Teachers for Nursery and Primary School, English Medium, Send Biodata to E-Mail: rajegowdapdet@gmail.com
Walk in interview on 25/05/ 2022 Patel Devegowda School, Gopalapura, Mysore
Secretary: 9980913299

ಉಚಿತ ಹೊಲಿಗೆ ಕೌಶಲ್ಯ ತರಬೇತಿ
ತರಬೇತಿ ಅವಧಿ 3 ದಿನಗಳು, ತರಬೇತಿ ವಿವರ: Stitching, Zigjag, Overlock, Basic Machine Service, Machine Maintance ಕೇವಲ 100 ಅಭ್ಯರ್ಥಿಗಳಿಗೆ ಮಾತ್ರ, (ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ) ಗಾನವಿ ಇಂಟರ್ನ್ಯಾಷನಲ್, ಸುಬರ್ಬ್ ಬಸ್ ಸ್ಟ್ಯಾಂಡ್, ಸಂಗಮ್ ಥಿಯೇಟರ್ ರಸ್ತೆ.
9590666328 / 6360737581
9900283883

ಟೇಲರ್ಸ್ ಮತ್ತು ಹೆಲ್ಪರ್ಸ್‌ಗಳು ಬೇಕಾಗಿದ್ದಾರೆ
ಕೆಲಸ ಬನ್ನಿಮಂಟಪ, ಕೆಲಸದ ಸಮಯ: 9.00am to 6.00pm
8884179981

ಬೇಕಾಗಿದ್ದಾರೆ
ಪಿಗ್ಮಿ ಏಜೆಂಟ್, ಫೀಲ್ಡ್ ಎಕ್ಸಿಕ್ಯೂಟಿವ್, ಪಾರ್ಟ್ ಟೈಮ್, ಫುಲ್ ಟೈಮ್, ಶ್ರೀ ಸಿದ್ಧಾರ್ಥ ಹುಣಸೂರು ಅರ್ಬನ್ ಕ್ರೆಡಿಟ್ ಸೌಹಾರ್ದ ಕೋ – ಆಪರೇಟಿವ್ ಲಿ., ಬಿ.ಹೆಚ್.ರಸ್ತೆ, ಹುಣಸೂರು.
8296281922
8296280922

ಮನೆ ಬಾಡಿಗೆಗೆ ಬೇಕಾಗಿದೆ
ಗ್ರೌಂಡ್ ಫ್ಲೋರ್ ಅಥವಾ ಇಂಡಿಪೆಂಡೆಂಟ್ ಆಗಿರುವ 1BHK ಅಥವಾ 2BHK ಮನೆ ಒಂದು ತಿಂಗಳು ಅಥವಾ 2 ತಿಂಗಳ ಸಲುವಾಗಿ ಬಾಡಿಗೆಗೆ ಬೇಕಾಗಿದೆ. ಕಾರ್ ನಿಲ್ಲಿಸಲು ತಕ್ಕಮಟ್ಟಿಗೆ ಸ್ಥಳ ಇರಬೇಕು. (ಸಸ್ಯಹಾರಿಗೆ)
9900619223

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 15000 ದಿಂದ 18000 (ESI, PF ಸೌಲಭ್ಯ ಇರುತ್ತದೆ)
9513253739 / 9513253747

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time/ Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF - ESI, Age:- above 30 Years.
9008799156
9845515094

40x60 E/F ಸೈಟು @ Rs.28 ಲಕ್ಷ
ಶ್ರೀ ಸಪ್ತಮಾತೃಕಾ ಲೇಔಟ್ 2ನೇ ಹಂತ, MUDA Approved Layout ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

VOKKALIGA MATRIMONY
Degree /BE/MBA/MCA/ MBBS/Govt. Employee ವಧು – ವರರಿಗಾಗಿ ಸಂಪರ್ಕಿಸಿ
(Contact For all Caste)
9343175000

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ, ಕುವೆಂಪುನಗರ, K G Koppal ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 15,500/–, ವಯೋಮಿತಿ: 45 ವರ್ಷ ಒಳಗೆ, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:
9620667819 / 9880727819

ಕೊಳ್ಳೇಗಾಲದ ಜ್ಯೋತಿಷ್ಯರು
ವಶೀ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ನಂಬಿ ಬನ್ನಿ. ವಿಳಾಸ (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳು, ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ. ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹಿಸಿ

ಪ್ರಗತಿಪರ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ





ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹಿಸಿ ಹೆಚ್.ಡಿ.ಕೋಟೆ, ತಿ.ನರಸೀಪುರ, ನಂಜನಗೂಡಲ್ಲಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ: ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ವರದಿಯಂತೆ ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಮಹರ್ಷಿ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ನಡೆಸುತ್ತಿರುವ ಅಹೋರಾತ್ರಿ ಧರಣಿ ಬೆಂಬಲಿಸಿ ತಾಲೂಕು ನಾಯಕರ ಸಂಘದಿಂದ ಪಟ್ಟಣದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಸಾವಿರಾರು ನಾಯಕ ಸಮುದಾಯದವರು ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಬಳಿ ಜಮಾಯಿಸಿ ನಾಗಮೋಹನ್‌ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ, ಮೆರವಣಿಗೆಯಲ್ಲಿ ಮಾರುಕಟ್ಟೆ ರಸ್ತೆ, ಲಿಂಕ್ ರಸ್ತೆ, ಕಾಲೇಜು ರಸ್ತೆ ಮೂಲಕ ತಾಲೂಕು ಕಚೇರಿಗೆ ತೆರಳಿ ತಹಶೀಲ್ದಾರ್ ಗಿರಿಜಾ ಅವರಿಗೆ ಮನವಿ ಸಲ್ಲಿಸಿದರು.

ಭಗವಾನ್ ಚಿತ್ರಮಂದಿರ, ಖಾಸಗಿ ಬಸ್ ನಿಲ್ದಾಣ ಹಾಗೂ ಕಾಲೇಜು ವೃತ್ತಗಳಲ್ಲಿ ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿ ಪಡಿಸುವಂತೆ ಆಗ್ರಹಿಸಿದರಲ್ಲದೇ ನಾಗಮೋಹನ್‌ದಾಸ್ ವರದಿ ಜಾರಿ ಮಾಡಲು ವಿಳಂಬ ಧೋರಣೆ ಅನುಸರಿಸುತ್ತಿರುವ ಸರ್ಕಾರದ ನಡೆ ಖಂಡಿಸಿದರು.

ತಾಲೂಕು ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದರೂ, ಮೀಸಲಾತಿ ಹೆಚ್ಚಿಸಲು ಸರ್ಕಾರ ಮುಂದಾಗಿಲ್ಲ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಸಲ್ಲಿಕೆಯಾಗಿ ಒಂದು ವರ್ಷ ಒಂಭತ್ತು ತಿಂಗಳು ಕಳೆದರೂ, ರಾಜ್ಯ ಸರ್ಕಾರ ವರದಿ ಜಾರಿಗೊಳಿಸದೇ ಸಚಿವ ಸಂಪುಟದ ಉಪ ಸಮಿತಿ, ನಂತರ ನಿವೃತ್ತ ನ್ಯಾ.ಸುಭಾಷ್ ಅಡಿಯವರ ತ್ರಿಸದಸ್ಯ ಸಮಿತಿಗೆ ಒಪ್ಪಿಸಿ ವಿಳಂಬ ಮಾಡುತ್ತಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಮತ್ತು ನಿರುದ್ಯೋಗಿಗಳಿಗೆ ಅನ್ಯಾಯವಾಗಿದೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ನಾಗಮೋಹನ್‌ದಾಸ್ ವರದಿ ಜಾರಿಗೆ ಆಗ್ರಹಿಸಿ ಕಳೆದ 100 ದಿನಗಳಿಂದಲೂ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ, ಸರ್ಕಾರ ಈ ಬಗ್ಗೆ ಗಮನ ಹರಿಸದೇ ನಿರ್ಲಕ್ಷ್ಯ ವಹಿಸಿರುವುದು ಇಡೀ ಸಮುದಾಯಕ್ಕೆ ಮಾಡಿದ ಅಪಮಾನ. ಕೂಡಲೇ ಮುಖ್ಯಮಂತ್ರಿ ಬೊಮ್ಮಾಯಿಯವರು ಜನಸಂಖ್ಯೆಗೆ ಅನುಗುಣವಾಗಿ ಪ.ಜಾತಿಯವರಿಗೆ ಶೇ.15 ರಿಂದ ಶೇ.18ಕ್ಕೆ ಮತ್ತು ಪ.ಪಂಗಡದವರಿಗೆ ಶೇ.3 ರಿಂದ ಶೇ.7.5ಕ್ಕೆ ಹೆಚ್ಚಳ ಮಾಡಲು ಕ್ರಮ ವಹಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು. ಜಿಪಂ ಮಾಜಿ ಸದಸ್ಯ ಡಾ.ಕೆ.ಸಿ.ಲೋಕೇಶ್ ನಾಯಕ್, ಟಿ.ಎಚ್.ಮಂಜುನಾಥ್, ಸುಧಾಮಣಿ, ನಾಗರಾಜು, ಮಹದೇವಯ್ಯ, ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಗೋವಿಂದರಾಜು, ವಾಸು, ಸಿದ್ದರಾಜು, ಮಹೇಶ್, ಡೈರಿ ಕಾರ್ಯದರ್ಶಿ ನಾಗೇಂದ್ರ, ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಪ್ರಕಾಶ್, ಎ.ಜೆ.ವೆಂಕಟೇಶ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂ.ಜೆ.ಶಿವಸ್ವಾಮಿ, ನಾಗರಾಜು, ಸುಂದರನಾಯಕ, ಹೊನ್ನಯ್ಯ, ಡೈರಿ ಮಾಜಿ ಅಧ್ಯಕ್ಷ ಸೋಮಣ್ಣ, ಕರಿಯಪ್ಪ, ಡಾ.ಎಂ.ಮಾದೇಶ್, ವಾಸು, ವೆಂಕಟೇಶ್, ಬಿಎಸ್‌ಪಿ ಪುಟ್ಟಸ್ವಾಮಿ, ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಕೃಷ್ಣಮೂರ್ತಿ, ಶಿವಕುಮಾರ್, ನಾಗರಾಜು, ರಘು, ಮಹದೇವ್, ರಮೇಶ್, ಮಹದೇವಸ್ವಾಮಿ, ಕುಮಾರ್, ಬಸವರಾಜು, ಯಜಮಾನ್ ಮಹದೇವಪ್ಪ, ಮಲ್ಲಣ್ಣ, ನಾಗರಾಜು ಸೇರಿದಂತೆ ಇತರರು ಪ್ರತಿಭಟನೆಯಲ್ಲಿದ್ದರು.

ನಂಜನಗೂಡು: ಪರಿಶಿಷ್ಟ ಜಾತಿ, ಪಂಗಡದವರ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಬಳಿಕ ಅಲ್ಲಿಂದ ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜ್ ಮಾತನಾಡಿದರು. ಪ್ರತಿಭಟನೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶರಾಜ್, ಬಿ.ಎಂ. ರಾಮು, ಸುಬ್ಬಣ್ಣ, ವಿಜಯಕುಮಾರ್, ಮಲ್ಲೇಶ್, ನಾರಾಯಣ, ಅರುಣ್, ಚಿಕ್ಕರಂಗನಾಯಕ, ಟಿ.ಆರ್.ವಿದ್ಯಾಸಾಗರ್ ಇದ್ದರು.

ಹೆಚ್.ಡಿ.ಕೋಟೆ: ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ಜಾರಿಗೆ ಆಗ್ರಹಿಸಿ ತಾಲೂಕಿನ ಪರಿಶಿಷ್ಟ ಜಾತಿ, ಪಂಗಡ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಬಳಿಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ಮಿನಿ ವಿಧಾನಸೌಧ ತಲುಪಿ ತಹಸೀಲ್ದಾರ್ ರತ್ನಾಂಬಿಕೆ ಅವರಿಗೆ ಮನವಿ ಸಲ್ಲಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರಚನೆಯಾಗಿದ್ದ ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ನೇತೃತ್ವದ ಆಯೋಗವು ಸರ್ಕಾರಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಶೇ.15ರಷ್ಟು ಮೀಸಲಾತಿ ಇರುವ ಪರಿಶಿಷ್ಟ ಪಂಗಡಕ್ಕೆ ಶೇ.3ರಷ್ಟು ಮೀಸಲಾತಿ ಹೆಚ್ಚಿಸುವ ಮೂಲಕ ಶೇ.18ಕ್ಕೆ ಏರಿಸಬೇಕು. ಪರಿಶಿಷ್ಟ ಪಂಗಡಕ್ಕೆ ಶೇ.3 ಮೀಸಲಾತಿ ಇದ್ದು, ಶೇ.4.50 ರಷ್ಟು ಮೀಸಲಾತಿ ಹೆಚ್ಚಿಸಿ ಶೇ.7.5ಕ್ಕೆ ಏರಿಸಬೇಕು ಎಂಬ ವರದಿ ಕೊಟ್ಟಿರುತ್ತಾರೆ. ಆದರೆ ಸರ್ಕಾರ ಇದುವರೆಗೂ ನಾಗಮೋಹನ್ ದಾಸ್ ವರದಿಗೆ ಕಿಂಚಿತ್ತೂ ಬೆಲೆ ಕೊಟ್ಟಿಲ್ಲ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ತಾಲೂಕು ಬಾಬು ಜಗಜೀವನ ರಾಂ ವೇದಿಕೆ ಅಧ್ಯಕ್ಷ ನಾಗರಾಜು, ನಾಯಕ ಸಂಘದ ಅಧ್ಯಕ್ಷ ದೊಡ್ಡನಾಯಕ, ಉಪಾಧ್ಯಕ್ಷ ಜಯಪ್ರಕಾಶ್ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ನಾಗರಾಜ್, ಆನಂದ್, ಜಿ.ವಿ.ಸೀತಾರಾಮ್, ರಾಜನಾಯಕ, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರ ನಾಯಕ, ಹೆಚ್.ಸಿ.ಮಂಜು, ಭಾಗ್ಯಲಕ್ಷ್ಮಿ, ಮುಖಂಡರಾದ ಚಾ.ನಂಜುಂಡಮೂರ್ತಿ, ಈರೇಗೌಡ, ನಾಗರಾಜು, ಕೃಷ್ಣ, ಪುಟ್ಟಬಸವನಾಯಕ, ನಾಗನಾಯ್ಕ, ಅಂಕ ನಾಯಕ ಇನ್ನಿತರರಿದ್ದರು.



ಹುಣಸೂರಲ್ಲೂ ಪ್ರತಿಭಟನೆ ನಡೆಸಲಾಯಿತು.

ಸರಗೂರು: ಪ.ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ನ್ಯಾ.ಎಚ್.ಎನ್.ನಾಗಮೋಹನ್‌ದಾಸ್ ವರದಿ ಜಾರಿಗೊಳಿಸುವಂತೆ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಬೆಂಬಲಿಸಿ ಪಟ್ಟಣದಲ್ಲಿ ತಾಲೂಕಿನ ನಾಯಕ ಸಂಘಟನೆ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್ ಚಲುವರಾಜು ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ತಾಲೂಕು ನಾಯಕ ಸಂಘದ ಅಧ್ಯಕ್ಷ ಬಸವರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀನಿವಾಸ್, ಅಂಕನಾಯಕ, ಕಾರ್ಯದರ್ಶಿ ಸಿದ್ದರಾಜು, ಖಜಾಂಚಿ ಎಸ್.ಎ.ನಾಗೇಂದ್ರ, ನಿರ್ದೇಶಕರಾದ ಪಾಪಣ್ಣ, ಪಿ.ಬೆಟ್ಟನಾಯಕ, ಕುಮಾರ್, ಸತ್ಯರಾಜ್, ಕಾನೂನು ಸಲಹೆಗಾರ ಶಂಕರ್, ಸಂವಿಧಾನ ರಕ್ಷಾ ಸಮಿತಿ ಮಹೇಶ್, ಶಿವಣ್ಣ, ಮಲ್ಲೇಶ್, ಆದಿಜಾಂಬವ ಸಮಿತಿ ಬೆಟ್ಟಸ್ವಾಮಿ, ಗೌರವಾಧ್ಯಕ್ಷ ಬಸವನಾಯಕ, ನಾಯಕ ಸಮಾಜದ ಯಜಮಾನರಾದ ಚನ್ನಪ್ಪನಾಯಕ, ಬೆಟ್ಟನಾಯಕ, ಶಂಭುಲಿಂಗ ನಾಯಕ, ಮುಖಂಡರಾದ ರಂಗಪ್ಪನಾಯಕ, ರವಿಕುಮಾರ್, ನವೀನ್, ರಮೇಶ್, ಸಿ.ಬಸವರಾಜು, ಎಂ.ನಾಗರಾಜು ಇನ್ನಿತರರಿದ್ದರು.

ಹುಣಸೂರು: ಪ.ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ನ್ಯಾ.ಎಚ್.ಎನ್.ನಾಗಮೋಹನ್‌ದಾಸ್ ವರದಿ ಜಾರಿಗೊಳಿಸುವಂತೆ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಬೆಂಬಲಿಸಿ ನಗರದ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮೈಸೂರು–ಮಂಗಳೂರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಬಳಿಕ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ನಾಯಕ ಸಮಾಜದ ಅಧ್ಯಕ್ಷ ಕೆ.ಎಸ್.ಅಣ್ಣಯ್ಯನಾಯಕ ಮಾತನಾಡಿದರು. ಪ್ರತಿಭಟನೆಯಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್, ಶಿವಣ್ಣ, ಕಾಳಿದಾಸನಾಯಕ, ಜಿಪಂ ಮಾಜಿ ಸದಸ್ಯ ದೇವರಾಜು, ಸಿಪಿಎಂ ಮುಖಂಡ ವಿ.ಬಸವರಾಜು, ಡಿ.ಕುಮಾರ್, ತಾಲೂಕು ನಾಯಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ರವಿ, ಗೌರವಾಧ್ಯಕ್ಷ ಚೌಡನಾಯಕ, ಶ್ರೀನಿವಾಸ್, ಟಿ.ಸ್ವಾಮಿ, ಸಣ್ಣಸ್ವಾಮಿನಾಯಕ, ಜವರನಾಯಕ, ಪ್ರಭಾಕರ್ ಹಾಗೂ ರವಿ, ಮಯೂರ ನಾಯಕ, ನಗರಸಭೆ ಉಪಾಧ್ಯಕ್ಷ ದೇವನಾಯಕ, ಸದಸ್ಯ ದೇವರಾಜು, ಬಸವರಾಜು, ಮಾಜಿ ಯುವ ಅಧ್ಯಕ್ಷ ಕುಮಾರ್, ರಘು, ಜೆಡಿಎಸ್ ತಾಲೂಕು ಅಧ್ಯಕ್ಷ ಸೋಮಶೇಖರ್, ದೇವರಾಜ್ ಒಡೆಯರ್, ಉಪಾಧ್ಯಕ್ಷ, ದಲಿತ ಮುಖಂಡರಾದ ಆನಂದಸ್ವಾಮಿ, ನಿಂಗರಾಜ್ ಮಲ್ಲಾಡಿ, ಬಸವಲಿಂಗಯ್ಯ, ಭಾಸ್ಕರ್, ಮಹೇಶ್, ನಾಗರಾಜ್, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಗೋವಿಂದನಾಯಕ, ಎಸ್.ಕೃಷ್ಣನಾಯಕ, ನಾಗರಾಜು, ಆದಿಜಾಂಬವ ಸಂಘದ ಅಧ್ಯಕ್ಷ ಜೆ.ಮಹದೇವು, ಚಿಕ್ಕಣ್ಣ ಇನ್ನಿತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಫೇಲಾದ ವಿದ್ಯಾರ್ಥಿ ಆತ್ಮಹತ್ಯೆ

ಸಂಜಯ್ ಮನೆಗೆ ಶಾಸಕ, ಶಿಕ್ಷಣಾಧಿಕಾರಿಗಳ ಭೇಟಿ, ಸಾಂತ್ವನ



ಹನಗೋಡು, ಮೇ 20(ಮಹೇಶ್)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಹಿನ್ನಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ ಸಂಜಯ್ ಮನೆಗೆ ಶಾಸಕ ಹೆಚ್.ಪಿ.ಮಂಜುನಾಥ್, ಬಿಇಓ ಎಸ್.ಪಿ.ನಾಗರಾಜ್, ಸಹಾಯಕ ಶಿಕ್ಷಣಾಧಿಕಾರಿ ಸಂತೋಷ್, ಶಾಲೆಯ ಶಿಕ್ಷಕ ವೃಂದ ಶುಕ್ರವಾರ ಭೇಟಿ ನೀಡಿ ವಿದ್ಯಾರ್ಥಿ ಸಂಜಯ್ ಅಂತಿಮ ದರ್ಶನ ಪಡೆದು ಪೋಷಕರಿಗೆ ಸಾಂತ್ವನ ಹೇಳಿದರು.

ನಂತರ ಮಾತನಾಡಿದ ಶಾಸಕರು, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಫೇಲಾದರೆ ಅದು ಜೀವನದ ಸೋಲಲ್ಲ. ಈ ಪರೀಕ್ಷೆಗಳಲ್ಲಿ ಫೇಲಾದ ಸಹಸ್ರಾರು ಮಂದಿ ಮಹನೀಯರು ಕೃಷಿ, ಕ್ರೀಡೆ, ಸಾಹಿತ್ಯ, ಕೈಗಾರಿಕೆ, ವ್ಯಾಪಾರ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಪರೀಕ್ಷೆಯಲ್ಲಿ ಫೇಲಾದೆ ಎಂದು ಆತ್ಮಸ್ಥೈರ್ಯ ಕಳೆದುಕೊಳ್ಳದೇ ನಿಮಗೆ ಜನ್ಮ ನೀಡಿ, ಕಷ್ಟಪಟ್ಟು ಸಾಕಿದ ತಂದೆ–ತಾಯಿಗಳನ್ನು ನೆನಪಿಸಿಕೊಳ್ಳಿ. ಯಾವುದೇ ಕಾರಣಕ್ಕೂ ಪ್ರಾಣ ಕಳೆದುಕೊಳ್ಳುವ ಕೆಟ್ಟ ನಿರ್ಧಾರ ಕೈಗೊಳ್ಳಬೇಡಿ. ಪ್ರಪಂಚ ಬಹಳ ವಿಶಾಲವಾಗಿದೆ. ಸಾಧಿಸುವ ಛಲವಿದ್ದರೇ ಏನು ಬೇಕಾದರೂ ಸಾಧಿಸಬಹುದು. ಆದ್ದರಿಂದ ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳು ಆತ್ಮಹತ್ಯೆ ದಾರಿ ಹಿಡಿಯಬೇಡಿ ಎಂದು ಮನವಿ ಮಾಡಿದರು.

ಇದೇ ವೇಳೆ ಸಂಜಯ್ ತಂಗಿ ಸಂಧ್ಯಾಳ ವಿದ್ಯಾಭ್ಯಾಸಕ್ಕಾಗಿ ಆಕೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿ 50 ಸಾವಿರ ರೂ. ಠೇವಣಿ ಇಡುವುದಾಗಿ ತಿಳಿಸಿದರು.

ವಿದ್ಯುತ್ ಸ್ಪರ್ಶ: ಗುತ್ತಿಗೆ ಕಾರ್ಮಿಕ ಸಾವು

ನಂಜನಗೂಡು, ಮೇ 20– ವಿದ್ಯುತ್ ಸ್ಪರ್ಶಿಸಿ ಗುತ್ತಿಗೆ ಕಾರ್ಮಿಕನೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಹುಲ್ಲಹಳ್ಳಿಯಲ್ಲಿ ನಡೆದಿದೆ.



ತಾಲೂಕಿನ ಮಲ್ಲಹಳ್ಳಿ ಗ್ರಾಮದ ನಿವಾಸಿ ಮಹದೇವ(24) ಸಾವನ್ನಪ್ಪಿದವರು. ಈತ ಶುಕ್ರವಾರ ಹುಲ್ಲಹಳ್ಳಿ ಹೊರವಲಯದಲ್ಲಿ ಟ್ರಾನ್ಸ್‌ಫಾರ್ಮರ್ ಬದಲಾವಣೆ ಕಾರ್ಯದಲ್ಲಿ ನಿರತನಾಗಿದ್ದ ಎನ್ನಲಾಗಿದೆ. ಈ ವೇಳೆ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದರು.

ಪ್ರತಿಭಟನೆ: ಗುತ್ತಿಗೆ ಕಾರ್ಮಿಕ ಮಹದೇವನ ಸಾವಿಗೆ ವಿದ್ಯುತ್ ಇಲಾಖೆ ಅಧಿಕಾರಿಗಳೇ ಕಾರಣ ಎಂದು ಆರೋಪಿಸಿ ರೈತ ಸಂಘ, ದಸಂಸ ಸೇರಿ ದಂತೆ ಮೃತನ ಕುಟುಂಬದವರು ಹುಲ್ಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ಎದುರು ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ದಸಂಸ ಮುಖಂಡ ಮಲ್ಲಹಳ್ಳಿ ನಾರಾಯಣ್ ಮಾತನಾಡಿ, ವಿದ್ಯುತ್ ಇಲಾಖೆ ನಿರ್ಲಕ್ಷ್ಯದಿಂದ ಕಾರ್ಮಿಕ ಮಹದೇವನ ಸಾವು ಸಂಭವಿಸಿದೆ. ಹೀಗಾಗಿ ಆತನ ಕುಟುಂಬಕ್ಕೆ 25 ಲಕ್ಷಕ್ಕೆ ಪರಿಹಾರ ನೀಡಬೇಕು. ಮೃತನ ಕುಟುಂಬದ ಸದಸ್ಯರೊಬ್ಬರಿಗೆ ಕೆಲಸ ನೀಡಬೇಕೆಂದು ಒತ್ತಾಯಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಚೆಸ್ಕಾಂ ಇಂಜಿನಿಯರ್ ಬೋರಾಜು ಹಾಗೂ ಸಿಬ್ಬಂದಿ ಮೃತನ ಕುಟುಂಬಕ್ಕೆ 3 ಲಕ್ಷ ರೂ.ಗಳ ಪರಿಹಾರ ಧನದ ಚೆಕ್ ವಿತರಿಸಿದರು. ಇನ್ನೂ ಹೆಚ್ಚಿನ ಪರಿಹಾರಧನ ನೀಡಲು ಕ್ರಮ ವಹಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಹುಣಸೂರು, ಮೇ 20(ಕೆಕೆ)– ತಾಲೂಕಿನ ರತ್ನಪುರಿ ಸರ್ಕಾರಿ ಕಿರಿಯ ಕಾಲೇಜಿನ ವಿದ್ಯಾರ್ಥಿನಿ ಡಿ.ಚಂದ್ರಕಲಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 606(ಶೇ.97) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಹೆಚ್.ಎನ್.ರಾಮಯ್ಯ ನಿಧನ



ಸಾಲಿಗ್ರಾಮ, ಮೇ 20– ತಾಲೂಕಿನ ದಡದಹಳ್ಳಿ ನಿವಾಸಿ ಹಾಗೂ ಅರಣ್ಯ ಇಲಾಖೆ ನಿವೃತ್ತ ನೌಕರ ಹೆಚ್.ಎನ್.ರಾಮಯ್ಯ (69) ಶುಕ್ರವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ, ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು.

ನಾಗೇಗೌಡ



ಹುಣಸೂರು, ಮೇ 20(ಕೆಕೆ)– ಚಲ್ಲಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ನಾಗೇಗೌಡ (45) ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಶ್ರೀಮಹದೇವಮ್ಮ ದೇವಸ್ಥಾನ ಪುನರ್ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಮಲ್ಕುಂಡಿ, ಹಂಪಾಪುರ ಮೇ 20(ಚನ್ನಪ್ಪ, ರಾಜೇಶ)– ನಂಜನಗೂಡು ತಾಲೂಕಿನ ಹುಚ್ಚಗಣಿ ಗ್ರಾಮದ ಅದಿದೇವತೆ ಶ್ರೀ ಮಹದೇವಮ್ಮನವರ ದೇವಾಲಯದ ಪುನರ್ ನಿರ್ಮಾಣ ಕಾಮಗಾರಿಗೆ ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮನಾಥ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ರಸ್ತೆ ಬದಿಯಲ್ಲಿರುವ ದೇವಾಲಯಗಳನ್ನು ನೆಲಸಮಗೊಳಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ ಹಿನ್ನೆಲೆಯಲ್ಲಿ ಶ್ರೀಮಹದೇವಮ್ಮನವರ ದೇವಾಲಯವನ್ನು ನೆಲಸಮಗೊಳಿಸಲಾಗಿತ್ತು. ಇದೀಗ ಗ್ರಾಮಸ್ಥರು ದೇವಾಲಯವನ್ನು ಪುನರ್ ನಿರ್ಮಾಣ ಮಾಡುತ್ತಿರುವುದು ಸಂತಸದ ವಿಷಯ. ಮುಂದಿನ ದಿನಗಳಲ್ಲಿ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ದೇವಿ ದೇವಸ್ಥಾನವನ್ನು ಅಚ್ಚುಕಟ್ಟಾಗಿ ನಿರ್ಮಿಸಲು ದೇವಾಲಯದ ಸೇವಾ ಟ್ರಸ್ಟ್‌ಗೆ ತಿಳಿಸಿದರು.

ಕಾರ್ಯ ಶಾಖಾ ಮಠದ ಶ್ರೀಮಹೇಶ್ವರ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ನಾಗಣ್ಣ, ಉಪಾಧ್ಯಕ್ಷ ನರಸಿಂಹೇಗೌಡ, ಖಜಾಂಚಿ ರಾಜೇಂದ್ರ, ಕಾರ್ಯದರ್ಶಿ ಬೇಗೂರೇಗೌಡ, ಮುಖಂಡರಾದ ಉದಯರವಿ, ನರಸಿಂಹೇಗೌಡ, ಗ್ರಾಪಂ ಸದಸ್ಯರಾದ ಬಸಪ್ಪ, ಸೋಮೇಶ್, ರಾಜೇಂದ್ರ ಹಾಗೂ ದೇವಸ್ಥಾನದ ಟ್ರಸ್ಟ್ ಪದಾಧಿಕಾರಿಗಳು, ಹುಚ್ಚಗಣಿ ಹಾಗೂ ಹರದನಹಳ್ಳಿ ಗ್ರಾಮದ ಮುಖಂಡರು ಸುತ್ತಮುತ್ತಲಿನ ಗ್ರಾಮದ ಭಕ್ತರು ಉಪಸ್ಥಿತರಿದ್ದರು.

ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಮತಯಾಚನೆ



ಕೆ.ಆರ್.ನಗರ, ಮೇ20(ಕೆಟಿಆರ್)– ರಾಜ್ಯದಲ್ಲಿ ಅಭಿವೃದ್ಧಿ ಪರವಾಗಿರುವ ಸರ್ಕಾರದ ಕೈ ಬಲಪಡಿಸಲು ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸುವಂತೆ ರಾಜ್ಯ ಖಾದಿ ನಿಗಮದ ಅಧ್ಯಕ್ಷ ಕೃಷ್ಣಪ್ಪಗೌಡ ಮತದಾರರಲ್ಲಿ ಮನವಿ ಮಾಡಿದರು.

ಪಟ್ಟಣದ ಸಂತಜೋಸೆಫ್ ಶಾಲೆಯಲ್ಲಿ ಮೈ.ವಿ.ರವಿಶಂಕರ್ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಈ ಬಾರಿ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪದವೀಧರ ಸದಸ್ಯರನ್ನು ನೋಂದಾಯಿಸುವುದರಿಂದ ಹಿಡಿದು ಬಿಜೆಪಿಗೆ ಮತ ನೀಡುವಂತೆ ಮನವೊಲಿಸಿದ್ದಾರೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳು ಮತ್ತು ಒಳ್ಳೆಯ ಅಭ್ಯರ್ಥಿಯಾಗಿರುವುದರಿಂದ ಮತದಾರರು ಬದಲಾವಣೆ ಬಯಸಿದ್ದಾರೆ. ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ನಾಯಕರ ಕಿತ್ತಾಟದಿಂದ ಬೇಸತ್ತಿರುವ ವಿದ್ಯಾವಂತ ಪದವೀಧರರು ಬಿಜೆಪಿ ಪರ ವಾಲಿದ್ದಾರೆ ಎಂದರು.

ಜಿಲ್ಲಾ ಬಿಜೆಪಿ ವಕ್ತಾರ ಮಿರ್ಲೆ ಶ್ರೀನಿವಾಸ್ ಗೌಡ ಮಾತನಾಡಿ, ಕೆ.ಆರ್.ನಗರ ತಾಲೂಕಿನ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಈಗಾಗಲೇ ಪ್ರತಿ ಗ್ರಾಮದಲ್ಲಿರುವ ಪದವೀಧರ ಮತದಾರರನ್ನು ಎರಡು ಮೂರು ಬಾರಿ ಭೇಟಿ ನೀಡಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯ ನಾಯಕರು, ಸಚಿವರು ಸೇರಿದಂತೆ ಪ್ರಮುಖರು ತಾಲೂಕಿಗೆ ಆಗಮಿಸಲಿದ್ದು, ಎಲ್ಲಾ ಶಕ್ತಿ ಕೇಂದ್ರಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಮತದಾರರನ್ನು ಮತದಾನ ಕೇಂದ್ರಕ್ಕೆ ಕರೆತಂದು ಮತ ಮಾಡಿಸುವ ಜವಾಬ್ದಾರಿ ನೀಡಲಿದ್ದಾರೆ ಎಂದರು. ಸೆನೆಟ್ ಸದಸ್ಯ ವಸಂತ್ ಕುಮಾರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ತಾಲೂಕು ಅಧ್ಯಕ್ಷ ಕೆ.ವೈ. ಮಂಜುನಾಥ್, ಪುರಸಭಾ ನಾಮನಿರ್ದೇಶಿತ ಸದಸ್ಯ ಉಮಾಶಂಕರ್, ಪ್ರಧಾನ ಕಾರ್ಯದರ್ಶಿ ಮಾರ್ಕಂಡೇಯ್ಯ, ಹೊಸೂರು ಅನಿಲ್, ಮುಖಂಡರಾದ ಹೆಚ್.ಪಿ. ಗೋಪಾಲ್, ಮಂಜುನಾಥ್, ಗೋಪಾಲ್ ರಾಜ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸಿಎಸ್‌ಕೆ ಮಣಿಸಿ 2ನೇ ಸ್ಥಾನಕ್ಕೇರಿದ ರಾಜಸ್ಥಾನ್

ಸೋಲಿನೊಂದಿಗೆ ಅಭಿಯಾನ ಅಂತ್ಯಗೊಳಿಸಿದ ಚೆನ್ನೈ



ಮುಂಬೈ, ಮೇ 20– ರವಿಚಂದ್ರನ್ ಅಶ್ವಿನ್ ಆಲ್‌ರೌಂಡ್ ಆಟ ಹಾಗೂ ಯಶಸ್ವಿ ಜೈಸ್ವಾಲ್ ಅರ್ಧಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ.

ಇದರೊಂದಿಗೆ ಆಡಿರುವ 14 ಪಂದ್ಯಗಳಲ್ಲಿ 9ನೇ ಗೆಲುವಿನೊಂದಿಗೆ 18 ಅಂಕ ಗಳಿಸಿ 2ನೇ ಸ್ಥಾನಕ್ಕೇರುವ ಮೂಲಕ ಪ್ಲೇಆಫ್‌ಗೆ ಲಗ್ಗೆ ಹಾಕಿದೆ ಮತ್ತೊಂದೆಡೆ ಸಿಎಸ್‌ಕೆ ಸೋಲಿನೊಂದಿಗೆ ತನ್ನ ಅಭಿಯಾನ ಕೊನೆಗೊಳಿಸಿದೆ.

ಇಲ್ಲಿನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 150 ರನ್ ಗಳಿಸಿತ್ತು. ತಂಡದ ಪರ ಮೊಯಿನ್ ಅಲಿ 57 ಎಸೆತಗಳಲ್ಲಿ 13 ಬೌಂಡರಿ, 3 ಸಿಕ್ಸರ್ ಒಳಗೊಂಡ 93 ರನ್‌ಗಳಿಸಿ ಮಿಂಚಿದರು. ಉಳಿದಂತೆ ಡಿವೋನ್ ಕಾನ್ವೆ 16, ಧೋನಿ 26 ರನ್ ಗಳಿಸಿದರು. ರಾಜಸ್ಥಾನ್ ಪರ ಯಜುವೇಂದ್ರ ಚಹಲ್, ಮೆಕಾಯ್ ತಲಾ 2, ಟೆಂಟ್ ಬೋಲ್ಟ್, ಅಶ್ವಿನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಬಳಿಕ 151 ರನ್‌ಗಳ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ಗುರಿ ತಲುಪಿತು. ತಂಡದ ಪರ ಯಶಸ್ವಿ ಜೈಸ್ವಾಲ್ 59, ನಾಯಕ ಸಂಜು ಸ್ಯಾಮ್ಸನ್ 15, ರವಿಚಂದ್ರನ್ ಅಶ್ವಿನ್ 40, ರಿಯಾನ್ ಪರಾಗ್ 10 ರನ್ ಗಳಿಸಿದರು. ಸಿಎಸ್‌ಕೆ ಪರ ಪ್ರಶಾಂತ್ ಸೋಲಂಕಿ 2, ಮಿಚೆಲ್ ಸ್ಯಾಂಟನರ್, ಸಿಮರ್ಜೀತ್ ಸಿಂಗ್ ತಲಾ ಒಂದೊಂದು ವಿಕೆಟ್ ಗಳಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ



ಬೆಟ್ಟದಪುರ, ಮೇ 20– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಸ್‌ಎಂಎಸ್ ಶಾಲೆಯ ವಿದ್ಯಾರ್ಥಿನಿ ಸೃಷ್ಟಿ 616 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿದ್ದು, ಈಕೆಯ ಸಾಧನೆಗೆ ಪೋಷಕರು ಹಾಗೂ ಶಿಕ್ಷಕರು ಸಂತಸ ವ್ಯಕ್ತಪಡಿಸಿದ್ದಾರೆ.


ಜನಸ್ನೇಹಿ ಯುವ ಮುಖಂಡರಾದ
ಎಲ್. ಚೌಡಪ್ಪ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು : ಎಲ್.ಚೌಡಪ್ಪರವರ ಸ್ನೇಹ ಬಳಗ
VISMAYA
ADVERTISERS